ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



ರಾಜ್ಯೋತ್ಸವ ಪ್ರಶಸ್ತಿ ವಿಜೇತ
ನ್ಯಾ. ನಾಗಮೋಹನ ದಾಸ್
ಅಭಿನಂದನೆಗಳು

ಸಂಪುಟ 11 | ಸಂಚಿಕೆ 46 | ಪುಟ 16 | ನವೆಂಬರ್ 6–12, 2017 | ರೂ. 10/- web: www.janashakthi.co.in e-mail : js_weekly@yahoo.com



ಅಕ್ಟೋಬರ್ ಕ್ರಾಂತಿ ಇಂದಿಗೂ ದಾರಿದೀಪ



ಕನ್ನಡ ಅಂದ್ರೆ ಬದುಕು... ಆಗುವುದು ಹೇಗೆ?



ಪರಿವರ್ತನಾ ಯಾತ್ರೆಗೆ ಹಗರಣಗಳ ಇಂಧನ

'ಖಾತಾ ವಿಭಜನೆ' ಮಾಫಿಯಾ : ತನಿಖೆ

ಐಕ್ಯತೆಯ ಪಂಜಿನ ಬೆಳಕಿನಲ್ಲಿ...





ನೋಟು ನಿಷೇಧದ ಡಕಾಯಿತಿಗೆ ಒಂದು ವರುಷ

ದೇಶವನ್ನು ಒಡೆಯುವ, ದೇಶವನ್ನು ಮಾರುವ ಕರಾಳ ಧೋರಣೆಗಳ ವಿರುದ್ಧ ಐಕ್ಯತೆಯ ಪಂಜಿನ ಬೆಳಕಿನಲ್ಲಿ ಪ್ರತಿಭಟನೆ: ಅಕ್ಟೋಬರ್30




ಅಕ್ಟೋಬರ್ 30ರಂದು ದೇಶಾದ್ಯಂತ 'ಜನ್ ಏಕತಾ ಮಶಾಲ್'(ಜನ ಐಕ್ಯತೆಯ ಪಂಜು)ನ ಪ್ರತಿಭಟನೆ ಬೆಳಗಿತು. ಪಂಜಿನ ಬೆಳಕಿನಲ್ಲಿ ಸಾವಿರಾರು ನಾಗರಿಕರು ದೇಶದ ಪ್ರಜಾಪ್ರಭುತ್ವ ಹಂದರವನ್ನು ಮತ್ತು ಜನತೆಯ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಪಣ ತೊಟ್ಟರು.

ಭಾರತದ ವರ್ಗ, ಸಾಮೂಹಿಕ ಮತ್ತು ಸಾಮಾಜಿಕ ಸಂಘಟನೆಗಳ ಅತಿ ದೊಡ್ಡ ವೇದಿಕೆಯಾದ 'ಜನ್ ಏಕತಾ ಜನ್ ಅಧಿಕಾರ್ ಆಂದೋಲನ' (ಜೆಇ-ಜೆಎಎ)ದ ಕರೆಗೆ ಓಗೊಟ್ಟು ದೇಶದ ರಾಜಧಾನಿ, ಮತ್ತು ಬೇಂಗಳೂರು ಸೇರಿದ ಹೆಚ್ಚಿನ ರಾಜ್ಯಗಳ ರಾಜಧಾನಿಗಳು ಮತ್ತು ಇತರ ಹಲವೆಡೆಗಳಲ್ಲಿ ದೇಶದ ಸಾವಿರಾರು ನಾಗರಿಕರು ಈ ಪ್ರತಿಭಟನೆ/ ಮೆರವಣಿಗೆಗಳಲ್ಲಿ ಭಾಗವಹಿಸಿ ಮೋದಿ ಸರಕಾರದ ಸಾಮ್ರಾಜ್ಯಶಾಹಿ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಧೋರಣೆಗಳು ಹಾಗು ದ್ವೇಷ ಮತ್ತು ಹಿಂಸಾಚಾರದ ಕೋಮುವಾದಿ ಮತ್ತು ವಿಭಜನಕಾರಿ ಧೋರಣೆಗಳ ವಿರುದ್ಧ ವಿವಿಧ ಜನಸಮೂಹಗಳ ಹೋರಾಟಗಳಿಗೆ ಸೌಹಾರ್ದ ವ್ಯಕ್ತಪಡಿಸಿದರು. ಬಿಜೆಪಿ ನೇತೃತ್ವದ ಸರಕಾರದ ನೋಟುರದ್ಧತಿ ಮತ್ತು ಜಿಎಸ್‌ಟಿಯಂತಹ ಜನ-ವಿರೋಧಿ ಧೋರಣೆಗಳ ವಿರುದ್ಧವಾದ ಹಾಗೂ ಕಾರ್ಮಿಕ-ಪರ ಹಾಗೂ ರೈತಪರವಾದ ಘೋಷಣೆಗಳು ಪಂಜುಗಳ ಬೆಳಕಿನಲ್ಲಿ ಮೊಳಗಿದವು.

ಸಪ್ಟಂಬರ್ 18, 2017ರಂದು ನೂರಕ್ಕೂ ಹೆಚ್ಚು ರೈತರ, ಕಾರ್ಮಿಕರ, ಯುವಜನರ, ವಿದ್ಯಾರ್ಥಿಗಳ, ಮಹಿಳೆಯರ ಸಂಘಟನೆಗಳು ಮತ್ತು ಸಾಮಾಜಿಕ ಸಂಘಟನೆಗಳು ಒಟ್ಟು ಸೇರಿ ರಚಿಸಿಕೊಂಡಿರುವ ಐಕ್ಯ ವೇದಿಕೆಯಾದ 'ಜನ್ ಏಕತಾ ಜನ್ ಅಧಿಕಾರ್ ಆಂದೋಲನ' ಜನತೆಯ ಐಕ್ಯತೆ, ಜನತೆಯ ಹಕ್ಕುಗಳು ಮತ್ತು ಜನತೆಯ ಪ್ರತಿರೋಧವನ್ನು ಸಂಘಟಿಸಿ ಅಖಿಲ ಭಾರತ ಮಟ್ಟದಲ್ಲಿ ಒಂದು ರಾಜಕೀಯ ಪರ್ಯಾಯವನ್ನು ಕಟ್ಟುವತ್ತ ಸಾಗುವ ಆಶಯವನ್ನು ಇಟ್ಟುಕ್ಕೊಂಡು ಹೋರಾಟದ ಕಣಕ್ಕಿಳಿದಿರುವ ವೇದಿಕೆ.

ಅಕ್ಟೋಬರ್ 28ರಂದು ಸಭೆಸೇರಿದ ಈ ಆಂದೋಲನದ ಸಂಯೋಜನಾ ಸಮಿತಿ ಸಂಸತ್ತಿನ ಮುಂದೆ ನವಂಬರ್ ತಿಂಗಳಲ್ಲಿ ನಡೆಯಲಿರುವ ಕಾರ್ಮಿಕರ ಮೂರು ದಿನಗಳ ಮಹಾಧರಣಿ ಹಾಗೂ ನವಂಬರ್ 20ರಂದು ನಡೆಯಲಿರುವ ರೈತರ ಸಂಸದ್ ಚಲೋಗೆ ಸಕಲ ಬೆಂಬಲವನ್ನು ವ್ಯಕ್ತಪಡಿಸಿತು.

'ಕಿಸಾನ್ ಮುಕ್ತಿ ಯಾತ್ರಾ': ಪೂರ್ವ ಭಾರತದಿಂದ ರೈತರ ಸಂಸದ್ ಚಲೋ ಆರಂಭ



'ಕಿಸಾನ್ ಮುಕ್ತಿ ಯಾತ್ರಾ'ದ ಪೂರ್ವ ಭಾರತದ ತುಕಡಿಯ ನಡೆ ಅಕ್ಟೋಬರ್ 28ರಂದು ಕೊಲ್ಕತಾದಿಂದ ಆರಂಭವಾಯಿತು. ರೈತ ಹುತಾತ್ಮರಾದ ಮೊಫಿಝುಲ್ ಖಾನ್ ಮತ್ತು ಆಲಂಗಿರ್ ಮೊಲ್ಲ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿ ಹೊರಟಿರುವ ಅಖಿಲ ಭಾರತ ಕಿಸಾನ್ ಸಂಘರ್ಷ ಸಂಯೋಜನಾ ಸಮಿತಿ(ಎಐಕೆಎಸ್‌ಸಿಸಿ) ನೇತೃತ್ವದ ಈ ಯಾತ್ರೆ ಪಶ್ಚಿಮ ಬಂಗಾಲ, ಒಡಿಶ, ಛತ್ತಿಸ್‌ಗಡ, ಝಾರ್‌ಖಂಡ್ ಮತ್ತು ಬಿಹಾರದ ಮೂಲಕ ಹಾದು ನವಂಬರ್ 20ರಂದು ದಿಲ್ಲಿ ತಲುಪಲಿದೆ.

ಬಂಗಾಲದಲ್ಲಿ ರೈತರ ಸಂಕಟಗಳನ್ನು ಅನಾವರಣಗೊಳಿಸುತ್ತಿರುವ ಯಾತ್ರೆ ಟಿಎಂಸಿ ಸರಕಾರ ಭತ್ತವನ್ನು ಕೇರಳದ ಎಲ್‌ಡಿಎಫ್ ಸರಕಾರದಂತೆ ಕ್ವಿಂಟಾಲಿಗೆ 2300ರೂ. ದರದಲ್ಲಿ ಖರೀದಿಸಬೇಕು ಎಂದು ಆಗ್ರಹಿಸಿದೆ. ಬಂಗಾಲದಲ್ಲಿ ಕನಿಷ್ಟ ಬೆಂಬಲ ಬೆಲೆ 1550ರೂ. ಇದ್ದರೂ ರೈತರಿಗೆ 900 ರೂ.ಗಿಂತ ಹೆಚ್ಚು ಸಿಗುತ್ತಿಲ್ಲ. ರೈತರನ್ನು ಸಾಲದ ಹೊರೆಯಿಂದ ಮುಕ್ತಗೊಳಿಸಬೇಕು ಎಂದೂ ಅದು ಆಗ್ರಹಿಸಿದೆ.

ಯಾತ್ರೆಯ ನೇತೃತ್ವ ವಹಿಸಿರುವ ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್, ಎನ್‌ಎಪಿಎಂನ ಮುಖಂಡ ಡಾ.ಸುನೀಲಂ, ಅಖಿಲ ಭಾರತ ಕಿಸಾನ್ ಮಜ್ದೂರ್ ಸಭಾದ ಮುಖಂಡ ಚಂದ್ರಶೇಖರ್ ಮುಂತಾದವರು ರೈತರನ್ನು ಉದ್ದೇಶಿಸಿ ಮಾತಾಡಿದರು.

ಕೊಲ್ಕತಾದಲ್ಲಿ ಯಾತ್ರೆಯ ಆರಂಭದ ಕಾರ್ಯಕ್ರಮದಲ್ಲಿ ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಎಐಕೆಎಸ್‌ಸಿಸಿ ಸಂಯೋಜಕ ವಿ.ಕೆ.ಸಿಂಗ್, ಹಾಗೂ ಇದರ ಇತರ ರಾಷ್ಟ್ರಮಟ್ಟದ ಮುಖಂಡರಾದ ಯೋಗೇಂದ್ರ ಯಾದವ್, ರಾಜು ಶೆಟ್ಟಿ, ಮದನ್ ಘೋಷ್ ಮತ್ತಿತರರು ಉಪಸ್ಥಿತರಿದ್ದರು.

ಬಂಗಾಲ, ಒಡಿಶಾದ ಮೂಲಕ 'ಯಾತ್ರಾ' ಅಕ್ಟೋಬರ್ 31ರಂದು ಝಾರ್ಖಂಡ್ ಪ್ರವೇಶಿಸಿದಾಗ ಅದಕ್ಕೆ ರಾಂಚಿಯಲ್ಲಿ ರೈತರು, ಕೃಷಿ ಕೂಲಿಕಾರರು, ಆದಿವಾಸಿಗಳು ಮತ್ತು ದಲಿತರ ವಿವಿಧ ಸಂಘಟನೆಗಳಿಂದ ಭಾರೀ ಸ್ವಾಗತ ದೊರೆತಿದೆ. ರಾಮಗಢ, ಹಜಾರಿಬಾಗ್ ಮತ್ತು ಕೊದರ್ಮದಲ್ಲಿ ಬಹಿರಂಗ ಸಭೆಗಳ ನಂತರ ಅದೀಗ ಬಿಹಾರ ಪ್ರವೇಶಿಸಿದೆ.

ಕೊದರ್ಮದಲ್ಲಿ ನಡೆದ ಸಾರ್ವಜನಿಕ ಸಭೆಯುನ್ನುದ್ದೇಶಿಸಿ ಹನ್ನನ್ ಮಪಲ್ಲ ಮತ್ತಿತರ ಎಐಕೆಎಸ್‌ಸಿಸಿ ಮುಖಂಡರು ಮಾತಾಡಿದರು.

ಕೃಷಿ ಟ್ರಾಕ್ಟರುಗಳು ಸಾರಿಗೆ ವಾಹನವೆಂದು ಪರಿಗಣನೆ ರೈತಾಪಿಗಳ ಮೇಲೆ ಮತ್ತೊಂದು ಹೊರೆ – ಎಐಕೆಎಸ್ ಖಂಡನೆ

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ ಕೇಂದ್ರೀಯ ಮಘಟಾರು ವಾಹನಗಳ ನಿಯಮಗಳು, 1989ಕ್ಕೆ ತಿದ್ದುಪಡಿ ತಂದು ಈ ನಿಯಮಗಳಲ್ಲಿ 'ಕೃಷಿಟ್ರಾಕ್ಟರ್ ಒಂದು ಸಾರಿಗೇತರ ವಾಹನ' ಎಂಬ ವಾಕ್ಯವನ್ನು ಕೈಬಿಡಬೇನ್ನುವ ಅಧಿಸೂಚನೆಯನ್ನು ಹೊರಡಿಸಿದೆ. ಇದನ್ನು ತಕ್ಷಣ ಕೈಬಿಡಬೇಕೆಂದು ಅಖಿಲಭಾರತ ಕಿಸಾನ್ ಸಭಾ(ಎಐಕೆಎಸ್) ಆಗ್ರಹಿಸಿದೆ.

ಬಿಜೆಪಿ ಸರಕಾರ ಕೃಷಿಗೆ ಬಳಸುವ ಟ್ರಾಕ್ಟರುಗಳನ್ನೂ ವಾಣಿಜ್ಯ ಸಾರಿಗೆ ವಾಹನಗಳೆಂದು ಪರಿಗಣಿಸಿ ಇದುವರೆಗೆ ಅವುಗಳ ಮೇಲೆ ಇರದ ಸಂಬಂಧಪಟ್ಟ ತೆರಿಗೆಗಳು, ಲೆವಿಗಳು ಮತ್ತು ಇತರ ಶುಲ್ಕಗಳಿಗೆ ಒಳಪಡಿಸಲಿದೆ ಎಂದು ವರದಿಯಾಗಿದೆ. ಇದು ವರ್ಷಕ್ಕೆ 30,000 ರೂ.ಗಳಷ್ಟಾಗುತ್ತದೆ. ಈಗಾಗಲೇ ಜಿಎಸ್‌ಟಿ ಹೆಸರಲ್ಲಿ ರೈತರು ಹೊಸ ಹೊರೆಗಳನ್ನು ಹೊರಬೇಕಾಗಿ ಬಂದಿದೆ, ಟ್ರಾಕ್ಟರನ್ನು ವಾಣಿಜ್ಯ ಸಾರಿಗೆ ಎಂದು ಪರಿಗಣಿಸಿದರೆ ಜಿಎಸ್‌ಟಿ ದರ 12%ದಿಂದ 28%ಕ್ಕೆ ಏರಬಹುದು.

ಇದು ಮೋದಿ ಸರಕಾರದ ಸಂವೇದನಾಶೂನ್ಯತೆ ಮತ್ತು ರೈತ-ವಿರೋಧಿ ಸ್ವರೂಪವನ್ನು ಮತ್ತೊಮ್ಮೆ ಬಹಿರಂಗಗೊಳಿಸಿದೆ ಎಂದು ಎಐಕೆಎಸ್ ಬಲವಾಗಿ ಖಂಡಿಸಿದೆ.

ಸ್ವಿಸ್ ಪ್ರವಾಸಿಗಳ ಮೇಲೆ ಹಿಂಸಾಚಾರ: ಎಐಡಿಡಬ್ಲ್ಯುಎ ಖಂಡನೆ

ಸ್ವಿಟ್ಜರ್ಲೆಂಡ್‌ನಿಂದ ತಾಜಮಹಲ್ ನೋಡಲು ಬಂದಿರುವ ಪ್ರವಾಸಿಗರಾದ ಮೇರಿ ಡ್ರಾಕ್ಸ್ ಮತ್ತು ಕ್ವೆಂಟಿಟ್ ಜೆರೆಮಿ ಕ್ಲೆರ್ಕ್ ತಮ್ಮ ಪ್ರವಾಸದ ಭಾಗವಾಗಿ ಫತೇಪುರ್ ಸಿಕ್ರಿಗೆ ಬಂದಾಗ ಅವರನ್ನು ಒಂದು ಗಂಟೆಯ ಕಾಲ ಬೆನ್ನಟ್ಟಿ ಹೊಡೆದಿರುವ ಘಟನೆ ಅತ್ಯಂತ ಆಘಾತಕಾರಿ ಎಂದು ಅಖೀಲ ಭಾರತ 'ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ಅವರು ತೀವ್ರ ಗಾಯಗಳಿಂದ ಆಸ್ಪತ್ರೆಯಲ್ಲಿದ್ದಾರೆ.

ಈ ಪ್ರಖ್ಯಾತ ಪ್ರವಾಸೀ ಕೆಂದ್ರದಲ್ಲಿ ತಮ್ಮನ್ನು ಬೆನ್ನಟ್ಟಿಕೊಂಡು ಬರುತ್ತಿದ್ದವರಿಂದ ತಪ್ಪಿಸಿಕೊಂಡು ಓಡುತ್ತಿರುವಾಗ ಪ್ರಾಣ ರಕ್ಷಣೆಗೆ ಸಹಾಯ ಕೇಳಲು ಪೋಲೀಸ್ ಅಥವ ಬೇರಾವುದೇ ಭದ್ರತಾ ವ್ಯವಸ್ಥೆ ಇಲ್ಲದಿರುವುದು ಆತಂಕಕಾರಿ ಎಂದಿರುವ ಎಐಡಿಡಬ್ಲ್ಯುಎ ಈ ಘಟನೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು ತಮ್ಮ ಪಕ್ಷದ ಶಾಸಕನ ತಾಜಮಹಲ್ ಕುರಿತ ಕುತ್ಸಿತ ಟಿಪ್ಪಣಿಯಿಂದ ಆಗಿರುವ ಮುಜುಗರವನ್ನು ನಿವಾರಿಸಲು ತಾಜಮಹಲ್ ಮತ್ತು ಶಾಹಜಹಾನ್ ಸಮಾಧಿಗೆ ಭೇಟಿ ನೀಡಲು ಬಂದಿದ್ದ ಸಮಯದಲ್ಲಿ ನಡೆದಿದೆ ಎಂಬ ಸಂಗತಿಯತ್ತ ಗಮನ ಸೆಳೆದಿದೆ.

ಈ ಯುವದಂಪತಿ ಎದುರಿಸಬೇಕಾಗಿ ಬಂದ ಹಿಂಸಾಚಾರ ತಾವು ಮಹಿಳೆಯರಿಗೆ ರಕ್ಷಣೆ ಕೊಡುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿರುವ ಉತ್ತರಪ್ರದೇಶ ಮತ್ತು ಕೇಂದ್ರದ ಬಿಜೆಪಿ ಸರಕಾರಗಳ ದಾವೆಯ ಟೊಳ್ಳುತನವನ್ನು ಬಯಲಿಗೆಳೆದಿದೆ ಎಂದು ಅದು ಅಭಿಪ್ರಾಯಪಟ್ಟಿದೆ. ಯೋಗಿ ಆದಿತ್ಯನಾಥ್‌ರವರ ಆಡಳಿತ ಇಂತಹ ಗೂಂಡಾಗಳಿಗೆ ರಕ್ಷಣೆ ನೀಡುತ್ತಿರುವುದರಿಂದ ರಾಜ್ಯದಲ್ಲಿ ಕಾನೂನು-ವ್ಯವಸ್ಥೇ ತೀವ್ರವಾಗಿ ಹದಗೆಟ್ಟಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಎಸ್ ಪುಣ್ಯವತಿ, ಆಶಾ ಶರ್ಮ ಮತ್ತು ಕವಿತ ಶರ್ಮರವರಿದ್ದ ಎಐಡಿಡಬ್ಲ್ಯುಎನ ನಿಯೋಗವೊಂದು ಅಪೊಲೊ ಆಸ್ಪತ್ರೆಯಲ್ಲಿ ಈ ಪ್ರವಾಸಿಗರನ್ನು ಭೇಟಿ ಮಾಡಲು ಅವಕಾಶ ನಿರಾಕರಿಸಲಾಗಿದೆ. ಈ ಘಟನೆಯನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸದೆ ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸಬೇಕು ಎಂದು ಎಐಡಿಡಬ್ಲ್ಯುಎ ಹೇಳಿದೆ.

ಬೃಂದಾ ಕಾರಟ್ ಪತ್ರ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಭಾರತದಲ್ಲಿ ಸ್ವಿಟ್ಜರ್ಲೆಂಡಿನ ರಾಯಭಾರಿಯವರಿಗೆ ಪತ್ರ ಬರೆದು ಇದೊಂದು ಅಸಹ್ಯ ಹಿಂಸಾಚಾರದ ಘಟನೆ ಎಂದು ಈ ಬಗ್ಗೆ ಖೇದ ಮತ್ತು ಆಘಾತ ವ್ಯಕ್ತಪಡಿಸಿದ್ದಾರೆ. ಪ್ರೀತಿಯ ಒಂದು ಸುಂದರ ಸಂಕೇತವನ್ನು ನೋಡಲು ಬಂದಿರುವ ಯುವ ಪ್ರವಾಸಿಗರು ಇಂತಹ ಅಸಹ್ಯ ಹಿಂಸಾಚಾರ ಎದುರಿಸಬೇಕಾಗಿ ಬಂದಿರುವ ಬಗ್ಗೆ ಭಾರತೀಯರಿಗೆ ನಾಚಿಕೆಯೆನಿಸುತ್ತದೆ, ಎಐಡಿಡಬ್ಲ್ಯುಎ ನಿಯೋಗವೊಂದು ಅವರನ್ನು ಭೇಟಿ ಮಾಡಲು ಬಿಡಲಿಲ್ಲ, ಆದರೆ ಈ ದೇಶದಲ್ಲಿ ಅವರಿಗೆ ಬೆಂಬಲ ನೀಡಲು ಸಿದ್ಧವಿರುವ ಹಲವು ಆಂದೋಲನಗಳು ಮತ್ತು ಸಂಘಟನೆಗಳು ಇವೆ ಎಂವುದನ್ನುಈ ಇಬ್ಬರು ಸ್ವಿಸ್ ಪ್ರವಾಸಿಗರಿಗೆ ತಿಳಿಸಬೇಕು ಎಂದು ಬೃಂದಾ ಕಾರಟ್ ರಾಯಭಾರಿಗಳಿಗೆ ಬರೆದ ತಮ್ಮ ಪತ್ರದಲ್ಲಿ ಹೇಳಿದ್ದಾರೆ.


ಪ್ರೊ. ಕಾಂಚ ಈಲಯ್ಯ ಅವರ ಗೃಹಬಂಧನ ಅಸಂವಿಧಾನಿಕ-ಸಿಪಿಐ(ಎಂ)

ಹೈದರಾಬಾದಿನ ಮೌಲಾನಾ ಆಝಾದ್ ರಾಷ್ಟ್ರೀಯ ಉರ್ದು ವಿಶ್ವ ವಿದ್ಯಾಲಯದ ಸಾಮಾಜಿಕ ತಡೆ ಮತ್ತು ಒಳಗೊಳ್ಳುವ ಧೋರಣೆ-ಯ ಅಧ್ಯಯನ ಕೇಂದ್ರದ ನಿರ್ದೇಶಕರೂ, ದಲಿತ ಹಕ್ಕುಗಳ ಹೋರಾಟಗಾರರೂ ಆಗಿರುವ ಪ್ರೊ. ಕಾಂಚ ಈಲಯ್ಯ ಅವರು ಆಂಧ್ರಪ್ರದೇಶದಲ್ಲಿ ಸಭೆಯೊಂದರಲ್ಲಿ ಭಾಗವಹಿಸದಂತೆ ತಡೆಯಲಾಗಿದೆ. ಆಂಧ್ರಪ್ರದೇಶ ಪೊಲಿಸ್ ಅವರು ವಿಜಯವಾಡದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸದಂತೆ ನಿಷೇಧಿಸುವ ಹೈಕೋರ್ಟ್ ಆದೇಶವನ್ನು ಪಡೆಯಲು ವಿಫಲರಾದಾಗ ತೆಲಂಗಾಣ ಪೋಲೀಸರು ಅವರನ್ನು ಗೃಹಬಂಧನಕ್ಕೆ ಒಳಪಡಿಸಿದರು. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ ಮತ್ತು ಅಸಂವೈಧಾನಿಕ ಎಂದು ಸಿಪಿಐ(ಎಂ) ಖಂಡಿಸಿದೆ.

ಕನ್ನಡ ಅಂದ್ರೆ ಬದುಕು.. .. ಆಗಲು ಏನಾಗಬೇಕು?

ಸಂಪಾದಕೀಯ

"ಕನ್ನಡ ಅಂದ್ರೆ ಸಾಮರಸ್ಯ, ಕನ್ನಡ ಅಂದ್ರೆ ಪ್ರಗತಿ, ಕನ್ನಡ ಅಂದ್ರೆ ಜ್ಞಾನ, ಕನ್ನಡ ಅಂದ್ರೆ ಪರಂಪರೆ, ಕನ್ನಡ ಅಂದ್ರೆ ಸಮೃದ್ಧಿ, ಕನ್ನಡ ಅಂದ್ರೆ ಬದುಕು, ಕನ್ನಡ ಅಂದ್ರೆ ಸದವಕಾಶ", "ನವ ಕರ್ನಾಟಕ ನಿರ್ಮಾಣಕ್ಕೆ, ಸದಾ ಸಿದ್ಧ ಸರ್ಕಾರ", "ಕನ್ನಡ ನಮ್ಮ ಅಸ್ಮಿತೆ, ಕನ್ನಡ ನಮ್ಮ ಅನನ್ಯತೆ, ಕನ್ನಡವೇ ನಮ್ಮ ಆದ್ಯತೆ" – ಇದು ಕರ್ನಾಟಕ ಸರಕಾರ ಈ ವರ್ಷದ ರಾಜ್ಯೋತ್ಸವಕ್ಕೆ ಟಿವಿ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಜಾಹೀರಾತಿನ ಆಕರ್ಷಕ ಸಾಲುಗಳು. ಇವು ಯಾವುವೂ ಇನ್ನೂ ನನಸಾಗಿಲ್ಲ ಎಂಬುದು ಕಟು ವಾಸ್ತವ, ಎಂದಾದರೂ ನನಸಾಗುವ ದಿಕ್ಕಿನಲ್ಲಿ ಕಾಂಗ್ರೆಸ್ ಮತ್ತು ಸರಕಾರದ ನೀತಿಗಳು ಇವೆಯೇ ಎಂಬುದು 62ನೇ ರಾಜ್ಯೋತ್ಸವದ ಸಂಭ್ರಮಗಳ ಮಧ್ಯೆ ಕೇಳಿಕೊಳ್ಳಬೇಕಾದ ಪ್ರಶ್ನೆ.



ಕನ್ನಡ ಮತ್ತು ಕನ್ನಡಿಗರ ಬಹಳಷ್ಟು ಸಮಸ್ಯೆಗಳು ಬದುಕು ಮತ್ತು ಭಾಷೆಯ ನಡುವಣ ಸಂಬಂಧದ ಸಮಸ್ಯೆಗೆ ಸಂಬಂಧಿಸಿದ್ದು. ಕನ್ನಡದಲ್ಲಿ ಶಿಕ್ಷಣ ಪಡೆದವರಿಗೆ ಉದ್ಯೋಗವೇ ಇಲ್ಲ ಎನುವಾಗ, ಇಂಗ್ಲಿಷ್ ಶಿಕ್ಷಣ ಮಾಧ್ಯಮದ ಕ್ರೇಜ್ ನಿಂದಾಗಿ ಎಲ್ಲೆಲ್ಲೂ ಕಾನ್ವೆಂಟುಗಳ ಹುಲುಸು ಬೆಳೆ ಇರುವಾಗ, ಕನ್ನಡದ ಮೂಲಕವೇ ಬದುಕು ಸಿದ್ಧಿಸುವುದೆಂತು? ಕನ್ನಡವನ್ನು ಕಷ್ಟಪಟ್ಟು ಓದುವ ಈ ಅಸಂಖ್ಯಾತ ಕನ್ನಡಿಗರು ಕನ್ನಡ ಸಾಹಿತ್ಯ ಕೃತಿಗಳನ್ನು– ಕುವೆಂಪು, ಬೇಂದ್ರೆ, ಕಾರಂತ, ತೇಜಸ್ವಿ, ದೇವನೂರು, ನುಗಡೋಣಿ ಇವರನ್ನು ಓದಿ ಆಸ್ವಾದಿಸುವುದೆಂತು? ಇಂತಹ ಪರಿಸ್ಥಿತಿಗೆ ಕಾರಣ ಏನು? ಕನ್ನಡದಲ್ಲಿ ಶಿಕ್ಷಣ ಪಡೆದವರಿಗೆ ಬದುಕು ಏಕೆ ಸಮೃದ್ಧವಾಗಿಲ್ಲ?

ಕರ್ನಾಟಕದ ವಿವಿಧ ಭಾಗಗಳ ಪ್ರತ್ಯೇಕವಾಗುವ ಕೂಗು ಕೂಡ ಬದುಕಿಗೇ ಸಂಬಂಧಪಟ್ಟಿದ್ದಲ್ಲವೇ? ತಮ್ಮ ತಮ್ಮ ವಾಸ ಪ್ರದೇಶದಲ್ಲಿ ಬದುಕು ಸಿದ್ಧಿಸುತ್ತಿಲ್ಲ ಎಂಬ ವೇದನೆಯಲ್ಲವೇ? ಇವೆಲ್ಲ ಸಮಸ್ಯೆಯ ಮೂಲ ಇರುವುದು ಕರ್ನಾಟಕ ರಾಜ್ಯ ಪ್ರಗತಿ ಹೊಂದಿ ಸಮೃದ್ಧವಾಗಲು ಬಿಡದೆ ಹಣ, ಕಾನೂನು, ಅಧಿಕಾರವನ್ನೆಲ್ಲಾ ಕಸಿದುಕೊಂಡು ಕೇಂದ್ರದಲ್ಲಿ, ದೆಹಲಿಯಲ್ಲಿ ಕೇಂದ್ರೀಕರಿಸಿಕೊಂಡಿರುವ ಸ್ಥಿತಿಯಲ್ಲಿ, ರಾಜ್ಯಗಳು ಕೇವಲ ವೈಭವೀಕೃತ ಮುನಿಸಿಪಾಲಿಟಿಗಳು ಎಂಬ ಸ್ಥಿತಿಗೆ ತಳ್ಳಲ್ಪಟ್ಟಿರುವುದರಿಂದ. ನಮಗ್ಯಾರಿಗೂ ತಿಳಿಯದಂತೆ ಕೇಂದ್ರ ಸರ್ಕಾರದ ಆಜ್ಞೆಗಳು, ಕ್ರಮಗಳು ಇತ್ತೀಚಿನ ಜಿ..ಎಸ್.ಟಿ ಎಂಬ ಕೇಂದ್ರ ತೆರಿಗೆಯ ತೀರ್ಮಾನವೂ ರಾಜ್ಯ ಸರ್ಕಾರಗಳು ಜನರಿಗೆ ಉದ್ಯೋಗ ನಿರ್ಮಾಣ ಮಾಡುವ ಸಾಮರ್ಥ್ಯವನ್ನು, ಮೂಲಭೂತ ಸೌಲಭ್ಯ ಕಲ್ಪಿಸುವ, ಸರ್ಕಾರಿ ಶಾಲೆ, ಕಾಲೇಜುಗಳನ್ನು ಬಲಪಡಿಸುವ ಶಕ್ತಿಯನ್ನು ಕಸಿದುಕೊಂಡಿವೆ.

ಕರ್ನಾಟಕವನ್ನು ಬಲಪಡಿಸದಿದ್ದಲ್ಲಿ ದೇಶದ ಒಟ್ಟು ತೆರಿಗೆಯಲ್ಲಿ ಮುಕ್ಕಾಲು ಮೂರು ವೀಸೆ ಪಾಲು ರಾಜ್ಯಗಳಿಗೆ ಮೀಸಲಾಗದಿದ್ದಲ್ಲಿ, ಸ್ವತಂತ್ರ ಭಾರತದಲ್ಲಿ ಸ್ವಾಯತ್ತ ಕರ್ನಾಟಕ ಎಂಬ ತತ್ವ ಜಾರಿಗೆ ಬರದೇ ಇದ್ದಲ್ಲಿ ಕನ್ನಡದ ದುರ್ಬಲತೆ ಎಂದೆಂದೂ ಮುಂದುವರೆಯುತ್ತದೆ. ಹೀಗಿರುವಾಗ ನವ ಕರ್ನಾಟಕ ನಿರ್ಮಾಣಕ್ಕೆ ಸದಾ ಸಿದ್ಧವಾದ ಸರ್ಕಾರ ರಾಜ್ಯ ಸರ್ಕಾರಕ್ಕೆ ಹೆಚ್ಚು ಅಧಿಕಾರ, ತೆರಿಗೆಯ ಪಾಲು ಕೇಳದೆ,



ಸ್ವಾಯತ್ತತೆಯ ಪ್ರಶ್ನೆಯನ್ನು ದೊಡ್ಡ ಗಂಟಲಿನಲ್ಲಿ ಎತ್ತದೇ ಅದರ ಎಲ್ಲಾ ಜಾಹೀರಾತುಗಳ ಆಕರ್ಷಕ ಆಶಯಗಳು ಬರಿಯ ಹಗಲು ಕನಸುಗಳಾಗಿ ಉಳಿಯುತ್ತವೆ. ಆದರೆ ಕನ್ನಡದ ಮಾಧ್ಯಮಗಳು, ಆಳುವ ರಾಜಕೀಯ ಪಕ್ಷಗಳು, ಬುದ್ಧಿಜೀವಿಗಳು ಈ ಬಗ್ಗೆ ಪ್ರಶ್ನೆ ಎತ್ತುತ್ತಿಲ್ಲವೇಕೆ?

ನವಕರ್ನಾಟಕ ನಿರ್ಮಾಣ – ಬಿಜೆಪಿ, ಕಾಂಗ್ರೆಸ್ ಎರಡೂ ಪಕ್ಷಗಳ ಘೋಷಣೆ. ನವ ಕರ್ನಾಟಕ ಎಂದರೇನು? ಅದಕ್ಕೆ ಬೇಕಾದುದೇನು? – ಈಗಿನ ಹತ್ತು ಪಟ್ಟು ಹೆಚ್ಚು ಬಜೆಟ್; ರಾಜ್ಯ ಸರ್ಕಾರದ್ದೇ ಆದ ಒಂದು ಬ್ಯಾಂಕ್; ಪ್ರತಿ ಜಿಲ್ಲೆಯಲ್ಲಿ ಒಂದು ಬೃಹತ್ ಸಾರ್ವಜನಿಕ ಕೈಗಾರಿಕೆ; ಪ್ರತಿ ತಾಲೂಕಿನಲ್ಲಿಯೂ ಒಂದು ಮಧ್ಯಮ ಸಾರ್ವಜನಿಕ ಕೈಗಾರಿಕೆ; ಕನ್ನಡ, ತುಳು, ಕೊಡವ ಇತ್ಯಾದಿ ಭಾಷೆಗಳಲ್ಲಿ ಎಲ್ಲಾ ಶಿಕ್ಷಣ; ಹೀಗೆ ಶಿಕ್ಷಣ ಪಡೆದವರಿಗೆಲ್ಲಾ ಉದ್ಯೋಗ; ವೈಜ್ಞಾನಿಕ, ಪ್ರಗತಿಪರ, ವೈಚಾರಿಕ ಸಾಹಿತ್ಯದ ವಿಪುಲ ಬೆಳವಣಿಗೆ; ಬಾಲ ಸಾಹಿತ್ಯದ ಬೆಳವಣಿಗೆ; ಕೃಷಿಯಲ್ಲಿ ಉದ್ಯೋಗ ಹೆಚ್ಚಿಸಲು ಭೂ ಸುಧಾರಣೆ; ನೂರಾರು, ಸಾವಿರಾರು ಎಕರೆ ಭೂಮಿ ಇರುವವರಿಂದ ವಶ ಪಡೆದು ಭೂ ಹೀನರಿಗೆ ಹಂಚಿಕೆ; ಸಹಕಾರೀ ರಂಗದಲ್ಲಿ ಹಾಗೂ ಮಹಿಳಾ ಸ್ವಸಹಾಯ ಗುಂಪುಗಳಿಂದ



ಸಾಮೂಹಿಕ ಕೃಷಿ, ಕೈಗಾರಕೋದ್ಯಮಗಳು; ನಗರೀಕರಣದ ನಿಯಂತ್ರಣ, ಪರಿಸರ ಸಂರಕ್ಷಣೆ; ಶಿಕ್ಷಣ, ಆರೋಗ್ಯ ಪೂರ್ಣವಾಗಿ ಸರ್ಕಾರದಿಂದಲೇ...ಖಾಸಗಿಗೆ ಅವಕಾಶ ರದ್ದು; ಸರ್ಕಾರದಿಂದಲೇ ನಾಗರಿಕ ಸೌಲಭ್ಯಗಳು, ಮೂಲಭೂತ ಸೌಕರ್ಯಗಳು; ಸರ್ಕಾರದ ಉದ್ಯೋಗಾವಕಾಶಗಳು ಹಲವು ಪಟ್ಟು ಹೆಚ್ಚು; ಮೀಸಲಾತಿಯ ಉದ್ಯೋಗಾವಕಾಶ ಹೆಚ್ಚಳ; ಒಟ್ಟಿನಲ್ಲಿ ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಉದ್ಯೋಗ, ಭಾಷೆಯ ಬೆಳವಣಿಗೆ, ಪರಿಸರ ಸಂರಕ್ಷಣೆ. ಇದುವೇ ಸಮಗ್ರ ಅಭಿವೃದ್ಧಿ, ಸಮೃದ್ಧ ಕರ್ನಾಟಕ; ಈ ದರ್ಶನ ಕಾಂಗ್ರೆಸ್, ಬಿಜೆಪಿಗಳಿಗಿದೆಯೇ? ಅವುಗಳಿಗೆ ಬೇಕಗಿದೆಯೇ? ಎರಡೂ ಪಕ್ಷಗಳಿಗೂ ಇದು ಸಾಧ್ಯವೇ?

ಈ ವಿಶಾಲ ದರ್ಶನ ಎರಡೂ ಪಕ್ಷಗಳಿಗೆ ಇಲ್ಲವೆಂದುಕೊಂಡರೂ ಕನ್ನಡದ ಬಗ್ಗೆ ವಿಪುಲವಾಗಿ ಮಾತನಾಡುವ ಇವರೂ ಇನ್ನೂ ಹಲವರೂ ಅದರ ಬಗ್ಗೆ ಏನು ಮಾಡುತ್ತಿದ್ದಾರೆ? ಕನ್ನಡಕ್ಕೆ ತಕ್ಕ ಸ್ಥಾನಮಾನ ಸಿಕ್ಕಿಲ್ಲವೆಂದು ಹಲುಬುವ, ಹಿಂದಿ ರಾಷ್ಟ್ರ ಭಾಷೆ ಎಂಬ ಹೇರಿಕೆ ಬಗ್ಗೆ ಆಕ್ರೋಶ ತೋರುವ ಇವರಿಗೆ ಅದಕ್ಕೆ ಕಾರಣ ತಿಳಿದಿದೆಯೇ? ಇದಕ್ಕೆ ಕಾರಣ ನಮ್ಮ ಸಂವಿಧಾನದ ಆಶಯದಂತೆ ದೇಶದ ಮುಖ್ಯ ಭಾಷೆಗಳೆಲ್ಲಾ ರಾಷ್ಟ್ರೀಯ ಭಾಷೆಯಾಗದಿರುವುದು, ಕನ್ನಡ ರಾಷ್ಟ್ರೀಯ ಭಾಷೆಯಾಗುವ ಪರಿಕಲ್ಪನೆಯನ್ನೂ ರೂಪಿಸಿಕೊಳ್ಳದಿರುವುದು, ಅದಕ್ಕಾಗಿ ಒತ್ತಾಯ ಹಾಕದಿರುವುದು.

– ಎಂಬ ಅರಿವು ಇವರಿಗಿದೆಯೇ?

ಕನ್ನಡ ರಾಷ್ಟ್ರೀಯ ಭಾಷೆಯಾಗುವುದೆಂದರೆ, ಕೇಂದ್ರ ಸರ್ಕಾರ ಮಾಡುವ ಎಲ್ಲಾ ಕಾನೂನುಗಳು ಕಾನೂನಾಗುವ ಮೊದಲೇ ಕನ್ನಡಕ್ಕೆ ಭಾಷಾಂತರವಾಗಿ ಕನ್ನಡದ ಜನರ ಚರ್ಚೆಗೆ ಲಭ್ಯವಾಗಬೇಕು. ಕನ್ನಡದಲ್ಲಿ ನೀಡಿದ ಸೂಚನೆ, ಮಾರ್ಪಾಟುಗಳನ್ನು ಕೂಡಾ ಗಮನಕ್ಕೆ ತೆಗೆದುಕೊಂಡು ಅಂತಿಮ



ಕಾನೂನು ರೂಪಿಸಬೇಕು. ಎಲ್ಲಾ ಬ್ಯಾಂಕುಗಳು, ಕೇಂದ್ರ ಸರ್ಕಾರದ ಕಛೇರಿಗಳು, ಸಾರ್ವಜನಿಕ ಉದ್ಯಮಗಳು ಕನ್ನಡದ ಜನಕ್ಕೆ ಸಂಬಂಧಿಸಿ ಎಲ್ಲ ವ್ಯವಹಾರ, ನಿಯಮಗಳು, ಫಾರಂಗಳು, ಕನ್ನಡಲ್ಲಿ ಲಭ್ಯವಾಗಿಸಬೇಕು. ಲೋಕಸಭೆ, ರಾಜ್ಯಸಭೆಯಲ್ಲಿ ಕನ್ನಡದಲ್ಲಿ ಭಾಷಣ ಮಾಡಲು ಅವಕಾಶ ಇರಬೇಕು. ಎಲ್ಲಾ ಭಾಷಣಗಳೂ ಏಕಕಾಲಕ್ಕೆ ಕನ್ನಡಕ್ಕೆ ಭಾಷಾಂತರವಾಗಬೇಕು. ರಾಜ್ಯ ಸರ್ಕಾರದೊಡನೆ ಕನ್ನಡದಲ್ಲಿ ವ್ಯವಹಾರ ನಡೆಸಬೇಕು.

ಸುಪ್ರೀಂ ಕೋರ್ಟೂ ಸೇರಿ ಎಲ್ಲಾ ಕೋರ್ಟುಗಳಲ್ಲಿ ಕನ್ನಡದಲ್ಲಿ ವ್ಯವಹರಿಸಲು ಅವಕಾಶವಿರಬೇಕು. ಹೈಕೋರ್ಟ್ ಮತ್ತು ಕೆಳಗಿನ ಕೋರ್ಟ್ ಗಳ ಎಲ್ಲ ವ್ಯವಹಾರ–ಅರ್ಜಿಗಳು, ಕಾಗದ ಪತ್ರಗಳು, ವಾದಗಳು, ತೀರ್ಪುಗಳು ಎಲ್ಲವೂ ಕನ್ನಡದಲ್ಲಿರಬೇಕು. ವೈದ್ಯಕೀಯ,ಇಂಜನಿಯರಿಂಗ್, ವಿಜ್ಞಾನ ಶಿಕ್ಷಣವೂ ಸೇರಿದಂತೆ ಎಲ್ಲವೂ ಕನ್ನಡದಲ್ಲಿರಬೇಕು. ಇಂಗ್ಲಿಷ್ ಒಂದು ಭಾಷೆಯಾಗಿ ಮಾತ್ರ ಕಲಿಯಬೇಕು.

ಕನ್ನಡ ರಾಷ್ಟ್ರೀಯ ಭಾಷೆಯಾಗದಿರುವದರಿಂದ ಪ್ರಜಾಪ್ರಭುತ್ವದ ಅಡಿಪಾಯ ದುರ್ಬಲವಾಗುತ್ತದೆ. ಕನ್ನಡದ ಜನ ಉದ್ಯೋಗ, ಶಿಕ್ಷಣ, ನ್ಯಾಯ, ಆರೋಗ್ಯ ಗಳಿಂದ ವಂಚಿತರಾಗುತ್ತಾರೆ. ಕನ್ನಡ ವಿಜ್ಞಾನ ಮಾಧ್ಯಮವಾಗದಿರುವುದರಿಂದ ದಲಿತ, ಹಿಂದುಳಿದ ಜಾತಿಗಳ ಸಮುದಾಯಗಳಿಗೆ, ರೈತರಿಗೆ, ಕಾರ್ಮಿಕರಿಗೆ, ಕೂಲಿಕಾರರಿಗೆ, ಮಹಿಳೆಯರಿಗೆ, ಕೋಟ್ಯಾಂತರ ಜನರಿಗೆ ಅವರ ಮಕ್ಕಳಿಗೆ ಶಿಕ್ಷಣ ವಂಚನೆಯಾಗುತ್ತದೆ. ಕನ್ನಡ ನ್ಯಾಯಾಲಯ ಮಾಧ್ಯಮವಾಗದಿರುವುದರಿಂದ, ಕಾನೂನು ಕನ್ನಡದಲ್ಲಿ ರಚನೆಯಾಗದಿರುವುದರಿಂದ, ಕನ್ನಡ ಕಾನೂನು ಶಿಕ್ಷಣ ಮಾಧ್ಯಮವಾಗದಿರುವುದರಿಂದ, ನ್ಯಾಯ ವಂಚನೆಯಾಗುತ್ತದೆ. ಕನ್ನಡ ವೈದ್ಯಕೀಯ ಶಿಕ್ಷಣ ಮಾಧ್ಯಮವಾಗದ ಕಾರಣ, ವೈದ್ಯರು ರೋಗಗಳ ಬಗ್ಗೆ ಕನ್ನಡದಲ್ಲಿ ಸರಿಯಾದ ವಿವರಣೆ ಕೊಡಲು ಅಶಕ್ತರಾದ ಕಾರಣ ಆರೋಗ್ಯ ವಂಚನೆಯಾಗುತ್ತದೆ. ಶಿಕ್ಷಣ, ನ್ಯಾಯ ಹಾಗೂ ಆರೋಗ್ಯ ವಂಚನೆಗಳಿಂದಾಗಿ ದೊಡ್ಡ ಪ್ರಮಾಣದ ಹಣ ನಷ್ಟವಾಗುತ್ತದೆ.

ಕನ್ನಡ ರಾಷ್ಟ್ರೀಯ ಭಾಷೆಯಾಗಲು ಒತ್ತಾಯ ಹಾಕುವುದಕ್ಕಿಂತ ಮೊದಲು ಕನ್ನಡವನ್ನು ಕನಿಷ್ಟ ರಾಜ್ಯದ ಆಡಳಿತ ಬಾಷೆ ಮಾಡಬೇಕು. ರಾಜ್ಯದ ಎಲ್ಲ ಆಡಳಿತ ಕನ್ನಡದಲ್ಲಿ ನಡೆಯಬೇಕು. ತುಳು, ಕೊಡಗು ಭಾಷಿಕ ಪ್ರದೇಶಗಳಲ್ಲಿ ಆಯಾ ಭಾಷೆಗಳಲ್ಲಿ ನಡೆಯಬೇಕು. ಹೀಗೆ ಎಲ್ಲೆಲ್ಲಿಯೂ ಕನ್ನಡಮಯವಾದರೆ ಬೇರೆ ಭಾಷಿಕರು ಕನ್ನಡ ಕಲಿಯುವುದು ಅನಿವಾರ್ಯವಾಗುತ್ತದೆ.

ಕನ್ನಡ ಅಂದ್ರೆ .. .. ಎಂಬ ಜಾಹೀರಾತಿನ ಆಶಯಗಳೂ, ಅವುಗಳ ಆಧಾರದ ಮೇಲೆ ನವಕರ್ನಾಟಕ ನಿರ್ಮಾಣವೂ ಸಾಕಾರವಾಗಿಸಲು ಬೇಕಾಗುವ ಮೇಲೆ ಹೇಳಿದ ಬದಲಿ ನೀತಿಗಳು ಅಗತ್ಯವೆಂಬ ಅರಿವಾಗಲಿ, ಅದರ ಬಗ್ಗೆ ಬದ್ದತೆಯಾಗಲಿ, ಕಾಳಜಿಯಾಗಲಿ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಗಳಿಗಿಲ್ಲ ಎಂಬುದು ಸ್ಪಷ್ಟ. ಬದಲಿ ನೀತಿಗಳ ಬಗ್ಗೆ ಅರಿವು, ಮೂಡಿಸುವತ್ತ ಈ ಚುನಾವಣಾ ಸೀಜನಿನಲ್ಲಿ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ವಿಶೇಷ ಶ್ರಮವಹಿಸಬೇಕಾಗಿದೆ. ●

ಪರಿವರ್ತನಾ ಯಾತ್ರೆಗೆ ಹಗರಣಗಳ 'ಇಂಧನ'

ಎಸ್.ವೈ. ಗುರುಶಾಂತ್

ಅಭಿವೃದ್ಧಿಯ ಮಂತ್ರ ಹೇಳುತ್ತಿದ್ದ ನರೇಂದ್ರ ಮೋದಿ ಈಗ ಸೌಂದರ್ಯ ಲಹರಿ ಮಂತ್ರ ಜಪಿಸುತ್ತಿದ್ದಾರೆ. 56 ಇಂಚಿನ ಪ್ರಧಾನಿ ಎಂದು ಬಣ್ಣಿಸಿಕೊಳ್ಳುತ್ತಿದ್ದ ಅವರು ಹರಿದ್ವಾರದ ಶಿವನ ಲಿಂಗದ ಎದುರು ತನಗೆ ಶಕ್ತಿಕೊಡು ಎಂದು ಕೇಳುತ್ತಿದ್ದಾರೆ. ಅಲ್ಲಿಂದ ಕರ್ನಾಟಕದ ಧರ್ಮಸ್ಥಳದ ಮಂಜುನಾಥನ ಮುಂದೆ, ಅಲ್ಲಲ್ಲ, ದೇಗುಲದ ಒಡೆಯ ವೀರೇಂದ್ರ ಹೆಗ್ಗಡೆಯವರ ಮುಂದೆ ನಡು ಬಗ್ಗಿಸಿ 'ಶಕ್ತಿ' ತುಂಬಲು ಕೋರುತ್ತಿದ್ದಾರೆ!

ಅವರಿವರ ಮೇಲೆ ಹರಿಹಾಯುತ್ತಾ, ಹೂಂಕರಿಸಿ ಓಡಾಡುತ್ತಿದ್ದ ಮೋದಿ ಈಗ ಗುಡಿ ಗುಂಡಾರಗಳನ್ನು ಸುತ್ತುತ್ತಾ, ಮಂತ್ರ ಓದುತ್ತಾ ಜನರನ್ನು ಯಾಮಾರಿಸಿ ತಮ್ಮತ್ತ ಸೆಳೆಯಲು ಯಾಕೆ ಪ್ರಯತ್ನಿಸುತ್ತಿದ್ದಾರೆ ಎಂಬುದೂ ಅರ್ಥವಾಗದ ವಿಷಯವೇನಲ್ಲ. ದುರಾಡಳಿತದ ದುಷ್ಫಲಗಳು ಕಾಣದಂತೆ ಮುಚ್ಚಿಕೊಳ್ಳಲು ಅದೆಷ್ಟೇ ಅವರು ಪ್ರಯತ್ನಿಸಿದರೂ ವಿದ್ಯುತ್ ಖರೀದಿಸಲು ದೀರ್ಘಾವಧಿ ಟೆಂಡರ್ ಕರೆಯಲಾಗಿತ್ತು. ಆ ಪ್ರಕ್ರಿಯೆಯಲ್ಲಿ ಜಿಂದಾಲ್ ಕಂಪನಿಯ ಟೆಂಡರ್ ಬಿಡ್ ನ್ನು ಅಂಗೀಕರಿಸಲಾಗಿತ್ತು. ಅದರಂತೆ ರೂ.3.50 ಕ್ಕೆ ಯೂನಿಟ್‌ನಂತೆ ಖರೀದಿಸುವ ಪ್ರಸ್ತಾಪವನ್ನು ಸಚಿವ ಸಂಪುಟ ಅಂಗೀಕರಿಸಿತ್ತು. ಆಗ ಬಿ. ಎಸ್. ಯಡ್ಯೂರಪ್ಪನವರು ಮುಖ್ಯಮಂತ್ರಿ. ಕುಮಾರಿ ಶೋಭಾ ಕರಂದ್ಲಾಜೆ ವಿದ್ಯುತ್ ಮಂತ್ರಿ. ಈ ವಿದ್ಯುತ್ ಖರೀದಿಯ ಪ್ರಕರಣದಲ್ಲಿ ಹಗರಣ ನಡೆದಿರುವುದು ಆಗಲೇ. ಅದು ಸುಮಾರು 28 ಸಾವಿರ ಕೋಟಿ ರೂಪಾಯಿಗಳ ಹಗರಣ!

ಆದರೆ. . .!?

ಈ ಹಗರಣಕ್ಕೂ ತನಗೂ ಏನೂ ಸಂಬಂಧವೇ ಇಲ್ಲ ಎಂದು ಮಾಜಿ ಸಚಿವೆ, ಹಾಲಿ ಸಂಸದೆ ಶೋಭಾ ಕರಂದ್ಲಾಜೆಯವರು ನಿರಾಕರಿಸುತ್ತಾರೆ! ಆದರೆ ವಾಸ್ತವ ಮಾಹಿತಿಗಳು ಅವರನ್ನು ಖುಲಾಸೆಗೊಳಿಸುವುದಿಲ್ಲ.

ಆಗ ನಡೆದದ್ದೇನೆಂದರೆ:

2010 ರಲ್ಲಿ ಸಚಿವ ಸಂಪುಟ ಅಂಗೀಕರಿಸಿದ ಬಳಸದೇ ಇದ್ದುದರಿಂದ 2012ರ ವರೆಗೂ ಕೋಟ್ಯಾಂತರ ರೂಪಾಯಿಗಳ ಹಾನಿಯಾಗಿದೆ. ಇದರಲ್ಲಿ ಅವ್ಯವಹಾರ ನಡೆದಿರುವ ಸಾಧ್ಯತೆಗಳಿದ್ದು ತನಿಖೆಯಾಗಬೇಕು ಎಂದಿದ್ದರು. ಇದಕ್ಕೆ ಪ್ರತಿತಂತ್ರವಾಗಿ ಒಂದು ಬಾರಿ ಕಾಂಗ್ರೆಸ್, ಮತ್ತೊಂದು ಬಾರಿ ಜೆ.ಡಿ.ಎಸ್ ಪಕ್ಷಗಳು ಬಿಜೆಪಿಯ ಮೇಲೂ ಆರೋಪ ಮಾಡಿದ್ದವು. ಬಿಜೆಪಿ ಅಧಿಕಾರದಲ್ಲಿದ್ದಾಗ ವಿದ್ಯುತ್‌ನ ಬೇಡಿಕೆಗಿಂತ ಅಧಿಕ ಖರೀದಿ ಮಾಡಿ 10 ಸಾವಿರ ಕೋಟಿಯಷ್ಟು ನಷ್ಟ ಮಾಡಿದ್ದಾರೆ ಎಂದು ಕಾಂಗ್ರೆಸ್ ಒಮ್ಮೆ ಆರೋಪಿಸಿತ್ತು. ಮುಂದೆ ಜೆ.ಡಿ.ಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿಯವರು ಯಡಿಯೂರಪ್ಪ ಶೋಭಾ ಕರಂದ್ಲಾಜೆಯವರ ಅವಧಿಯಲ್ಲಿ ಆದ ವಿದ್ಯುತ್ ಖರೀದಿ ಹಗರಣದ ದಾಖಲೆಗಳನ್ನು (28,000 ಕೋಟಿ ಹಗರಣ!) ವಿಧಾನಸಭೆಯಲ್ಲಿ ಬಿಡುಗಡೆ ಮಾಡಿದ್ದರು. ಇದಾದ ಬಳಿಕ ಈ ಪ್ರಕರಣವನ್ನು ಹಾಲಿ ಇಂಧನ ಸಚಿವ ಡಿ.ಕೆ. ಶಿವಕುಮಾರ್ ನೇತೃತ್ವದ ಸದನ ಸಮಿತಿಗೆ ವಹಿಸಲಾಗಿತ್ತು.

ದುರ್ವಾಸನೆ ದೂರ, ಬಲು ದೂರ ಹಬ್ಬುತ್ತಿದೆ. ನೋಟುಗಳ ಬದಲಾವಣೆ, ಜಿ.ಎಸ್.ಟಿ ತೆ–ರಿಗೆಯ ಅವಾಂತರಗಳು ಹಾಗೂ ಅನುಸರಿಸುತ್ತಿರುವ ಆರ್ಥಿಕ, ಸಾಮಾಜಿಕ ನೀತಿಗಳು ಸೃಷ್ಟಿಸಿರುವ ಬಿಕ್ಕಟ್ಟು, ಹಾಹಾಕಾರಗಳ ಧ್ವನಿ ಎಲ್ಲೆಡೆ ಮಾರ್ಧನಿಸುತ್ತಿದೆ. ದೇಶಕ್ಕೇ ಅಭಿವೃದ್ಧಿಯ ಮಾದರಿ ಎಂದೇ ಹೇಳಿಕೊಳ್ಳುತ್ತಿದ್ದ ಗುಜರಾತ್‌ನಲ್ಲಿ ಸೋಲುವ ಭೀತಿ ಮೋದಿಯಾದಿಯಾಗಿ ಬಿಜೆಪಿ ಹಾಗೂ ಕಾರ್ಪೋರೇಟ್ ವಲಯವನ್ನು ಕಾಡುತ್ತಿದೆ. ಹೀಗಾಗಿಯೇ ಚುನಾವಣಾ ದಿನಾಂಕಗಳನ್ನು ಪ್ರಕಟಿಸುವಲ್ಲಿ ಚುನಾವಣಾ ಆಯೋಗ ಹಿಂಜರಿದಿರುವಲ್ಲಿ ಇದರ ಪ್ರಭಾವವನ್ನು ಕಾಣಬಹುದು. ಎನ್.ಡಿ.ಎ–ಮೋದಿ ಎಂದರೆ ಭ್ರಷ್ಟಾಚಾರ ರಹಿತ, ಹಗರಣ ಮುಕ್ತ ಎಂಬ ಪ್ರಚಾರದ ಬಣ್ಣವೂ ಈ ವರುಷದಲ್ಲಿ ಬಯಲಾಗಿದೆ.

ಇನ್ನೊಬ್ಬರ ಮೇಲೆ ಅಂತಹುದೇ ಆರೋಪಗಳ ಸುರಿಮಳೆ ತಮ್ಮ ಮೇಲಿನ ಆರೋಪಗಳ ತೀವ್ರತೆ ತಗ್ಗಿಸುವ, ತೆರೆಗೆ ಸರಿಸುವ ಒಂದು ತಂತ್ರವೆಂದೇ ಆರೆಸ್ಸೆಸ್ ಪರಿವಾರ ಭಾವಿಸಿದೆ. ಕನಾಟಕದಲ್ಲಿ ಮತ್ತೇ ಅಧಿಕಾರ ಹಿಡಿಯಲು ಅಥವಾ ಓಟು ಕೇಳಲು ಜನರಿಗೆ ಮುಖ ತೋರಿಸಬೇಕಾದರೆ ಈ ತಂತ್ರ ಅನಿವಾರ್ಯವೆಂದು ಅದಕ್ಕೆ ಮೊರೆ ಹೋಗಿದೆ.

ತನ್ನ ಹಗರಣ ಹೊರ ಬರುತ್ತಿದೆಯೆಂಬ ಸುಳಿವರಿತ ಬಿಜೆಪಿ ಯು ಕಾಂಗ್ರೆಸ್ ಮೇಲೆ ಅಂತಹ ಆರೋಪ ಮಾಡಿ ಬಾಯಿ ಮುಚ್ಚಿಸುವ ಬ್ಲಾಕ್ ಮೇಲೆ ತಂತ್ರಕ್ಕೆ ಅದರ ನಾಯಕರು ಇಳಿದಿದ್ದಾರೆ. ವಿಶೇಷವೆಂದರೆ ಅಂತಹ ಪ್ರಯತ್ನದಲ್ಲಿ ತನ್ನ ಕೈಗಳಿಗೆ ಮತ್ತಷ್ಟು ಮಸಿ ಹತ್ತಿಸಿಕೊಂಡು ಮುಖಕ್ಕೆ ಮೆತ್ತಿಕೊಂಡಿರುವುದು! ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತೆ ಮಾಜಿ ಸಚಿವ, ಸಂಸದೆ ಶೋಭಾ ಕೆರಂದ್ಲಾಜೆ ಅಧಿಕಾರದಲ್ಲಿದ್ವಾಗ ನಡೆಸಿದ ಹಗರಣದ ವಿವರ ವರದಿ ಹೊರಬಂದಿದೆ. ಅದು ಸುಮಾರು 28,000 ಕೋಟಿ ರೂಪಾಯಿಗಳ ಭಾರೀ

ಹಗರಣ. ಹಾಗೇ ಮಾಜಿ ಮುಖ್ಯಮಂತ್ರಿ ಆರ್ ಅಶೋಕ್ ರರು ನಡೆಸಿದ ಸುಮಾರು 10,000 ಕೋಟಿ ರೂಪಾಯಿಗಳ ಭೂ ಹಗರಣವೂ ಕೂಡ.

ಕರ್ನಾಟಕ ಸರಕಾರಕ್ಕೆ, ಆ ಮೂಲಕ ರಾಜ್ಯದ ಜನರಿಗೆ ವಂಚಿಸಿ, ಪಂಗನಾಮ ಹಾಕಿದ ಮಹಾ ಭ್ರಷ್ಟಕಾಂಡ ಅದು! "ಅಪರೂಪದ ಈ ಜೋಡಿಗಳ" ಹಗರಣ ಯಾವುದು?

ಅದು 'ಅಪರೇಷನ್ ಕಮಲ' ನಡೆಸಿ ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ ಬಿಜೆಪಿ ಪಕ್ಷ ಕರ್ನಾಟಕದಲ್ಲಿ ಅಧಿಕಾರ ಹಿಡಿದ ಅವಧಿ. ಆಗ ರಾಜ್ಯದಲ್ಲಿ ವಿದ್ಯುತ್ ಅಭಾವ ಇದೆಯೆಂದು ಖಾಸಗಿ ಕಂಪನಿಗಳಿಂದ ಖರೀದಿಸುವ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿತ್ತು. 2010 ರಲ್ಲಿ 1580 ಮೆಗಾವ್ಯಾಟ್ ದೀರ್ಘಾವಧಿ (25 ವರ್ಷಗಳ) ಜಿಂದಾಲ್ ವಿದ್ಯುತ್ ಖರೀದಿ ಒಪ್ಪಂದವನ್ನು ರದ್ದುಗೊಳಿಸಬೇಕೆಂದು ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರುತ್ತದೆ! ಅದು ಬರೆದದ್ದು ಬೇರಾರೂ ಅಲ್ಲ, ಸ್ವತಃ ಶೋಭಾ ಕರಂದ್ಲಾಜೆಯವರೇ. ಅವರು ಕೊಟ್ಟ ಕಾರಣ. ಈ ಖರೀದಿ ದುಬಾರಿಯೆಂದು. ಹಾಗೂ ಪ್ರತಿ ವರ್ಷ ಖರೀದಿಸುವ ಒಪ್ಪಂದವೇ ಸಾಕು. ಮೇಲಾಗಿ ನಮ್ಮಲ್ಲೇ ಉತ್ಪಾದನೆ ಆಗಲಿದೆ ಎಂದು. ಆದರೆ.....

ಸಚಿವರ ನಿಲುವಿಗೆ ವ್ಯತಿರಿಕ್ತವಾಗಿ ಇಂಧನ ಇಲಾಖೆಯ ಚೀಫ್ ಎಂಜನೀಯರ್‌ರವರು ಈ ಖರೀದಿ ಒಪ್ಪಂದ ಸರಿ ಇದೆ, ರದ್ದುಗೊಳಿಸಬಾರದೆಂದು ಮುಖ್ಯಮಂತ್ರಿಗೆ ಪತ್ರ ಬರೆದಿರುತ್ತಾರೆ. ಆದರೆ..... ಇದನ್ನು ಗಣಿಸದ ಸಿ.ಎಂ.ರವರು ಒಪ್ಪಂದವನ್ನು ರದ್ದು ಮಾಡುತ್ತಾರೆ!

ಬಳಿಕ......

ಮತ್ತೇ ವಿದ್ಯುತ್ ಖರೀದಿಗೆ ಟೆ–ಂಡರ್ ಕರೆಯಲಾಗುತ್ತದೆ. ಅದರಲ್ಲಿ ಒಂದನ್ನು ಆರಿಸಲಾಗುವುದು. ಆದರೆ...... ಅದು ಹಿಂದಿನ ಥರವಲ್ಲ, ಬದಲಾಗಿ ರೂ.6.20 ಯುಂತೆ! ಸಂಸ್ಥೆ ಯಾವುದೆಂದಿರಿ? – ಅದೇ ಜಿಂದಾಲ್ ಕಂಪನಿಯೇ!

ಈ ಮರು ಟೆಂಡರ್‌ನಲ್ಲಿ ಒಪ್ಪಂದವಾದದ್ದು ಹಿಂದಿಗಿಂತ ಶೇ 90 ರಷ್ಟು ಧರ ಹೆಚ್ಚು. ಹೀಗಾಗಿಯೇ ಸರಕಾರಕ್ಕೆ, ಮುಖ್ಯವಾಗಿ ಜನಸಾಮಾನ್ಯ ಬಳಕೆದಾರರಿಗೆ ಸರಿ ಸುಮಾರು 28 ಸಾವಿರ ಕೋಟಿ ರೂಪಾಯಿಗಳ ಹೊರೆ. ಅರ್ಥಾತ್ ಅಧಿಕಾರಸ್ಥರ ಹಗಲು ದರೋಡೆ! ಈ ಭ್ರಷ್ಟ ಹಣವನ್ನು ಹಂಚಿಕೊಂಡಿರುವುದು ನಿಚ್ಚಳ.

ಈ ಪ್ರಕರಣದ ವಿವರಗಳು ಹೊರ ಬಂದ ನಂತರ ಶೋಭಾ ಕರಂದ್ಲಾಜೆಯವರು ತಮ್ಮದೇನೂ ಇದರಲ್ಲಿ ಪಾತ್ರವಿಲ್ಲ. ಎಲ್ಲವೂ ಅಧಿಕಾರಿಗಳದ್ದೇ ಎನ್ನುತ್ತಿದ್ದಾರೆ. ಬೇಕಾದರೆ ಸಿ.ಬಿ.ಐ. ತನಿಖೆಗೆ ಒಪ್ಪಸಿ, ವಿಚಾರಣೆ ನಡೆಸಲಿ ಎಂದೂ ಆಗ್ರಹಿಸುತ್ತಾರೆ! ಅಂದರೆ ಸಿಬಿಐ ಹೇಗೂ ಮೋದಿ ಕೈಯ್ಯಲ್ಲಿ. ಅಲ್ಲಿ 'ಕ್ಲೀನ್ ಚಿಟ್' ತೆ–ಗೆದುಕೊಂಡು ಖುಲಾಸೆಯಾಗಬಹುದು ಎಂದು!

ಈ ಪ್ರಕರಣ ಹೊರಗೆ ಬಂದದ್ದಕ್ಕೂ ವಿಶೇಷ ಹಿನ್ನೆಲೆಯೂ ಇದೆ.

2004ರಿಂದ 2008ರ ಅವಧಿಯಲ್ಲಿನ ಇಂಧನ ಖಾತೆಯಲ್ಲಿ ನಡೆದ ಹಗರಣಗಳನ್ನು ತನಿಖೆ ಮಾಡಬೇಕೆಂದು ಬಿಜೆಪಿಯ ಶಾಸಕರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ಬಸವರಾಜ ಬೊಮ್ಮಾಯಿಯವರು ಸರಕಾರಕ್ಕೆ ಪತ್ರ ಬರೆಯುತ್ತಾರೆ. ಈ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.ಎಸ್‌ನ ಮೈತ್ರಿ ಸರಕಾರ ಇತ್ತು. ಅದರಲ್ಲಿ ಜೆ.ಡಿ.ಎಸ್ ನ ಹೆಚ್.ಡಿ. ರೇವಣ್ಣನವರು ಇಂಧನ ಮಂತ್ರಿ. ಆ ಪತ್ರದಲ್ಲಿ ಆರೋಪಿಸಿದಂತೆ ಆಗ ಖರೀದಿಸಿದ 692 ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗಳನ್ನು

ಹೆಚ್.ಡಿ.ಕುಮಾರಸ್ವಾಮಿ ಒಬ್ಬ ಸದಸ್ಯರಾಗಿದ್ದರು. ಆದರೆ ಅವರು ಕಾಲಾನಂತರದಲ್ಲಿ ಸಭೆಗಳಿಂದ ದೂರ ಉಳಿದಿದ್ದರು! ಕೊಟ್ಟ ಕಾರಣವೇನೆಂದರೆ ಹಾಲಿ ಇಂಧನ ಸಚಿವರಾದ ಡಿ.ಕೆ.ಶಿವಕುಮಾರ್‌ರವರು ಯಡಿಯೂರಪ್ಪ, ಕರಂದ್ಲಾಜೆಯವರನ್ನು ರಕ್ಷಿಸುತ್ತಿದ್ದಾರೆ ಎಂಬ ಆ ಗುರುತರವಾದ ಆರೋಪ. ಆದ್ದರಿಂದಲೇ ಸದನ ಸಮಿತಿ ಕೆಲಸ ತೀವ್ರಗೊಳಿಸುತ್ತಿಲ್ಲ ಎಂದು. ಬಿ.ಎಸ್.ವೈ . ಸಿ.ಎಂ. ಆಗಿದ್ದಾಗ ಮಧ್ಯ ರಾತ್ರಿಯಲ್ಲಿ ಬೇಟಿ ಮಾಡುತ್ತಿದ್ದ ಇವರ ರಾಜಕೀಯ ಚರಿತ್ರೆ ತಿಳಿದಿರುವವರಿಗೆ ಆ ಆರೋಪದ ಈ ಯಾವ ಅಂಶಗಳನ್ನೂ ಅಷ್ಟು ಸುಲಭದಲ್ಲಿ ತಳ್ಳಿ ಹಾಕುವಂತೆ ಇಲ್ಲ. ಯಾಕೆಂದರೆ ಪಕ್ಷಗಳು ಬೇರೆ ಇರಬಹುದು. ಧೋರಣೆ–'ಕೊಡು–ಕೊಳ್ಳುವ' ಸಂಬಂಧಗಳು ಗೊತ್ತಿರುವಂತಹುದೇ. ಅಧಿಕಾರದಲ್ಲಿರುವ ಡಿಕೆಶಿ ಯಂತಹವರಿಗೆ ವಿರೋಧ ಪಕ್ಷದವರ ಬೆಂಬಲವೂ ಬೇಕು, ಕೇಂದ್ರದ ಕೃಪೆಯೂ ಇರಬೇಕು! ದುರಂತವೆಂದರೆ: ಈ ನಾಯಕರುಗಳಲ್ಲಿ ಆರೋಪ ಪ್ರತ್ಯರೋಪಗಳು ನಡೆಯುವಾಗ ಮಾತ್ರವೇ ಇಂತಹ ಹಗರಣಗಳ ವಾಸನೆ ಸಾರ್ವಜನಿಕರಿಗೆ ಗೊತ್ತಾಗುವುದು! ಹೀಗಿದೆ ನಮ್ಮ ಪ್ರಜಾಪ್ರಭುತ್ವ ಆಡಳಿತದ ಪಾರದರ್ಶಕತೆ!



ಈಗೇನೋ ಕರಂದ್ಲಾಜೆ, ಬಿಎಸ್ವೈ ಯವರ ಹಗರಣದ ವರದಿಯನ್ನು ಬೆಳಗಾವಿ ಅಧಿವೇಶನದಲ್ಲಿ ಮಂಡಿಸುವುದಾಗಿ ಸರಕಾರ ಹೇಳಿದೆ. ಖಂಡಿತಕ್ಕೂ ಹಲ್ಲು ಕಿತ್ತ ವರದಿ ಮಂಡಿಸುವುದೇ ಕ್ರಮವಲ್ಲ, ಬದಲಾಗಿ ಕ್ರಿಮಿನಲ್ ಮೊಕಧ್ದಮೆ ಹೂಡಿ ಉಗ್ರ ಕ್ರಮ ವಹಿಸುವಂತಹ ಶಿಫಾರಸು ಇರುವ ವರದಿ ಮಂಡಿಸಬೇಕು. ಕೇವಲ ಬಾಯಿ ಮುಚ್ಚಿಸುವ ನಾಟಕವಲ್ಲ. ಈ ಹಗರಣವನ್ನು ಕೇವಲ ಬ್ಲಾಕ್ ಮೇಲ್‌ಗೋ, ಪ್ರಚಾರಕ್ಕೋ ಬಳಸಿ ಮರೆಸುವ ವಂಚನೆಗೆ ಇದನ್ನು ಸರಕಾರ ಉಪಯೋಗಿಸಬಾರದು.

ಈಗ ಕಾಂಗ್ರೆಸ್ ನಾಯಕರು ಹೊರ ತಂದಿರುವ ಅಶೋಕರವರ ಭೂ ಹಗರಣವೂ ಅಷ್ಟೇ ಗಂಭೀರವಾಗಿದೆ. ಹಿಂದೆ ಆರ್ ಅಶೋಕ್ ರವರು ಬೆಂಗಳೂರು ನಗರ ಜಿಲ್ಲೆಯ ಬಗರ್ ಹುಕುಂ , ಸರಕಾರದ ಭೂ ಹಂಚಿಕೆಯ ಸಮಿತಿಯ ಅದ್ಯಕ್ಷರಾಗಿರುವಾಗ 75 ಗ್ರಾಮಗಳ ಸುಮಾರು 2500 ಎಕರೆ ಭೂಮಿಯ ಹಂಚಿಕೆಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಭಾರೀ ಅಕ್ರಮಗಳು ನಡೆದಿವೆ ಎಂದು ಆರೋಪಿಸಲಾಗಿದೆ. ಭೂ ಕಾನೂನಿನ ಎಲ್ಲಾ ಮಾನದಂಡಗಳನ್ನು ಉಲ್ಲಂಘಿಸಿ ಮಾಜಿ ಮಹಾ ನಗರ ಪಾಲಿಕೆಯ ಸದಸ್ಯರಿಗೆ, ತಮ್ಮ ಸಂಬಂಧಿಕರಿಗೆ, ಬಿಜೆಪಿ ಕಾರ್ಯಕರ್ತರಿಗೆ ಹೀಗೆ ಅನರ್ಹ ಫಲಾನುಭವಿಗಳಿಗೆ 16 ಗ್ರಾಮಗಳಲ್ಲಿ ಭೂಮಿಯನ್ನು ಮಂಜೂರು ಮಾಡಲಾಗಿದೆ. ಈ ಭೂಮಿ ಅತ್ಯಂತ ಬೆಲೆ ಬಾಳುವುದಾಗಿದ್ದು ಸುಮಾರು 10 ಸಾವಿರ ಕೋಟಿ ರೂ.ಗಳು ಎಂದು ಅಂದಾಜಿಸಲಾಗಿದೆ. ಇದು ಸರಕಾರಕ್ಕೆ ಹಾಕಿದ ಪಂಗನಾಮ. ಇಂತಹ ಮಂಜೂರಾತಿ ಮಾಡಿದಾಗ ಇದರಲ್ಲಿ ಆದ ಅಕ್ರಮಗಳ ಬಗ್ಗೆ ಅಂದಿನ ತಹಶೀಲ್ದಾರ್‌ರವರು ಜಿಲ್ಲಾಧಿಕಾರಿಗಳಿಗೆ ವರದಿಯನ್ನೂ ನೀಡಿದ್ದರು. ಅದನ್ನೆಲ್ಲಾ ಬೈಪಾಸ್ ಮಾಡಿ ಹಂಚಿರುವ ಪ್ರಕರಣ ಭಾರಿ ಭ್ರಷ್ಟ ಹಗರಣವಾಗಿದೆ. ಈ ನಾಯಕರು ನೆಪ ಹೇಳುವ ಬದಲು ತನಿಖೆಗೆ ಸಿದ್ಧರಾಗಬೇಕಿದೆ.

28,000 ಕೋಟಿ ರೂಪಾಯಿಗಳ ಈ ಇಂಧನ ಹಗರಣ, ಆರ್ ಅಶೋಕ 'ಚಕ್ರವರ್ತಿ' ಭೂ ಹಗರಣಗಳು ಬಿಜೆಪಿ ಸರಕಾರದಲ್ಲಿ ನಡೆದ ನೂರಾರು ಹಗರಣಗಳಲ್ಲಿ ಒಂದು ಮಾತ್ರ. ಇಂತಹ ಕ್ರಿಮಿನಲ್ ಹಗರಣಗಳನ್ನು ಇಟ್ಟುಕೊಂಡೂ ಬಿಜೆಪಿ ಕರ್ನಾಟಕ ನವ ಪರಿಪರಿವರ್ತನಾ ಯಾತ್ರೆಗೆ ಹೊರಟಿದೆ. ರಾಜ್ಯ ಕಾಂಗ್ರೆಸ್ ಸರಕಾರದ ಭ್ರಷ್ಟಾಚಾರಗಳನ್ನು ದಿನವೊಂದರಂತೆ ದಾಖಲೆ ಸಮೇತ ಮಂಡಿಸುವುದಾಗಿ ಹೇಳಿದೆ. ಆದರೆ ಇದರ ನಾಯಕರ ಕೈಗೆ, ಮೈಗೆ ಹಗರಣಗಳ ಮಸಿ ಮೆತ್ತಿಕೊಂಡಿದೆ. ಇಡೀ ವಿಶ್ವದ ಗಮನ ಸೆಳೆದ ಗಣಿ ಹಗರಣವನ್ನು ಮೋದಿ ಸರಕಾರ ಸಿಬಿಐ ಮೂಲಕ 'ಮುಗಿಸಿ' ಬಿಟ್ಟಿದೆ. ಈ ಮಾಫಿಯಾ ಪರಿವಾರ ನಡೆಸಿದ ಸಾರ್ವಜನಿಕ ಸಂಪತ್ತಿನ ಲೂಟಿ, ಅಧಿಕಾರ ದಾಹಕ್ಕೆ ನಡೆಸಿದ ಹಿಂಸಾಕಾಂಡದ ರಕ್ತದ ಕಲೆಗಳ ಕರಾಳ ಮುಖ ಹೊತ್ತು ನಡೆದಿರುವ ಇವರು ಸೌಹಾರ್ದ ಕರ್ನಾಟಕದಲ್ಲಿ ಎಂತಹ ಪರಿವರ್ತನೆ ತರಬಲ್ಲರು?

2017 ನವೆಂಬರ್ 2 ರಂದು ಬೆಂಗಳೂರಿನಲ್ಲಿ ಉಧ್ಘಾಟನೆಗೊಂಡ ಬಿಜೆಪಿಯ 'ಪರಿವರ್ತನಾ ಯಾತ್ರೆ' ಆರಂಭದಲ್ಲೇ ಜನರ ನೀರಸ ಪ್ರತಿಕ್ರಿಯೆಯಿಂದ ವಿಫಲಗೊಂಡಿದೆ. ಮೂರು ಲಕ್ಷ ಕಾರ್ಯಕರ್ತರು ಭಾಗವಹಿಸುವರೆಂದೂ ಭಾರೀ ಪ್ರಚಾರ ಮಾಡಲಾಗಿತ್ತು. ಮತ್ತು ಖುರ್ಚಿಗಳ ವ್ಯವಸ್ಥೆಯೂ ಇತ್ತು. ಆದರೆ ರಾಷ್ಟೀಯ ಅಧ್ಯಕ್ಷ ಅಮಿತ್ ಷಾ ಯಾತ್ರೆ ಉಧ್ಘಾಟಿಸಿ. ಮಾತನಾಡುವಾಗ ಲಕ್ಷಾಂತರ ಖುರ್ಚಿಗಳು ಖಾಲಿ, ಖಾಲಿ. ಬಂದವರೂ ಅವರ ಭಾಷಣ ಕೇಳಲೂ ತಯಾರಿಲ್ಲ. ಹೀಗಾಗಿ ಸ್ವತಃ ಮಾಜಿ ಮುಖ್ಯಮಂತ್ರಿ ಅಶೋಕ್ ಮುಂತಾದ ನಾಯಕರು ಜನರಿಗೆ ಕೈ ಮುಗಿದು ಭಾಷಣ ಕೇಳಲು ಬರಬೇಕೆಂದು ಅಂಗಲಾಚುತ್ತಿದ್ದರು. ಮೇಲಾಗಿ ಸಭಾ ವೇದಿಕೆಯಲ್ಲಿಯೂ ಬಿಜೆಪಿ ನಾಯಕರ ಯಡವಟ್ಟುಗಳು, ಗೊಂದಲಗಳು, ಪಕ್ಷದೊಳಗಿನ ಹಲವು ಗುಂಪುಗಳ ಕದನ, ಕಚ್ಚಾಟ ಢಾಳಾಗಿ ಪ್ರದರ್ಶನಗೊಂಡಿತು. ಇವರಲ್ಲೇ ಕನಿಷ್ಠ ಒಗ್ಗಟ್ಟು, ಸದುದ್ದೇಶಗಳೇ ಇಲ್ಲದಿರುವಾಗ ರಾಜ್ಯದಲ್ಲಿ ಏನನ್ನು ಸೃಷ್ಟಿಸಬಲ್ಲರು ಎಂಬ ಪ್ರಶ್ನೆಗಳು ಜನರಲ್ಲಿ ಎದ್ದು ಬಂದವು.

ಬಿಜೆಪಿ ನಾಯಕರೇ ಘೋಷಿಸಿಕೊಂಡಂತೆ ಇದು ಕರ್ನಾಟಕದ ಪರಿವರ್ತನೆಯ ಯಾತ್ರೆಯಾಗಿರದೇ ಮುಂದಿನ ಚುನಾವಣೆಯಲ್ಲಿ ಕನಿಷ್ಠ 150 ಸೀಟುಗಳನ್ನು ಗೆಲ್ಲುವ, ಹೇಗಾದರೂ ಅಧಿಕಾರ ಹಿಡಿಯುವ 'ಅಧಿಕಾರ ದಾಹದ' ಯಾತ್ರೆ ಎಂಬುದೂ ಸ್ಪಷ್ಟವಾಯಿತು. ಅದಕ್ಕಾಗಿ ಅಭಿವೃದ್ಧಿ–ಪರಿವರ್ತನೆ ಮಾತನಾಡುತ್ತಲೇ ವಿವಿಧ ಮತಧರ್ಮಗಳ ಜನರ ನಡುವೆ ವೈಷಮ್ಯ ಬಿತ್ತುವ ಅಜೆಂಡಾವೂ ಹೊರ ಬಂತು. ಕನ್ನಡ ಭಾಷಿಕರನ್ನು ಟಿಪ್ಪುವಿನ ವಿರುದ್ಧ ಎತ್ತಿ ಕಟ್ಟುವ ಹುನ್ನಾರವನ್ನೂ ಷಾ ನಡೆಸಿದರು. ಕ್ರಿಮಿನಲ್ ಅಪರಾಧಗಳಿಂದ ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್‌ಷಾ, ರಾಜ್ಯ ಅಧ್ಯಕ್ಷರಾದ ಬಿ.ಎಸ್. ಯಡಿಯೂರಪ್ಪನವರಾದಿಯಾಗಿ ಜೈಲು ಸೇರಿದ್ದೇಕೆ? ಇಂತಹವರು ಅದೆಂತಹ ಪರಿವರ್ತನೆ ತರುತ್ತಾರೆ ಎಂಬ ಪ್ರಶ್ನೆಗೆ ಅವರಿಂದ ಉತ್ತರವಿಲ್ಲ.

ಹಗರಣಗಳ ಮುಖ ಹೊತ್ತಿರುವ ಇವರು ಮುಖ ಉಳಿಸಿಕೊಳ್ಳಲು ಬೇರೆಯವರಿಗೆ ದಿನಕ್ಕೊಂದು ಭಾರೀ ಪ್ರಶ್ನೆ ಹಾಕಬಲ್ಲರೇ ಹೊರತು, ಉತ್ತರ ಹೇಳಲಾರರು. ಇವರಿಗೆ ತಕ್ಕ ಉತ್ತರ ಹೇಳಬೇಕಾದವರು ಜನರೇ.

ದಲಿತ ಹಕ್ಕುಗಳ ಸಮಿತಿ ಕರ್ನಾಟಕದ ಯಶಸ್ವಿ 2ನೇ ರಾಜ್ಯ ಸಮಾವೇಶ



ರಾಜ್ಯದಲ್ಲಿ ದಲಿತರ ಜ್ವಲಂತ ಪ್ರಶ್ನೆಗಳಿಗಾಗಿ ಅಸ್ಪೃಶ್ಯತೆ, ಜಾತಿ ತಾರತಮ್ಯಗಳ ವಿರುದ್ಧ ಹೋರಾಟ ನಡೆಸುತ್ತಿರುವ ದಲಿತ ಹಕ್ಕುಗಳ ಸಮಿತಿ ಎರಡು ವರ್ಷಗಳಿಂದ ಸಮರಶೀಲ ಹೋರಾಟ ನಡೆಸುತ್ತಾ ಕರ್ನಾಟಕ 2ನೇ ರಾಜ್ಯ ಸಮಾವೇಶವನ್ನು ಅಕ್ಟೋಬರ್ 28ರಂದು ಯಶಸ್ವಿಯಾಗಿ ನಡೆಸಿತು.

ಸಮಾವೇಶವನ್ನು ದಲಿತ ಶೋಷಣಾ ಮುಕ್ತಿಮಂಚ್(ಡಿ.ಎಸ್.ಎಂ.ಎಂ.) ಅಖಿಲ ಭಾರತ ಮುಖಂಡರಾದ ಶ್ರೀನಿವಾಸ್ ರಾವ್ ರವರು ಉದ್ಘಾಟಿಸಿದರು. ಕರ್ನಾಟಕದಲ್ಲಿ ದಲಿತರ ನಡುವೆ ಡಿ.ಹೆಚ್.ಎಸ್. ಹೋರಾಟಗಳನ್ನು ಪ್ರಶಂಶಿಸುತ್ತಾ ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ಚಳುವಳಿ ಕಡಿಮೆ ಇರುವ ರಾಜ್ಯವಾಗಿದ್ದು ಇಲ್ಲಿ ನಿಮ್ಮ ಕೆಲಸ ಉತ್ತಮವಾಗಿರುವುದು ಒಳ್ಳೆಯ ಆಶಾದಾಯಕ ಬೆಳವಣಿಗೆಯಾಗಿದೆ.

ರಾಷ್ಟ್ರಮಟ್ಟದಲ್ಲಿ ದಲಿತ ಶೋಷಣಾ ಮುಕ್ತಿ ಮಂಚ್(ಡಿ.ಎಸ್.ಎಂ.ಎಂ.) 22 ರಾಜ್ಯಗಳಲ್ಲಿ ಕೆಲಸ ನಿರ್ವಹಿಸುತ್ತಿದೆ. ಜಮ್ಮು-ಕಾಶ್ಮೀರದಲ್ಲಿ ದಲಿತ ಸಂಘಟನೆ ಸ್ಥಾಪನೆಯಾಗಿದೆ. ದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಬಿ.ಜೆ.ಪಿ. ಮೋದಿ ಸರ್ಕಾರದಲ್ಲಿ ಹೆಚ್ಚಾಗಿದ್ದು ಇದಕ್ಕೆ ಆರ್.ಎಸ್.ಎಸ್.ನ ಪೂರ್ಣ ಬೆಂಬಲ ನೀಡಿದೆ.

ಈ ಹಿಂದೆ ಮನುವಾದಿಗಳಿಗೆ ಅಂಬೇಡ್ಕರ್‌ರವರನ್ನೇ 'ಸಂವಿಧಾನ' ರಚಿಸಲು ನೀವ್ಯಾರು ಎಂದು ಪ್ರಶ್ನಿಸಿದರು. ನೀವು ಹಿಂದುಗಳೇ ಆದರೆ ನಿಮ್ಮ ಸ್ಥಾನವನ್ನು ನಿರ್ಧಾರ ಮಾಡುವವರು ನಾವೇ. ಮನುಧರ್ಮದ ಪ್ರಕಾರ ನೀವು ಅಸ್ಪೃಶ್ಯರು ಎಂದು ಹೇಳುತ್ತಿದ್ದವರು ಈ ದೇಶದ ಅಧಿಕಾರ ಹಿಡಿದಿದ್ದಾರೆ. ಈ ಹಿನ್ನೆಲೆಯಲ್ಲಿ ದಲಿತರು ಅಂಬೇಡ್ಕರ್‌ರವರ ಬೌದ್ಧ ಧರ್ಮಕ್ಕೆ ಸೇರಿದರು. ಇವರೇ Converted ಗುಂಪಾಗಿ ಮೀಸಲಾತಿ ಸೌಲಭ್ಯ ಕೇಳುತ್ತಿದ್ದಾರೆ. ಇದನ್ನು ಬಿ.ಎಸ್.ಪಿ. ವಿರೋಧಿಸಿದೆ.

ದಲಿತರನ್ನು ನಾಯಿಗಳಿಗೆ ಹೋಲಿಸಲಾಗುತ್ತಿದೆ. ಮೀಸೆ ಬಿಟ್ಟ ಕಾರಣಕ್ಕೆ ಮತ್ತು ಗಾರ್ಬಾ ನೃತ್ಯ ನೋಡಿದ ಕಾರಣಕ್ಕೆ ದಲಿತರನ್ನು ಕೊಲ್ಲಲಾಗುತ್ತಿದೆ. ರಾಜಸ್ಥಾನದಲ್ಲಿ ಪಕ್ಕದಲ್ಲಿ ಕುಳಿತಿದ್ದ ಎಂಬ ಕಾರಣ-ಕ್ಕೆ ಕೊಂದಿದ್ದಾರೆ. ಉತ್ತರ ಪ್ರದೇಶದಲ್ಲಿ ದಲಿತ ಮಹಿಳೆಯೊಬ್ಬಳು ಗಾಡಿ ಮಗುಚಿ ಕೆಳಗೆ ಬಿದ್ದಾಗ ಮೇಲ್ಜಾತಿಯವರ ಬಕೆಟ್ ಸೋಕಿದ್ದಕ್ಕೆ ಬಸು-ರಿಯಾದ ದಲಿತ ಮಹಿಳೆಯನ್ನು ಹೊಡೆದಿದ್ದಾರೆ. ಆತನ ಮಗ ಬಂದು ಬಸುರಿ ಹೊಟ್ಟೆಗೆ ತಿವಿದು ರಕ್ತಸ್ರಾವವಾಗಿ ಆಸ್ಪತ್ರೆಯಲ್ಲಿ ಮಗು ಮತ್ತು ತಾಯಿ ತೀರಿಕೊಂಡಿದ್ದಾರೆ.

ಮೋದಿ ಅಧಿಕಾರ ಬಂದು ವಂಚಿಸಿದೆ. ದಲಿತ ವಿರೋಧಿಯಾಗಿದೆ. ಎಸ್.ಸಿ.ಎಸ್.ಪಿ./ಟಿ. ಎಸ್.ಪಿ. ಯೋಜನೆಗೆ ಕಾಂಗ್ರೆಸ್ ಯು.ಪಿ.ಎ. ಸರ್ಕಾರ 2013-14ರಲ್ಲಿ 40,000 ಕೋಟಿ ಹಣ ಒದಗಿಸಿದ್ದರು. ಮೋದಿ ಸರ್ಕಾರ 2014-15ರಲ್ಲಿ 30,000 ನೀಡಿ ಕಡಿತಗೊಳಿಸಿದೆ. ಎಸ್.ಸಿ.ಎಸ್.ಪಿ. ಯನ್ನು ರದ್ದುಗೊಳಿಸಲಾಗಿದೆ, ನೀತಿ ಆಯೋಗ ಜಾರಿ ಬಂದಿದೆ. ತಾರತಮ್ಯಗಳ ವಿರುದ್ಧ ಹೋರಾಟ ನಡೆಸಿದ್ದೇವೆ. ದಲಿತ ದೌರ್ಜನ್ಯಗಳ ತಡೆ ಕಾನೂನು ಬಲಗೊಳಿಸಬೇಕಾಗಿದೆ.

ಡಿ.ಎಸ್.ಎಂ.ಎಂ. ಮೂಲಕ ಪ್ರತಿಭಟನೆ ನಡೆಸಿದ್ದೇವೆ. ಎಲ್ಲರನ್ನು ಒಟ್ಟುಗೂಡಿಸಿ ಪ್ರಚಾರ ಪ್ರಕ್ಷೋಬೆ ನಡೆಸಿದ್ದೇವೆ. ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಆಚರಣೆ ಹೋಗಲಾಡಿಸದೆ 'ಸ್ವಚ್ಛ ಭಾರತ' ಸ್ಥಾಪನೆ ಅಸಾಧ್ಯವಾಗಿದೆ.

ನಮ್ಮಿಂದ ಮಾತ್ರ ಈ ಹೋರಾಟ ಸಾಧ್ಯವಿದೆ ಎಂದು ಭಾವಿಸುವುದು ಬೇಡ. ಎಲ್ಲರನ್ನು ಒಟ್ಟುಗೂಡಿಸಿ ಡಿ.ಎಸ್.ಎಂ.ಎಂ. ರಚಿಸಲಾಗಿದೆ. ನಮ್ಮ ವೇದಿಕೆಯಲ್ಲಿ ಈ ಹೋರಾಟ ನಡೆಸುವ ಉದ್ದೇಶವಾಗಿದೆ. ಯಾವುದೇ ರಾಜಕೀಯ ಪಕ್ಷದ್ದಲ್ಲ ಡಿ.ಎಸ್.ಎಂ.ಎಂ. ಡಿ.ಹೆಚ್.ಎಸ್./ ಡಿ.ಎಸ್.ಎಂ.ಎಂ. ನ್ನು ಬಲಿಷ್ಠ ಮಾಡದೆ ಇದು ಸಾಧ್ಯವಿಲ್ಲ. ಜಾತಿ-ತಾರತಮ್ಯದ ವಿರುದ್ಧ ಬಲವಾದ ಚಳುವಳಿಯನ್ನು ಕಟ್ಟಬೇಕು. ಪ್ರತಿ ವ್ಯಾಪ್ತಿ, ಪ್ರತಿ ಗ್ರಾಮದಲ್ಲಿ ನೆಲಮಟ್ಟದಲ್ಲಿ ವಿಸ್ತರಿಸಬೇಕು. ದೊಡ್ಡ ಪ್ರಮಾಣದಲ್ಲಿ ಬೆಳೆಸಿ, ಸಂಘ ರಚಿಸಬೇಕಾಗಿದೆ.

ಯುವಕರು, ವಿದ್ಯಾವಂತರು ಗ್ರಾಮ ಮಟ್ಟದಲ್ಲಿ ವಿಸ್ತರಿಸಬೇಕು. ನೂರಾರು ಕಾರ್ಯಕರ್ತರನ್ನು ತರಬೇಕು. ನಾಯಕರಷ್ಟೇ ಜಿಲ್ಲೆಗಳಲ್ಲಿ, ತಾಲ್ಲೂಕು ರಾಜ್ಯಗಳಲ್ಲಿ ಕೆಲಸ ಮಾಡದಿದ್ದರೆ ವಿಸ್ತಾರ ಸಾಧ್ಯವಿಲ್ಲ.

ಆಧ್ಯತೆಯ ಮೇರೆಗೆ ಚಳುವಳಿ ವಿಸ್ತಾರತೆಯಿಂದ ಮುಂದುವರಿಯಬೇಕು ವಾರದಲ್ಲಿ ಒಂದೆರಡು ದಿನ, ತಿಂಗಳಲ್ಲಿ ಒಂದೆರಡು ವಾರ ಈ ಚಳುವಳಿಗಾಗಿ ದುಡಿಯಬೇಕು.

ಗ್ರಾಮ ಮಟ್ಟದಲ್ಲಿ ಕಾರ್ಯಕರ್ತರಿಗೆ ಆಧ್ಯತೆ ನಿಧಿ ಸಂಗ್ರಹಣೆ ಮಾಡಿ ದೊಡ್ಡ ವೇದಿಕೆಯಾಗಿ ಬೆಳೆಸಬೇಕಾಗಿದೆ. ಬಿಜೆಪಿ-ಆರ್‌ಎಸ್‌ಎಸ್ ಸಂಘಪರಿವಾರ ಮನುಸ್ಮೃತಿಗಾಗಿ ಹೋರಾಟ ಮಾಡುತ್ತಿದ್ದಾರೆ. ನಾವು ಜಾತಿ-ತಾರತಮ್ಯ ವಿರುದ್ಧ ಹೋರಾಟ ನಡೆಸಿದ ಪೆರಿಯಾರ್, ನಾರಾಯ-ಣಗುರು, ಅಂಬೇಡ್ಕರ್, ಜೋತಿ ಬಾ ಪುಲೆ ದಂಪತಿಗಳು, ಬಸವಣ್ಣ ಇವರು, ಭಗತ್‌ಸಿಂಗ್ ಇವರ ಪರಂಪರೆಯನ್ನು ಮುಂದುವರಿಸಬೇಕು ಎಂದು ಶ್ರೀನಿವಾಸ್ ರಾವ್ ಹೇಳಿದರು.

ಸಮಾವೇಶದಲ್ಲಿ ರಾಜ್ಯದ ಎಲ್ಲಾ 22 ಜಿಲ್ಲೆಗಳಿಂದ 94 ಪ್ರತಿನಿಧಿಗಳು ಭಾಗವಹಿಸಿದ್ದರು. ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ ಚಟುವಟಿಕೆಗಳ ವರದಿ ಮಂಡಿಸಿದರು. ಚರ್ಚೆಯ ನಂತರ ವರದಿಯನ್ನು ಅಂಗೀಕರಿಸಲಾಯಿತು. ನವಂಬರ್ 4,5, 6-2017ರಂದು ನಡೆಯುವ ದಲಿತ ಶೋಷಣಾ ಮುಕ್ತಿ ಮಂಚ್(ಡಿ.ಎಸ್.ಎಂ.ಎಂ)ನ ದ್ವಿತೀಯ ರಾಷ್ಟ್ರ ಸಮಾವೇಶಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಅಂಗೀಕರಿಸಲಾಗಿದ್ದ ವರದಿಯಲ್ಲಿದ್ದ **"ಮುಂದೆ ನಿರ್ವಹಿಸಬೇಕಾದ ಜವಾಬ್ದಾರಿಗಳು"** ಮತ್ತು **"ಮುಂದಿನ ಹೋರಾಟಗಳ"** ಯೋಜನೆಯನ್ನು ಕೆಳಗೆ ಕೊಡಲಾಗಿದೆ.



ಮುಂದೆ ನಿರ್ವಹಿಸ ಬೇಕಾದ ಜವಾಬ್ಧಾರಿಗಳು :

- ಅ-30ರಂದು ಪಂಜಿನ ಮೆರವಣಿಗೆ ಯಶಸ್ವಿಗೋಳಿಸುವುದು.
- ರಾಜ್ಯ ಸಮಿತಿ ನಿರ್ಧಾರದಂತೆ ನಿಧಿ ಸಂಗ್ರಹಿಸುವುದು.
- ಜಿಲ್ಲೆಗೊಬ್ಬ ಪೂರ್ಣಕಾಲ ಕಾರ್ಯಕರ್ತರನ್ನು ಗುರುತಿಸಿ ಸಜ್ಜುಗೋಳಿಸುವುದು.
- 100 ತಾಲೋಕ್ 20 ಜಿಲ್ಲೆಗೆ ಸಂಘಟನೆ ವಿಸ್ತರಿಸಬೇಕು. ಜಿಲ್ಲಾ-ತಾಲೋಕ್ ಸಮಾವೇಶ ನಡೆಸಿ ಸಂಘಟನೆಯನ್ನು ಬಲಗೊಳಿಸಬೇಕು.


ಮುಂದಿನ ಹೋರಾಟಗಳು:

1. ಪ್ರತಿ ತಾಲೋಕ್‌ನಲ್ಲಿ ದೇವಸ್ಥಾನ ಪ್ರವೇಶ ತಡೆ, ದಲಿತರ ಭೂಮಿ ಅತಿಕ್ರಮಣ, ಹೋಟೆಲ್ ಪ್ರವೇಶ ತಡೆ, ಕ್ಷೌರ ನಿರಾಕರಣೆ, ಸ್ಮಶಾನ ಭೂಮಿಗಾಗಿ, ಸಾಮಾಜಿಕ ಭಹಿಷ್ಕಾರ ಇಂತಹ ಪ್ರಶ್ನೆಗಳನ್ನು ಪತ್ತೆ ಹಚ್ಚಿ ಹೋರಾಟ ರೂಪಿಸುವುದು. ಇತರೆ ಪ್ರಗತಿಪರರನ್ನು ಕೂಡಿಸಿಕೊಳ್ಳುವುದು.
2. ಡಿಸಂಬರ್-6: ಡಾ.ಬಿ.ಆರ್. ಅಂಬೇಡ್ಕರ್‌ರವರ ಪರಿನಿರ್ವಾಣ ದಿನದಿಂದ ಅಸ್ಪ್ರಶ್ಯತಾ ನಿರ್ಮೂಲನೆ, ಜಾತಿ ತಾರತಮ್ಯಗಳ ವಿರುದ್ಧ ತಿಂಗಳ ಪೂರ್ತಿ ಪ್ರಚಾರ-ಆಂದೋಲನ ನಡೆಸುವುದು: ಈ ದಿನಗಳಲ್ಲಿ ತಾಲೋಕಿನಾದ್ಯಂತ ಸೈಕಲ್ ಜಾಥಾ, ಬೈಕ್ ಜಾಥಾ, ವಾಹನ ಜಾಥಾ ನಡೆಸಿ ಜಾತಿವಿನಾಶದ ಬಗ್ಗೆ ಜನಜಾಗೃತಿ ಮೂಡಿಸುವುದು.
3. ಜನವರಿ -30ರಂದು 'ಸೌಹಾರ್ದತಾ ಮಾನವ ಸರಪಳಿ' ಬೀದರ್ ನಿಂದ ಮಲೆಮಹಾದೇಶ್ವರ ಬೆಟ್ಟದ ವರೆಗೆ ನಡೆಯುವ ಈ ಬೃಹತ್ ಕಾರ್ಯಕ್ರಮ ಯಶಸ್ವಿಗೊಳಿಸುವುದು.

ನ್ಯಾ. ನಾಗಮೋಹನ ದಾಸ್ ಅಭಿನಂದನೆಗಳು!



ನ್ಯಾ. ನಾಗಮೋಹನ ದಾಸ್ ಅವರಿಗೆ ಈ ವರ್ಷದ ರಾಜ್ಯೋತ್ಸವ ಪ್ರಶಸ್ತಿ ಬಂದಿದ್ದು, ಅವರಿಗೆ ಜನಶಕ್ತಿಯ ಅಭಿನಂದನೆಗಳು. ಅವರು ನ್ಯಾಯಾಂಗದಲ್ಲಿ ದಶಕಗಳ ಕಾಲ ಮೊದಲಿಗೆ ವಕೀಲರಾಗಿ ಆ ಮೇಲೆ ಹೈಕೋರ್ಟು ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ ಜನತೆಯ ಮನ್ನಣೆ ಗಳಿಸಿದ್ದರು. ನ್ಯಾಯಾಂಗದಲ್ಲಿ ಸಂವಿಧಾನದ ಹಾಗೂ ವಿವಿಧ ಕಾನೂನುಗಳ ಜನ-ಪರ ಆಶಯಗಳನ್ನು ಎತ್ತಿ ಹಿಡಿಯುವಲ್ಲಿ ಸಾಕಾರಗೊಳಿಸುವಲ್ಲಿ ಅವರ ಕೊಡುಗೆ ದೊಡ್ಡದು. ಜನ-ಪರ ನ್ಯಾಯಾಧೀಶರು ಎಂಬ ಮನ್ನಣೆ ಗಳಿಸಿದ ಕೆಲವೇ ನ್ಯಾಯಾಧೀಶರುಗಳಲ್ಲಿ ಅವರು ಒಬ್ಬರು. ಅವರ ಪ್ರಸಿದ್ಧ ಜನಪರ ತೀರ್ಪುಗಳು ಜನ-ಶಿಕ್ಷಣ ತೀರ್ಪುಗಳು ಕೂಡಾ. ನ್ಯಾಯಾಂಗದ ಕಾನೂನು ಶಿಕ್ಷಣ ಮತ್ತು ಕಾನೂನು ಸಹಾಯ ಯೋಜನೆಗಳನ್ನು ಅವರು ಅರ್ಥಪೂರ್ಣವಾಗಿ ಜಾರಿಗೊಳಿಸಿದವರು. ಅವರು ವಿದ್ಯಾರ್ಥಿ ದೆಸೆಯಿಂದಲೂ ಎಡ-ಪ್ರಜಾಪ್ರಭುತ್ವ ಚಳುವಳಿಯಲ್ಲಿ ಭಾಗವಹಿಸಿ ದುಡಿದವರು. ಎಡಪಂಥೀಯ ಚಿಂತನೆ ಧೋರಣೆ ಬೆಳೆಸಿಕೊಂಡವರು. ಡಿ.ವೈ. ಎಫ್.ಐ. ಸಂಘಟನೆಯಲ್ಲಿ ಸಕ್ರಿಯರಾಗಿದ್ದು ಅದರ ರಾಜ್ಯ ಅಧ್ಯಕ್ಷರಾಗಿದ್ದರು. ನ್ಯಾಯಾಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾಗಲೂ ಆ ಮೇಲೂ ಅವರು ಯಾವತ್ತೂ ತಮ್ಮ ಎಡಪಂಥೀಯ ಚಿಂತನೆ ಧೋರಣೆಗಳು ಮತ್ತು ಜನಪರ ಚಟುವಟಿಕೆಗಳಿಂದ ದೂರ ಸರಿಯಲಿಲ್ಲ. ಜನರ ಸಮಸ್ಯೆಗಳ ಸಂವಿಧಾನಾತ್ಮಕ ಕಾನೂನಾತ್ಮಕ ಆಯಾಮಗಳ ಬಗ್ಗೆ ಅವರು ಹಲವು ಅಮೂಲ್ಯ ಲೇಖನ, ಪುಸ್ತಕಗಳನ್ನು ಬರೆದಿದ್ದಾರೆ. ಇಂತಹ ವಿಷಯಗಳ ಬಗ್ಗೆ ವಿಚಾರ ಸಂಕಿರಣಗಳು, ಸಮ್ಮೇಳನಗಳು, ಸಮಾವೇಶಗಳು ನ್ಯಾ. ದಾಸ್ ಇಲ್ಲದೆ ಪೂರ್ಣವಾಗುತ್ತಿರಲಿಲ್ಲ. ಸಂವಿಧಾನದ ಮೂಲ ಆಶಯಗಳ ಬಗ್ಗೆ ಅವರ ಭಾಷಣಗಳು ಅತ್ಯಂತ ಜನಪ್ರಿಯವೂ ಶೈಕಣಿಕ ಮೌಲ್ಯ ಇರುವಂಥವೂ ಆಗಿರುತ್ತಿದ್ದವು.


ಬಿ. ಗಂಗಾಧರ ಮೂರ್ತಿ


ಸಿ. ಯತಿರಾಜು



ಸಿ.ಕೆ. ಗುಂಡಣ್ಣ

ನ್ಯಾ. ನಾಗಮೋಹನ ದಾಸ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡುವ ಮೂಲಕ ಅದರ ಗೌರವ ಹೆಚ್ಚಿದೆ ಎನ್ನಬಹುದು. ಇದಲ್ಲದೆ ಈ ವರ್ಷ ಪ್ರಗತಿಪರ ಚಿಂತಕ ಚಳುವಳಿಗಾರ ಪ್ರೊ.ಬಿ. ಗಂಗಾಧರ ಮೂರ್ತಿ, ಪ್ರಗತಿಪರ ರಂಗ ಮತ್ತು ಕಾರ್ಮಿಕ ಚಳುವಳಿಗಳ ಹಿರಿಯ ನಾಯಕ ಸಿ.ಕೆ.ಗುಂಡಣ್ಣ, ಕರ್ನಾಟಕದಲ್ಲಿ ವಿಜ್ಞಾನ ಮತ್ತು ಪರಿಸರ ಚಳುವಳಿಗಳ ಅಧ್ವರ್ಯುಗಳಲ್ಲಿ ಒಬ್ಬರಾದ ಸಿ. ಯತಿರಾಜು ಅವರಿಗೂ ರಾಜ್ಯೋತ್ಸವ ಪ್ರಶಸ್ತಿ ಕೊಡುವ ಮೂಲಕ ಅದರ ಗೌರವ ಹೆಚ್ಚಿದೆ. ಅವರುಗಳಿಗೂ ಮತ್ತು ಇತರ ರಾಜ್ಯೋತ್ಸವ ಪ್ರಶಸ್ತಿ ವಿಜೇತರಿಗೂ ಜನಶಕ್ತಿಯ ಅಭಿನಂದನೆಗಳು.

ಮಾತೆಂದರೆ ಇದು

"ತಳ ವರ್ಗಗಳು" ಹಳೆಯ ರೀತಿಯಲ್ಲೇ ಬದುಕಲು ನಿರಾಕರಿಸಿದಾಗ ಮತ್ತು "ಮೇಲು ವರ್ಗಗಳು" ಹಳೆಯ ರೀತಿಯಲ್ಲೇ ಬದುಕುವುದು ಅಸಾಧ್ಯವಾದಾಗ, ಕ್ರಾಂತಿ ವಿಜಯಿಯಾಗುತ್ತದೆ

– ವಿ.ಐ. ಲೆನಿನ್



ಕನ್ನೇಶ್ವರ ರಾಮ ಮತ್ತು ಅಯೋಧ್ಯಾ ರಾಮ

ಅತಿಥಿ ಅಂಕಣ



ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

ರಾಜಕೀಯ ನಿರಕ್ಷರಿಗಳಾಗಿದ್ದುಕೊಂಡು, ಇಲ್ಲವೆ, ಆಳುವವವರ ಊಳಿಗಮಾನ್ಯ-ಬಂಡವಾಳಶಾಹಿ-ಸಾಮ್ರಾಜ್ಯವಾದೀ ಸಿದ್ಧಾಂತಗಳನ್ನು ಅಪ್ರಜ್ಞಾಪೂರ್ವಕವಾಗಿ ಬೆಂಬಲಿಸುತ್ತಾ ತಾವು ಸಿದ್ಧಾಂತಗಳ ಪರಿಧಿಯಾಚೆಗೆ ಬದುಕನ್ನು ಪ್ರೀತಿಸುವ ಪ್ರಜಾಪ್ರಭುತ್ವವಾದಿಗಳೆಂದು ಬಹಳಷ್ಟು ಜನ ಗಂಭೀರ ಲೇಖಕರು, ಬುದ್ಧಿಜೀವಿಗಳು, ಚಿತ್ರ ನಿರ್ದೇಶಕರು ನಂಬುತ್ತಾರೆ. ತಾವು ಎಲ್ಲವನ್ನೂ ಸಿದ್ಧಾಂತದ ಕನ್ನಡಕದ ಮೂಲಕ ನೋಡದೆ 'ವಸ್ತುನಿಷ್ಠವಾಗಿ, ನಿರಪೇಕ್ಷವಾಗಿ ಸತ್ಯಾನ್ವೇಷಣೆಗೆ' ತೊಡಗುವವರೆಂದು ಅನೇಕ ಸೃಜನಶೀಲರು, ವಿಮರ್ಶಕರು ಅವಕಾಶ ಸಿಕ್ಕಿದಾಗಲೆಲ್ಲಾ ಹೇಳುತ್ತಿರುತ್ತಾರೆ. ಇಂಥವರ ಮಧ್ಯೆ ಎಂ.ಎಸ್.ಸತ್ಯು ತಾನೊಬ್ಬ ಎಡಪಂಥೀಯ ಚಿತ್ರನಿರ್ದೇಶಕನೆಂದು ನಿರ್ಭಿಡೆಯಿಂದ ಗುರುತಿಸಿಕೊಳ್ಳುತ್ತಾರೆ.

ತಾನು ಹಿಂದೆ ಡಕಾಯಿತನಾಗಿದ್ದು ನಾರದರ ಉಪದೇಶದಿಂದ ಋಷಿಯಾದನೆಂದು ಹೇಳಲಾಗುವ ವಾಲ್ಮೀಕಿ ರಚಿಸಿದ ರಾಮಾಯಣವು ಮೇಲ್ಪದರದಲ್ಲಿ ಪಿತೃವಾಕ್ಯಪರಿಪಾಲಕ, ಏಕಪತ್ನೀವ್ರತಸ್ಥ, ಅಯೋಧ್ಯಾ ರಾಮನ ಕತೆ ಎನಿಸಿದರೂ, ಒಳಪದರಗಳಲ್ಲಿ ರಾಮನ ಆದರ್ಶಗಳ ಪ್ರತಿಸತ್ಯಗಳಾದ ಸಾಮ್ರಾಜ್ಯದಾಹ, ಈರ್ಷೆ, ಸಂಚು, ಅಮಾನವೀಯತೆ, ಮೋಸ, ಕಳ್ಳತನ, ಹಿಂಸೆ ಮತ್ತು ಪ್ರತಿಹಿಂಸೆಗಳ ಕಥಾನಕವಾಗಿದೆ. ಸಂಘಪರಿವಾರವು ಸಂಸ್ಕೃತಿ ಹೆಸರಿನಲ್ಲಿ ಮಾಡುವ ರಾಜಕಾರಣವು ತಾತ್ವಿಕವಾಗಿ ಅಯೋಧ್ಯಾ ರಾಮನ ಆದರ್ಶಗಳನ್ನು ಎತ್ತಿಹಿಡಿಯುತ್ತಾ ವಾಸ್ತವದಲ್ಲಿ ರಾಮಾಯಣದ ಪ್ರತಿಸತ್ಯಗಳನ್ನು ಅಳವಡಿಸಿಕೊಂಡಿದೆ. ಈ ವೈರುಧ್ಯವನ್ನು ಮರೆಮಾಚಲು ಸಂಘಪರಿವಾರವು ತನ್ನ ಎಲ್ಲ ಅಧಿಕಾರವನ್ನು ವಿವಿಧ ನೆಲೆಗಳಲ್ಲಿ ಬಳಸಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಸತ್ಯು 1977 ರಲ್ಲಿ ತಯಾರಿಸಿದ 'ಕನ್ನೇಶ್ವರ ರಾಮ' ಚಲನಚಿತ್ರದ ಮರುವೀಕ್ಷಣೆ ಮತ್ತು ವ್ಯಾಖ್ಯಾನ ಸಂಗತವಾಗಿದೆ.

ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮೇಲ್ಪದರದಲ್ಲಿ ವಿರೋಧಿಸುವಂಥ ದೃಷ್ಟಿಕೋನಗಳ ಪ್ರಗತಿಪರ ಚಿತ್ರನಿರ್ದೇಶಕರ ಮಧ್ಯೆ ಇದ್ದುಕೊಂಡೇ ಚಿಂತನಶೀಲ ಸಿನೆಮಾ ಮಾಡುವ ಕನ್ನಡದ ಈ ಎಡಪಂಥೀಯ ಚಿತ್ರ ನಿರ್ದೇಶಕ ನಾಲ್ಕು ದಶಕಗಳ ಹಿಂದೆ ತಯಾರಿಸಿದ 'ಕನ್ನೇಶ್ವರ ರಾಮ' ಸಂಕೀರ್ಣ ಚಿಂತನಾ ವಿನ್ಯಾಸವನ್ನು ಹೊಂದಿರುವ ಚಿತ್ರ. ಕೇಂದ್ರಪಾತ್ರವಾದ ಕನ್ನೇಶ್ವರ ರಾಮನ ನೆನಪುಗಳ ಮೂಲಕ ವ್ಯಕ್ತಿ-ಘಟನೆ-ಸನ್ನಿವೇಶಗಳ ವಿವರಗಳು ನಿಧಾನವಾಗಿ ಬಿಚ್ಚಿಕೊಳ್ಳುತ್ತದೆ. ಮೇಲುನೋಟಕ್ಕೆ ಸ್ಥಳೀಯ ಡಕಾಯಿತನಾಗಿ ಸಾಹಸಮಯ ಬದುಕನ್ನು ಬದುಕುತ್ತಾ ಕೊನೆಗೆ ದುರಂತ ಸಾವನ್ನಪ್ಪಿ ದಂತಕತೆ-ಯಾದ, ಜನಪ್ರಿಯ ಲಾವಣಿಗಳ ರೋಚಕವಸ್ತುವಾದ ಒಬ್ಬ ಬಂಡುಕೋರನ ಕತೆಯಂತೆ ಕಾಣಿಸುತ್ತದೆ. ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯಹೋರಾಟದ ಕಾಲಘಟ್ಟದಲ್ಲಿ ಘಟಿಸಿದ ಈ ಕತೆಯನ್ನು ಭಿತ್ತಿಯಾಗಿರಿಸಿಕೊಂಡು ಎಡಪಂಥೀಯ ನೆಲೆಯಲ್ಲಿ, ನೈಜ ಸ್ವಾತಂತ್ರ್ಯ, ಸರ್ವಸಮಾನತೆ ಮತ್ತು ಜನಪರವಾದ ನ್ಯಾಯದ ನಿರ್ವಚನೆಗಳನ್ನು ಸತ್ಯು ತಮ್ಮ ಈ ಚಿತ್ರದಲ್ಲಿ ದೃಶ್ಯಗಳನ್ನಾಗಿಸುತ್ತಾರೆ. 40 ವರ್ಷಗಳ ನಂತರ ಈ ಚಿತ್ರವನ್ನು ಮತ್ತೆ ನೋಡಿದಾಗ ನನಗೆ ದಕ್ಕಿದ ಅನುಭವದ ನಿರೂಪಣೆ ಇಲ್ಲಿದೆ.

ಗ್ರಾಮೀಣ ಹಿನ್ನೆಲೆಯ ಸಾಮಾನ್ಯ ಪ್ರಜೆಯೊಬ್ಬ ತನ್ನ ನ್ಯಾಯನಿಷ್ಠೆ ಮತ್ತು ಬಂಡುಕೋರತನದಿಂದಾಗಿ ಆಳುವವರನ್ನು ವಿರೋಧಿಸುತ್ತಾ ದರೋಡೆಕೋರನಾಗಿ ಪರಿವರ್ತಿತನಾಗುವ ಕತೆ ಎಸ್.ಕೆ.ನಾಡಿಗರ "ಕನ್ನಯ್ಯರಾಮ" ಎಂಬ ಕಾದಂಬರಿ ಈ ಚಿತ್ರದ ಹಂದರವಾಗಿದೆ. ಬಡವರ ಬಂಧುವಾಗಿ, ಆಳುವವರಿಗೆ ತಲೆನೋವಾಗಿ, ಸಾಮಾಜಿಕ ವೀರನಾಗಿ ದಂತಕತೆ-ಯಾದ ಕನ್ನೇಶ್ವರ ರಾಮನಿಗೆ ಸಂಬಂಧಿಸಿದ ವಾಸ್ತವ-ಕಲ್ಪನೆಗಳನ್ನು ಸತ್ಯು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಸಂಯೋಜಿಸಿ ಗಂಭೀರ ತಾತ್ವಿಕ ಚಿಂತನೆ, ಲಘುಹಾಸ್ಯ, ಸಿನಿಮೀಯ ಸಾಹಸ ಮತ್ತು ದುರಂತಗಳನ್ನೊಳಗೊಂಡ ಚಿತ್ರವನ್ನಾಗಿಸಿದ್ದಾರೆ. ತನ್ನ ನಿಷ್ಠ ಒಡನಾಡಿಗಳನ್ನು ಕಳೆದುಕೊಂಡು ಒಂಟಿಯಾದ ರಾಮ, ಪೋಲೀಸರು ಹೇರುವ ಒತ್ತಡಕ್ಕೆ ಸಿಕ್ಕಿ ಅಸಹಾಯಕರಾದ ಜನ, ಮತ್ತು ಅವರನ್ನು ಪಾರುಮಾಡಲು ಅವನನ್ನು ಪ್ರೀತಿಸುವ ಮಲ್ಲಿ ಪೋಲೀಸರೊಂದಿಗೆ ಕೈಗೂಡಿಸಿದಾಗ, ತಾನೇ ಪೋಲೀಸರಿಗೆ ಶರಣಾಗುತ್ತಾನೆ. ಮರಣದಂಡನೆಗೆ ಗುರಿಯಾಗಿ, ಗಲ್ಲಿಗೇರುವ ಮೊದಲು ಸಾಗುವ ಮೆರವಣಿಗೆ ಅವನ ಬಾಳಿನಲ್ಲಿ ಬಂದುಹೋದ ಜನರು ಮತ್ತು ಘಟನೆಗಳ ನೆನಪುಗಳ ಮೆರವಣಿಗೆಯೂ ಆಗುತ್ತದೆ. ಈ ಘಟನಾವಳಿಗಳನ್ನು ಇತಿಹಾಸವಾಗಿ ದಾಖಲಿಸುವಂತೆ ಹೆಣೆದು ಹಾಡಿದ ಲಾವಣಿ ಚಿತ್ರದ ಸ್ವರಭಿತ್ತಿಯಾಗಿದೆ.

ಸತ್ಯು ಚಿತ್ರದ ನಿರೂಪಣೆಯಲ್ಲಿ ದ್ವಂದ್ವಾತ್ಮಕ ಭೌತವಾದದ ನೆಲೆಯಲ್ಲಿ ವೈರುಧ್ಯಗಳನ್ನು ಮುಖಾಮುಖಿಯಾಗಿಸುತ್ತಾರೆ. ವ್ಯಕ್ತಿನಿಷ್ಠೆ-ಸಾಮಾಜಿಕನಿಷ್ಠೆ, ಬಡವರ ನೈತಿಕತೆ-ಉಳ್ಳವರ ಅನೈತಿಕತೆ, ಕಾನೂನು-ನ್ಯಾಯ, ದಮನ-ದಂಗೆಕೋರತನ, ನಿರ್ಬಂಧಿತ ಪ್ರೀತಿ-ಸ್ವಚ್ಛಂದ ಪ್ರೇಮ, ವ್ಯವಸ್ಥೆಯ ಬಲ-ವ್ಯಕ್ತಿಯ ನಿರ್ಬಲತೆ, ರಾಜಕೀಯ ಬಿಡುಗಡೆ-ಸಂಪೂರ್ಣ ಸ್ವಾತಂತ್ರ್ಯ ಹೀಗೆ ವಾಸ್ತವಿಕ ಸತ್ಯಗಳನ್ನು ಎಲ್ಲೂ ಏಕಪಕ್ಷೀಯವಾಗಿ ನೋಡದೆ ಎರಡು ವಿರೋಧಗಳ ಸಮನ್ವಯಿತ ಸತ್ಯವನ್ನಾಗಿ ನೋಡುವಂತೆ ಚಿತ್ರ ಸಹೃದಯರನ್ನು ಪ್ರೇರೇಪಿಸುತ್ತಾರೆ.

ಸಂಘಪರಿವಾರವು ಸಂಸ್ಕೃತಿ ಹೆಸರಿನಲ್ಲಿ ಮಾಡುವ ರಾಜಕಾರಣವು ತಾತ್ವಿಕವಾಗಿ ಅಯೋ ಧ್ಯಾ ರಾಮನ ಆದರ್ಶಗಳನ್ನು ಎತ್ತಿಹಿಡಿಯುತ್ತಾ ವಾಸ್ತವದಲ್ಲಿ ರಾಮಾಯಣದ ಪ್ರತಿಸತ್ಯಗಳನ್ನು ಅಳವಡಿಸಿಕೊಂಡಿದೆ. ಈ ವೈರುಧ್ಯವನ್ನು ಮರೆಮಾಚಲು ಸಂಘಪರಿವಾರವು ತನ್ನ ಎಲ್ಲ ಅಧಿಕಾರವನ್ನು ವಿವಿಧ ನೆಲೆಗಳಲ್ಲಿ ಬಳಸಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಸತ್ಯು 1977 ರಲ್ಲಿ ತಯಾರಿಸಿದ 'ಕನ್ನೇಶ್ವರ ರಾಮ' ಚಲನಚಿತ್ರದ ಮರುವೀಕ್ಷಣೆ ಮತ್ತು ವ್ಯಾಖ್ಯಾನ ಸಂಗತವಾಗಿದೆ.


'ಕನ್ನೇಶ್ವರ ರಾಮ' ಸಂಕೀರ್ಣ ಚಿಂತನಾ ವಿನ್ಯಾಸವನ್ನು ಹೊಂದಿರುವ ಚಿತ್ರ. ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಘಟಿಸಿದ ಈ ಕತೆಯನ್ನು ಭಿತ್ತಿಯಾಗಿರಿಸಿಕೊಂಡು ಎಡಪಂಥೀಯ ನೆಲೆಯಲ್ಲಿ, ನೈಜ ಸ್ವಾತಂತ್ರ್ಯ, ಸರ್ವಸಮಾನತೆ ಮತ್ತು ಜನಪರವಾದ ನ್ಯಾಯದ ನಿರ್ವಚನೆಗಳನ್ನು ಸತ್ಯು ತಮ್ಮ ಈ ಚಿತ್ರದಲ್ಲಿ ದೃಶ್ಯಗಳನ್ನಾಗಿಸುತ್ತಾರೆ. 40 ವರ್ಷಗಳ ನಂತರ ಈ ಚಿತ್ರವನ್ನು ಮತ್ತೆ ನೋಡಿದಾಗ ನನಗೆ ದಕ್ಕಿದ ಅನುಭವದ ನಿರೂಪಣೆ ಇಲ್ಲಿದೆ.

ಕನ್ನೇಶ್ವರ ರಾಮ ಎರಡು ರೀತಿಯ ಸ್ವಾತಂತ್ರ್ಯಹೋರಾಟಗಳನ್ನು ನಮ್ಮ ಮುಂದೆ ಇಡುತ್ತದೆ. ಒಂದು: ಬಡವರು ಮತ್ತು ಜನಸಾಮಾನ್ಯರಿಗೂ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ಒದಗಿಸುವಂಥ ಆದರ್ಶ ಸಮಸಮಾಜದ ಕಲ್ಪನೆಯನ್ನು ತಲೆಯಲ್ಲಿಟ್ಟುಕೊಂಡ ಡಕಾಯಿತನೊಬ್ಬ ನಡೆಸುವ ಸಶಸ್ತ್ರ ಹೋರಾಟ. ಎರಡು: ಬ್ರಿಟಿಷರ ರಾಜಕೀಯ ದಾಸ್ಯದಿಂದ ಬಿಡುಗಡೆ ಪಡೆಯಲು ಗಾಂಧಿವಾದಿಗಳು ನಡೆಸಿದ ಅಹಿಂಸಾತ್ಮಕ ಹೋರಾಟ. ಮೊದಲನೆಯದು ದಾಸ್ಯ-ಶೋಷಣೆ-ಅನ್ಯಾಯಗಳಿಂದ ಇಡೀ ಮನುಕುಲದ ಬಿಡುಗಡೆಗೆ ಸಂಬಂಧಿಸಿದ ವಿಶಾಲ ಉದ್ದೇಶದ ಸ್ವಾತಂತ್ರ್ಯ ಹೋರಾಟ. ಎರಡನೆಯದು ಗಾಂಧಿ ಪ್ರಣೀತ ಧ್ಯೇಯೋದ್ದೇಶಗಳ ಘೋಷಣೆಯೊಂದಿಗೆ ಪ್ರಾರಂಭಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಕೈಯಿಂದ ದೇಶೀಯ ಬಂಡವಾಳಿಗರ ಕೈಗೆ ರಾಜಕೀಯ ಹಸ್ತಾಂತರದಲ್ಲಿ ಪರ್ಯವಸಾನವಾದ ಸೀಮಿತ ಫಲದ ಕಾಂಗ್ರೆಸ್ ನೇತೃತ್ವದ ಸ್ವಾತಂತ್ರ್ಯ ಹೋರಾಟ.

ಭಾರತದ ಯಾವುದೇ ಪ್ರದೇಶವಾಗಿರಬಹುದಾದ ಕುಗ್ರಾಮದ ರೈತನೊಬ್ಬ ತನ್ನ ಮೇಲೆ ಗ್ರಾಮದ ಬಲಿಷ್ಠರು ಹೇರುವ 'ಪಂಚಾಯಿತಿ ನ್ಯಾಯ' ದ ವಿರುದ್ಧ ಪ್ರತಿಭಟಿಸಿ, ಅಪರಾಧಗಳ ಸುಳಿಯೊಳಗೆ ಸಿಕ್ಕಿ, ಜೈಲು ಸೇರುತ್ತಾನೆ. ಬ್ರಿಟಿಷರ ವಿರುದ್ಧ ಹೋರಾಡಿ ಬಂಧಿಗಳಾಗಿ ಜೈಲು ಸೇರುವ ಸ್ವಾತಂತ್ರ್ಯ ಸೇನಾನಿಗಳು ಕಾಂಗ್ರೆಸ್ ಬಾವುಟವನ್ನು ಜೈಲಿನ ಆವರಣದಲ್ಲಿ ಹಾರಿಸುವಾಗ ಏರ್ಪಡುವ ಗೊಂದಲದಲ್ಲಿ ಸಮಾನ ಮನಸ್ಕರಾದ ಬಂಧಿಗಳೊಂದಿಗೆ ಜೈಲಿನಿಂದ ತಪ್ಪಿಸಿಕೊಂಡು ಡಕಾಯಿತರ ಗುಂಪೊಂದನ್ನು ಸೇರಿಕೊಳ್ಳುತ್ತಾನೆ. ಅಪಾಯವನ್ನೆದುರಿಸುವ ಧೈರ್ಯ, ಜಾಣ್ಮೆ-ಸಾಹಸ-ಸಂಘಟನಾತ್ಮಕ ಕೌಶಲಗಳಿಂದಾಗಿ ರಾಮ, ಡಕಾಯಿತರ ನಾಯಕ ಜುಂಜ ಸತ್ತನಂತರ ಅವನ ಉತ್ತರಾಧಿಕಾರಿಯಾಗುತ್ತಾನೆ. ಜುಂಜನ ಪ್ರೇಯಸಿ ಮಲ್ಲಿಯ ಅನುರಾಗವನ್ನು ಗಳಿಸಿಕೊಳ್ಳುತ್ತಾನೆ. ದರೋಡೆ-ಸುಲಿಗೆಗಳಲ್ಲಿ ತೊಡಗಿ, ಪ್ರಭುತ್ವ ಮತ್ತು ಪೋಲೀಸರಿಗೆ ಸಿಕ್ಕದೆ ನಾಗರಿಕ ಸಮಾಜದ ಆಚೆ ಉಳಿದು ತನ್ನದೇ ಆದ ರಾಜ್ಯ, ಬಾವುಟಗಳ ಕನಸು ಕಾಣುತ್ತಾನೆ.



ಜೈಲಿನಿಂದ ತಪ್ಪಿಸಿಕೊಂಡು ಓಡಿಬಂದ ಹಸಿದ ಗಂಡನಿಗೆ ಊಟವಿಕ್ಕುವ ಹೆಂಡತಿ, ಅವನಿಗೆ ಸಹಾಯಕವಾಗಿರುವ ಬದಲು ರಾಮನ ಒಡಹುಟ್ಟಿದ ಅಣ್ಣನೊಂದಿಗೆ ಸೇರಿ ದಂಗೆಕೋರ ಗಂಡನನ್ನು ಪೋಲೀಸರಿಗೆ ಹಿಡಿದುಕೊಡಲು ಯತ್ನಿಸುತ್ತಾಳೆ. ಆ ಮೂಲಕ ಪ್ರಭುತ್ವದ ಕಾನೂನಿಗೆ ನಿಷ್ಠೆ ಮೆರೆಯುತ್ತಾರೆ.



ಆದರೆ ಜೈಲಿನಿಂದ ತಪ್ಪಿಸಿಕೊಳ್ಳುವ ಯತ್ನದಲ್ಲಿ ಸಹೋದರತೆಯನ್ನು ಬೆಳೆಸಿಕೊಳ್ಳುವ ದರೋಡೆಕೋರ ಸಹಚರ ಸದಾ ರಾಮನ ಬೆನ್ನಿಗಿರುತ್ತಾ ಪೋಲೀಸರು ಸುತ್ತುವರೆದಾಗ ತನ್ನ ಪ್ರಾಣಕೊಟ್ಟು ರಾಮನು ಪೋಲೀಸರಿಂದ ತಪ್ಪಿಸಿಕೊಳ್ಳಲು ನೆರವಾಗುತ್ತಾನೆ.

ರಾಜಕೀಯ ಸ್ವಾತಂತ್ರ್ಯಕ್ಕಾಗಿ ಕಾನೂನುಭಂಗ ಮಾಡುವ ಸತ್ಯಾಗ್ರಹಿಗಳು, ತನ್ನದೇ ಆದ ನೆಲೆಗಳಲ್ಲಿ ನ್ಯಾಯಕ್ಕಾಗಿ ಕಾನೂನು ಮುರಿಯುವ ರಾಮನಂಥ ದಂಗೆಕೋರರು ಜೈಲಿನಲ್ಲಿ ಬಂಧಿಗಳಾಗಿ ಸಮಾನ ನೆಲೆಯಲ್ಲಿ ಸಂಧಿಸುತ್ತಾರೆ. ಅಹಿಂಸಾತ್ಮಕ ಚಳುವಳಿಯ ವ್ರತಕ್ಕೆ ಕಟ್ಟುಬಿದ್ದ ಸ್ವಾತಂತ್ರ್ಯ ಹೋರಾಟಗಾರರನ್ನು ಸಶಸ್ತ್ರ ಪೋಲೀಸರು ಬಂಧಿಸಿದಾಗ ಸಶಸ್ತ್ರ ರಾಮ ಪೋಲೀಸರನ್ನು ನಿರಾಯುಧರನ್ನಾಗಿಸಿ, ನಿರ್ಬಲ ಸ್ವಾತಂತ್ರ್ಯ ಹೋರಾಟಗಾರರ ಅಹಿಂಸೆ, ಆಯುಧ ಹಿಡಿದು ನಿರಾಯುಧರ ಮೇಲೆರಗುವ ಪೋಲೀಸರ ಹಿಂಸೆ, ಮತ್ತು ಹಿಂಸೆಗೆ ಅವಕಾಶವಿದ್ದಾಗಲೂ ಹಿಂಸಿಸದೆ ಕ್ಷಮೆತೋರಿಸಿ ಪೋಲೀಸರನ್ನು ಬಫೂನುಗಳನ್ನಾಗಿಸುವ ಬಂದೂಕುಧಾರಿ ರಾಮನ ಅಹಿಂಸೆ ಪ್ರಭುತ್ವ, ಗಾಂಧೀವಾದ ಮತ್ತು ಹಿಂಸೆ-ಅಹಿಂಸೆಗಳ ತಾತ್ವಿಕ ತಾಕಲಾಟಗಳನ್ನು ಭಾವನಾತ್ಮಕವಾಗಿ ನೋಡದೆ ವೈಚಾರಿಕವಾಗಿ ನೋಡುವಂತೆ ಮಾಡುತ್ತವೆ.

ಜನರ ದಾನ-ವಂತಿಗೆಗಳಿಂದ ನಡೆಯುವ ಮಠದ ಧರ್ಮಗುರುಗಳು ಕಷ್ಟಕಾಲದಲ್ಲಿ ಜನರಿಗೆ ನೆರವಾಗುವುದರ ಬದಲು ತಾವೇ ಬಡ್ಡಿ-ಹಾದರಗಳ ಮೂಲಕ ಜನರನ್ನು ಶೋಷಿಸುತ್ತಾರೆ. ಹರ ಕೊಲ್ಲಲ್ ಪರ ಕಾಯ್ವನೇ ಎಂಬಂಥ ಅಸಹಾಯಕ ಸ್ಥಿತಿಯಲ್ಲಿ ಡಕಾಯಿತನಾದ ರಾಮ ಅವರನ್ನು ಮಠದ ದೌರ್ಜನ್ಯಗಳಿಂದ ಪಾರುಮಾಡುತ್ತಾನೆ.

ವೈವಾಹಿಕ ಚೌಕಟ್ಟಿನಲ್ಲಿ ತನಗೆ ನಿಷ್ಠಳಾದ ಹೆಂಡತಿಯಲ್ಲಿ ಪಡೆಯಲಾಗದ್ದನ್ನು ವಿವಾಹೇತರ ಸಂಬಂಧದ ಸ್ವಚ್ಛಂಧತೆಯಲ್ಲಿ, ನಿರ್ದಿಷ್ಟವಾಗಿ ಯಾರಿಗೂ ನಿಷ್ಠಳಾಗದೆಯೂ ಪ್ರೀತಿಸಬಲ್ಲ ವೇಶ್ಯೆ, ಮಲ್ಲಿಯಲ್ಲಿ ರಾಮ ಪಡೆಯುತ್ತಾನೆ.


ಆದರೆ ಗಲ್ಲಿಗೇರುವ ಮೊದಲು, ತನ್ನ ಪ್ರೀತಿಯ ಸಂಕೇತವಾದ ಉಂಗುರವನ್ನು ಮಲ್ಲಿಯ ಕೈಗೆ ಕೊಡದೆ, ಹೆಂಡತಿಗೆ ಕೊಡುವಂತೆ ಪೋಲೀಸರಿಗೆ ಸೂಚಿಸುತ್ತಾನೆ.

ರಾಮನಿಂದ ಸಹಾಯ ಪಡೆದ ಗ್ರಾಮಸ್ಥರು ಪೋಲೀಸರ ಒತ್ತಡಕ್ಕೆ ಸಿಕ್ಕಿ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಬೇಕಾದಾಗ ತಾವೇ ಅವನನ್ನು ಹಿಡಿದುಕೊಡಲು ಮುಂದಾಗುತ್ತಾರೆ. ಕ್ರೋಧ, ಅಸಹಾಯಕತೆ, ಸ್ವರಕ್ಷಣೆಯ ವಾಂಛೆಗಳಿಂದಾಗಿ ಹುಚ್ಚನಂತಾದ ರಾಮ ಗ್ರಾಮಸ್ಥರ ಮನೆಗಳಿಗೆ ಬೆಂಕಿ ಹಚ್ಚಿದಾಗ, ರಾಮನ ಪ್ರೀತಿಪಾತ್ರ ಮಲ್ಲಿಯೇ ಅವನನ್ನು ಶರಣಾಗಿಸಲು ಮುಂದಾಗುತ್ತಾಳೆ.

ಚಿತ್ರದ ಪ್ರಾರಂಭದಿಂದಲೂ ವಿದ್ರೋಹಿಯಾಗೇ ಆಳುವವರಿಗೆ ಸೆಡ್ಡು ಹೊಡೆಯುತ್ತಾ ಬಂದ ರಾಮ ತನ್ನ ಪ್ರೀತಿಪಾತ್ರ ಹೆಣ್ಣು ಪೋಲೀಸರೊಂದಿಗೆ ಸಹಕರಿಸಿದಾಗ ಅವಳನ್ನು ನಿಂದಿಸದೆ, ಪೋಲೀಸರೊಂದಿಗೆ ಹೋರಾಡಿ ಹುತಾತ್ಮನಾಗದೆ, ಅಥವಾ ಆತ್ಮಹತ್ಯೆಗೆ ಯತ್ನಿಸದೆ, ಕೈಲಿದ್ದ ಪಿಸ್ತೂಲನ್ನು ಎಸೆದು ಅವರಿಗೆ ಶರಣಾಗಿ ಕಾನೂನಿನ ಪ್ರಕ್ರಿಯೆಯನ್ನು ಎದುರಿಸುತ್ತಾನೆ.

ಶೋಷಕರಿಂದ ರಾಜ್ಯಾಧಿಕಾರವನ್ನು ಪಡೆಯುವ ಎಡಪಂಥೀಯ ಕ್ರಾಂತಿಯಲ್ಲಿ ಆಳುವವರ ಹಿಂಸಾತ್ಮಕ ದಮನ, ಅನೈತಿಕ ಪ್ರತಿರೋಧ, ಮತ್ತು ನಿರ್ದಯವಾದ ಆಕ್ರಮಣಗಳನ್ನು ಎದುರಿಸಲು ಸಶಸ್ತ್ರ ಹೋರಾಟ ಪಕ್ಷಕ್ಕೆ ಅನಿವಾರ್ಯವಾಗಬಹುದು. ಆದರೆ ಜನರ ಬೆಂಬಲವಿಲ್ಲದಿದ್ದರೆ ಅಥವಾ ಯಾರ ಹಿತರಕ್ಷಣೆಯನ್ನು ರಕ್ಷಿಸಲು ಹೋರಾಟ ನಡೆಯುತ್ತದೆಯೋ ಅವರ ಹಿತವನ್ನೇ ಕಡೆಗಣಿಸಿ ಹಿಂಸೆಗಿಳಿದರೆ, ಅದು ಜನಪರವಲ್ಲದ ಹುಚ್ಚು ಹೋರಾಟವಾಗುತ್ತದೆ ಎಂಬುದನ್ನೂ ಸತ್ಯು ಚಿತ್ರದ ಕಡೆಯ ಭಾಗದಲ್ಲಿ ಕಾಣಿಸಿದ್ದಾರೆ.

ಜೊತೆಗೆ ಮತ್ತು ಒಟ್ಟಾರೆಯಾಗಿ ಸತ್ಯು ತಮ್ಮ ಕನ್ನೇಶ್ವರ ರಾಮ ಚಲನಚಿತ್ರವು ಕಟ್ಟಿಕೊಡುವ ಸಂಕಥನದ ಮೂಲಕ ಅಯೋಧ್ಯೆಯ ರಾಮನನ್ನು ಕುರಿತಾದ ಭಾವಪರವಶ, ಅವೈಚಾರಿಕ ಹಾಗೂ ಪ್ರಭುತ್ವದ ಪರವಾದ ರಾಜಕೀಯವನ್ನು ಮುನ್ನೊತ್ತುವ ನೂರಾರು ಸಿನೆಮಾ-ಸಂಕಥನಗಳನ್ನು ತಾತ್ವಿಕ ಮತ್ತು ವೈಚಾರಿಕ ವಿಮರ್ಶೆಗೆ ಒಳಪಡಿಸುವಂತೆ ಮಾಡುತ್ತಾರೆ.



ಅಕ್ಟೋಬರ್ ಕ್ರಾಂತಿ ಚಿರಾಯುವಾಗಲಿ!



ಕೆಂಪು ಅಕ್ಟೋಬರ್‌ನ 100ನೇ ವರ್ಷಾಚರಣೆ ಸಮಾರೋಪದ ಸಂದರ್ಭದಲ್ಲಿ ನಾವು ವರ್ಗ ಶೋಷಣೆ, ಸಾಮಾಜಿಕ ದಮನ ಮತ್ತು ಸಾಮ್ರಾಜ್ಯಶಾಹಿ ಏಕಾಧಿಪತ್ಯದ ವಿರುದ್ಧ ಹೋರಾಟ ನಡೆಸುವ ನಮ್ಮ ಬದ್ಧತೆಯನ್ನು ಮತ್ತೊಮ್ಮೆ ದೃಢಪಡಿಸಬೇಕು.. ಸಾಮಾಜಿಕ ಪರಿವರ್ತನೆಗಾಗಿ ಮತ್ತು ಸಮಾಜವಾದಕ್ಕಾಗಿ ಒಂದು ಬಲಿಷ್ಠವಾದ ಚಳವಳಿಯನ್ನು ಕಟ್ಟಲಿಕ್ಕಾಗಿ ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಆಚರಣೆಯನ್ನು ನಾವು ಮುಂದಕ್ಕೊಯ್ಯಬೇಕು.



ಪ್ರಕಾಶ ಕಾರಟ್

ಅಕ್ಟೋಬರ್ ಕ್ರಾಂತಿಯ ಶತಮಾನತೋತ್ಸವದ ವರ್ಷಪೂರ್ತಿ ಆಚರಣೆ ನವೆಂಬರ್ 7ಕ್ಕೆ ಸಮಾಪ್ತಿಗೊಳ್ಳುತ್ತದೆ. 2016ರ ನವೆಂಬರ್ 7ರಿಂದ 2017 ನವೆಂಬರ್ 7ರ ವರೆಗೆ ಶತಮಾನೋತ್ಸವದ ನೆನಪಿಗೆ ಕಾರ್ಯಕ್ರಮಗಳನ್ನು ನಡೆಸುವಂತೆ ಸಿಪಿಐ (ಎಂ) 21ನೇ ಮಹಾಧಿವೇಶನ ಕರೆ ನೀಡಿತ್ತು.

ಕಳೆದ 12 ತಿಂಗಳಲ್ಲಿ ದೇಶದಾದ್ಯಂತ ಪಕ್ಷದ ಘಟಕಗಳು ಸಾರ್ವಜನಿಕ ಸಭೆಗಳನ್ನು, ಕೆಂಪು ಸ್ವಯಂಸೇವಕರ ರ್‍ಯಾಲಿಗಳು, ವಿಚಾರಸಂಕಿರಣಗಳು, ವಸ್ತು ಪ್ರದರ್ಶನಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿವೆ. ಪಕ್ಷದ ಮುಖವಾಣಿಗಳ ವಿಶೇಷ ಸಂಚಿಕೆಗಳನ್ನು ಪ್ರಕಟಿಸಲಾಗಿದೆ. ವಿವಿಧ ಭಾಷೆಗಳಲ್ಲಿ ಲಕ್ಷಾಂತರ ಪುಸ್ತಿಕೆಗಳನ್ನು ಪ್ರಕಟಿಸಲಾಗಿದೆ. ಬಂಡವಾಳಶಾಹಿಗೆ ಪರ್ಯಾಯವೊಂದಿದೆ ಎಂಬ ಅಕ್ಟೋಬರ್ ಕ್ರಾಂತಿಯ ಸಂದೇಶವನ್ನು ದೇಶದ ಎಲ್ಲಾ ಭಾಗಗಳಿಗೆ ಒಯ್ಯಲಾಗಿದೆ.

ಸಾಮ್ರಾಜ್ಯಶಾಹಿಯು ಆಕ್ರಮಣಕಾರಿ ಧೋರಣೆಯಿಂದ ಮುಂದುವರಿಯುತ್ತಿರುವ ಹಾಗೂ ಜಗತ್ತನ್ನು ನವ-ಉದಾರವಾದಿ ಬಂಡವಾಳದ ದಾಳಿಗೆ ಈಡು ಮಾಡುತ್ತಿರುವ ಈ ಕಾಲ ಘಟ್ಟದಲ್ಲಿ, ಸಾಮ್ರಾಜ್ಯಶಾಹಿ-ವಿರೋಧಿ ಹಾಗೂ ಬಂಡವಾಳಶಾಹಿ-ವಿರೋಧಿ ಅಕ್ಟೋಬರ್ ಕ್ರಾಂತಿಯು ವರ್ಗ ಶೋಷಣೆ ಮತ್ತು ಅನ್ಯಾಯದಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ ತೊಡಗಿರುವ ಎಲ್ಲರಿಗೂ ಸ್ಫೂರ್ತಿಯನ್ನು ನೀಡುತ್ತದೆ.

ಭಾರತದಲ್ಲಿ, ಅಧಿಕಾರದಲ್ಲಿರುವ ಬಲಪಂಥೀಯ ಹಿಂದುತ್ವವಾದಿ ಶಕ್ತಿಗಳು ದುಡಿಯುವ ವರ್ಗಗಳ ಶೋಷಣೆಯನ್ನು ತೀವ್ರಗೊಳಿಸಿವೆ, ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ದಾಳಿ ಮಾಡುತ್ತಿವೆ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಿಸುವ ಸರ್ವಾಧಿಕಾರಿ ಆಡಳಿತವನ್ನು ಹೇರುತ್ತಿವೆ. ಅವುಗಳು ಎಲ್ಲಾ ಜಾತ್ಯತೀತ, ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಮೌಲ್ಯಗಳನ್ನು ದ್ವೇಷಿಸುವ ಪ್ರತಿಗಾಮಿ ಮುಖ ಆಗಿವೆ.

ಅಕ್ಟೋಬರ್ ಕ್ರಾಂತಿ ಕೂಡ, ಹಿಂಸೆ ಹಾಗೂ ರಕ್ತಪಾತದಿಂದ ಕ್ರಾಂತಿಯನ್ನು ಮುಳುಗಿಸಿ ಬಿಡಲು ಪ್ರಯತ್ನಿಸುವಂತೆ ಬಲ ಪ್ರತಿಗಾಮಿ ಶಕ್ತಿಗಳನ್ನು ಪ್ರಚೋದಿಸಿತ್ತು ಎನ್ನುವುದು ಐತಿಹಾಸಿಕ ಸತ್ಯ. ಆದರೆ ಅವರು ಸೋತರು ಹಾಗೂ ಸೋವಿಯತ್ ಒಕ್ಕೂಟದಲ್ಲಿ ಸೋವಿಯತ್ ಪ್ರಭುತ್ವ ಮತ್ತು ಸಮಾಜವಾದವನ್ನು ಕಟ್ಟಲಾಯಿತು.

ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವ ಆಚರಣೆಯು ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಹಾಗೂ ಅಕ್ಟೋಬರ್ ಕ್ರಾಂತಿಯ ಸಮಕಾಲೀನ ಪ್ರಸ್ತುತತೆಯನ್ನು ಎತ್ತಿಹಿಡಿಯುವ ಸೈದ್ಧಾಂತಿಕ ಪ್ರಚಾರವನ್ನೂ ಕಂಡಿತು.

ಕೆಂಪು ಅಕ್ಟೋಬರ್‌ನ 100ನೇ ವರ್ಷಾಚರಣೆ ಸಮಾರೋಪದ ಈ ಸಂದರ್ಭದಲ್ಲಿ ನಾವು ವರ್ಗ ಶೋಷಣೆ, ಸಾಮಾಜಿಕ ದಮನ ಮತ್ತು ಸಾಮ್ರಾಜ್ಯಶಾಹಿ ಏಕಾಧಿಪತ್ಯದ ವಿರುದ್ಧ ಹೋರಾಟ ನಡೆಸುವ ನಮ್ಮ ಬದ್ಧತೆಯನ್ನು ಮತ್ತೊಮ್ಮೆ ದೃಢಪಡಿಸಬೇಕು.. ಸಾಮಾಜಿಕ ಪರಿವರ್ತನೆಗಾಗಿ ಮತ್ತು ಸಮಾಜವಾದಕ್ಕಾಗಿ ಒಂದು ಬಲಿಷ್ಠವಾದ ಚಳವಳಿಯನ್ನು ಕಟ್ಟಲಿಕ್ಕಾಗಿ ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಆಚರಣೆಯನ್ನು ನಾವು ಮುಂದಕ್ಕೊಯ್ಯಬೇಕು.

ಅನು: ವಿಶ್ವ

ಅಮೆರಿಕನ್ ವಿದೇಶಾಂಗ ಸಚಿವ ಟಿಲ್ಲರ್‌ಸನ್ ಆಟ

ಚೀನಾದ ವಿರುದ್ಧ ಅಮೆರಿಕಾದ ಸಮರ ತಂತ್ರದಲ್ಲಿ ಮತ್ತು ಇರಾನ್ ವಿರುದ್ಧ ವೈಷಮ್ಯಪೂರ್ಣ ಕ್ರಮಗಳಲ್ಲಿ ಭಾರತವನ್ನು ಒಳಗೊಳ್ಳುವುದು, ಮತ್ತು ಭಾರತ ಅಮೆರಿಕಾದಿಂದ ಲಕ್ಷ ಕೋಟಿ ಡಾಲರುಗಳ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಖರೀದಿಸುವಂತೆ ಮಾಡುವುದು ಈ ಹೂಟದ ಪ್ರಮುಖ ಅಂಶಗಳು

ಭಾರತಕ್ಕೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ವಿದೇಶಾಂಗ ಸಚಿವ ರೆಕ್ಸ್ ಟಿಲ್ಲರ್‌ಸನ್ ಮೊದಲ ಭೇಟಿ 'ಇಂಡೋ-ಫ್ಯಾಸಿಫಿಕ್' ಎನ್ನಲಾಗುವ ಪ್ರದೇಶದಲ್ಲಿ ಒಂದು ವ್ಯೂಹಾತ್ಮಕ ಮಿಲಿಟರಿ ಮೈತ್ರಿಗೆ ಸೆಳೆಯುವ ಅಮೆರಿಕನ್ ಹೂಟದ ಇನ್ನೊಂದು ಹೆಜ್ಜೆಯಾಗಿದೆ.

ಭೇಟಿಯ ಮೊದಲು, ಟಿಲ್ಲರ್‌ಸನ್ ವಾಶಿಂಗ್ಟನ್‌ನ ಚಿಂತಕರ ಚಾವಡಿಯೊಂದರಲ್ಲಿ ಒಂದು ಗಮನಾರ್ಹ ಭಾಷಣ ಮಾಡಿದರು. ಅದರ ಶಿರೋನಾಮೆ "ಮುಂದಿನ ಶತಮಾನಕ್ಕೆ ಭಾರತದೊಂದಿಗೆ ನಮ್ಮ ಸಂಬಂಧದ ನಿರೂಪಣೆ". ಇದು ಅಮೆರಿಕ-ಭಾರತ ಸಾಮರಿಕ ಮೈತ್ರಿಯ ಚೌಕಟ್ಟನ್ನು ಹಾಕಿ ಕೊಟ್ಟಿರುವುದು ಹೀಗೆ: "ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಭಾರತ ಹೆಚ್ಚುತ್ತಿರುವ ಸಾಮರಿಕ ಒಮ್ಮುಖತೆಯಿಂದಾಗಿ ಹೆಚ್ಚೆಚ್ಚು ಜಾಗತಿಕ ಭಾಗೀದಾರರಾಗಿವೆ." ತಮ್ಮ ದೇಶ ಏಶ್ಯ-ಶಾಂತಸಾಗರ ಪ್ರದೇಶದಲ್ಲಿ ಚೀನಾವನ್ನು ತಡೆದಿಡುವ ತನ್ನ ಪ್ರಯತ್ನಗಳಲ್ಲಿ ಭಾರತವನ್ನು ಬಳಸಿಕೊಳ್ಳ ಬಯಸುತ್ತದೆ ಎಂಬುದನ್ನು ಅವರು ಸ್ಪಷ್ಟಗೊಳಿಸಿದ್ದಾರೆ. ಅವರು ಭಾರತದ ಪಾತ್ರವನ್ನು ಕೊಂಡಾಡುತ್ತಲೇ ಚೀನಾ "ಅಂತರ್ರಾಷ್ಟ್ರೀಯ ನಿಯಮಗಳನ್ನು ಆಧರಿಸಿರುವ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದೆ" ಎಂದು ಆಪಾದಿಸಿದರು. ಮಿಲಿಟರಿ ಸಂಬಂಧ ವ್ಯೂಹಾತ್ಮಕ ಮೈತ್ರಿಯ ಬುನಾದಿ ಎಂದು ಟಿಲ್ಲರ್‌ಸನ್ ಒತ್ತಿ ಹೇಳಿದರು.



"ಜಗತ್ತಿನ ಎರಡು ಅತ್ಯಂತ ಮಹಾನ್ ಪ್ರಜಾಪ್ರಭುತ್ವಗಳು ಎರಡು ಅತ್ಯಂತ ಮಹಾನ್ ಮಿಲಿಟರಿಗಳನ್ನು ಹೊಂದಿರಬೇಕು" ಎಂದು ಈ ಮೊದಲು ಅಮೆರಿಕನ್ ರಕ್ಷಣಾ ಸಚಿವರು ಹೇಳಿದ್ದನ್ನು ಸಮ್ಮತಿಯಿಂದ ಈ ವಿದೇಶಾಂಗ ಸಚಿವರು ಉದ್ಧರಿಸಿದರು. ಮುಂದುವರೆದು ಭಾರತ ಗಾರ್ಡಿಯನ್ ಯುಎವಿಗಳು, ವಿಮಾನವಾಹಕ ತಂತ್ರಜ್ಞಾನಗಳು, ಎಫ್16-ಎಫ್18 ಯುದ್ಧವಿಮಾನಗಳು ಇತ್ಯಾದಿ ಇತ್ಯಾದಿ ಅಮೆರಿಕನ್ ಶಸ್ತ್ರಾಸ್ತ್ರಗಳ ಒಂದಿಡೀ ಭಂಡಾರವನ್ನೇ ಪಡೆಯಬೇಕು ಎಂದು ಮಾರಾಟದ ದನಿ ಹೊಸೆದರು.

ಇತ್ತೀಚೆಗೆ ಅಮೆರಿಕ, ಭಾರತ ಮತ್ತು ಜಪಾನ್ ಭಾಗವಹಿಸಿದ್ದ ಮಲಬಾರ್ ಕವಾಯತು 'ಇಂಡೋ-ಫ್ಯಾಸಿಫಿಕ್' ಪ್ರದೇಶದಲ್ಲಿ ಒಂದು ಹೊಸ ಭದ್ರತಾ ಮೈತ್ರಿಕೂಟ ಮೂಡಿಬರುತ್ತಿರುವುದರ ಸೂಚನೆ ಎಂದು ಅವರು ಉದಾಹರಿಸಿದರು. ಜಪಾನಿನೊಂದಿಗೆ ಚೀನಾದ ವಿರುದ್ಧ ಅಮೆರಿಕಾದ ಸಮರತಂತ್ರದಲ್ಲಿ ಭಾರತ ಒಂದು ಪ್ರಮುಖ ಪಾತ್ರ ವಹಿಸಬೇಕು ಎಂಬುದನ್ನು ಅವರ ಆ ಭಾಷಣ ಸ್ಪಷ್ಟವಾಗಿಯೇ ಹೇಳಿತ್ತು.

ಈ ಟಿಲ್ಲರ್‌ಸನ್ ಭಾಷಣ ಭಾರತದೊಡನೆ ಒಂದು ಆಳವಾದ ಮಿಲಿಟರಿ ಮೈತ್ರಿಯನ್ನು ಬೆಸೆಯುವ ಹಿಂದಿನ ಅಮೆರಿಕನ್ ಆಡಳಿತದ ನಿಲುವನ್ನು ಮುಂದೊಯ್ದಿದೆ. ಟಿಲ್ಲರ್‌ಸನ್ ನವದೆಹಲಿಗೆ ಆಗಮಿಸಿದ್ದು ಇಸ್ಲಾಮಾಬಾದ್‌ಗೆ ಭೇಟಿ ನೀಡಿದ ನಂತರ. ಟ್ರಂಪ್ ಆಡಳಿತ ಅಫಘಾನಿಸ್ತಾನದ ತಿಕ್ಕಾಟವನ್ನು ಪರಿಹರಿಸುವಲ್ಲಿ ಪಾಕಿಸ್ತಾನಕ್ಕೆ ಒಂದು ಮಹತ್ವದ ಪಾತ್ರವಿದೆ ಎಂಬುದನ್ನು ಒಪ್ಪಿಕೊಂಡಿದೆ. ಪಾಕಿಸ್ತಾನೀ ಆಡಳಿತ ಅವರ ನೆಲದಿಂದ ಕಾರ್ಯಾಚರಿಸುವ ಭಯೋತ್ಪಾದಕ ಗುಂಪುಗಳ ವಿರುದ್ಧ ಕ್ರಮ ವಹಿಸಬೇಕು ಎಂದು ಒತ್ತಡ ಹಾಕಿದ್ದಾಗಿ ಟಿಲ್ಲರ್‌ಸನ್ ಅಬ್ಬರದ ಆಶ್ವಾಸನೆ ನೀಡಿದರು. ಎಂದಿನಂತೆ ಇದು ಭಾರತದ ಆತಂಕಗಳನ್ನು ಶಮನ ಮಾಡಲು. ಆದರೆ ವಾಸ್ತವತೆಯೆಂದರೆ, ಟ್ರಂಪ್ ಆಡಳಿತ ಆಫ್‌ಪಾಕ್ ಕಾರ್ಯತಂತ್ರವನ್ನು ಬಿಟ್ಟುಕೊಡಲು ಸಾಧ್ಯವಿಲ್ಲ.

ಇರಾನ್ ವಿರುದ್ಧ ತನ್ನ ದಿಗ್ಬಂಧನಗಳು ಮತ್ತು ವೈಷಮ್ಯಪೂರ್ಣ ಕಸರತ್ತುಗಳಲ್ಲಿ ಭಾರತವನ್ನೂ ಒಳಗೊಳ್ಳಲು ಅವರು ಪ್ರಯತ್ನಿಸಿದರು. ಟ್ರಂಪ್ ಆಡಳಿತ ಹಿಂದಿನ ಒಬಾಮಾ ಆಡಳಿತ ಇರಾನಿನೊಂದಿಗೆ ಮಾಡಿಕೊಂಡಿರುವ ಪರಮಾಣು ಒಪ್ಪಂದವನ್ನು ಮುರಿಯಲು ದೃಢನಿರ್ಧಾರ ಮಾಡಿದೆ. ಇರಾನ್ ವಿರುದ್ಧದ ಅಮೆರಿಕನ್ ದಿಗ್ಬಂಧನಗಳಲ್ಲಿ ಭಾಗಿಯಾಗುವುದು ಇಂಧನ ಮತ್ತು ಆರ್ಥಿಕ ವಲಯಗಳಲ್ಲಿ ಭಾರತದ ಮಹತ್ವದ ಹಿತಗಳಿಗೆ ಧಕ್ಕೆ ತರುತ್ತಾದರೂ, ಹಿಂದಿನ ಅನುಭವಗಳನ್ನು ನೋಡಿದರೆ ಮೋದಿ ಸರಕಾರ ಅಮೆರಿಕನ್ ಒತ್ತಡಗಳಿಗೆ ಮಣಿಯಬಹುದು.

ಈಗಾಗಲೇ ಅಧ್ಯಕ್ಷ ಒಬಾಮರೊಂದಿಗೆ ಹಿಂದೂ ಮಹಾಸಾಗರ ಮತ್ತು ಏಶ್ಯ-ಶಾಂತಸಾಗರ ಪ್ರದೇಶದಲ್ಲಿ ಒಂದು ಜಂಟಿ ವ್ಯೂಹದ ಹೇಳಿಕೆಗೆ ಸಹಿ ಹಾಕಿರುವ ಮೋದಿ ಸರಕಾರ ಈ ಸಂಬಂಧವನ್ನು ಬಲಪಡಿಸಲು ಮುಂದಿನ ಕ್ರಮಗಳನ್ನು ಕೈಗೊಳ್ಳಲು ಹೊರಟಿದೆ. ಎರಡೂ ದೇಶಗಳ ವಿದೇಶಾಂಗ ಮತ್ತು ರಕ್ಷಣಾ ಸಚಿವರುಗಳ "ಇಬ್ಬರು-ಇಬ್ಬರು" ಮಂತ್ರಿಮಟ್ಟದ ಸಂವಾದದ ಬಗ್ಗೆ ಮುತುವರ್ಜಿ ವಹಿಸಲಾಗುತ್ತಿದೆ. ಇದು ಈ ಹಿಂದೆ ವಿದೇಶಾಂಗ ಮತ್ತು ವಾಣಿಜ್ಯ ಮಂತ್ರಿಗಳ ನಡುವಣ ಸಂವಾದಗಳ ಜಾಗದಲ್ಲಿ ನಡೆಯಲಿದೆ. ಈ ಮೂಲಕ ಈ ಸಂಬಂಧದದ ಮಿಲಿಟರಿ-ವ್ಯೂಹಾತ್ಮಕ ಸ್ವರೂಪವನ್ನು ಎತ್ತಿ ತೋರಲಾಗುತ್ತಿದೆ. ಜಪಾನೀ ವಿದೇಶಾಂಗ ಮಂತ್ರಿ ಈಗಾಗಲೇ ಭಾರತ, ಜಪಾನ್, ಆಸ್ಟ್ರೇಲಿಯ ಮತ್ತು ಅಮೆರಿಕಾದ ಚತುರ್ಭುಜ ಮೈತ್ರಿಯ ಕರೆ ನೀಡಿದ್ದಾರೆ. ಇದು ಅಮೆರಿಕಕ್ಕೆ ಅನುಕೂಲಕರವಾದ ಒಂದು ಹೆಜ್ಜೆ.

ಭಾರತ ಅಮೆರಿಕಾದಿಂದ ಲಕ್ಷ ಕೋಟಿ ಡಾಲರುಗಳ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಖರೀದಿಸಲು ಉದ್ಯುಕ್ತವಾಗಿದೆ. ಸಪ್ಟಂಬರ್‌ನಲ್ಲಿ ಭಾರತಕ್ಕೆ ಬಂದ ರಕ್ಷಣಾ ಕಾರ್ಯದರ್ಶಿ ಜನರಲ್ ಮಟ್ಟೀಸ್ ಮತ್ತು ಈಗ ಟಿಲ್ಲರ್‌ಸನ್ ಇಬ್ಬರೂ ಭಾರತ ಎಫ್16-ಎಫ್18 ಯುದ್ಧವಿಮಾನಗಳನ್ನು ಖರೀದಿಸಬೇಕು ಎಂದು ಆಗ್ರಹಿಸಿದ್ದಾರೆ. ಇದರೊಂದಿಗೆ ಸಿಐಎಸ್‌ಎಂಒಎ ಮುಂತಾದ "ಬುನಾದಿ" ಮಿಲಿಟರಿ ಒಪ್ಪಂದಗಳಿಗೆ ಸಹಿ ಹಾಕಬೇಕೆಂಬ ಒತ್ತಡವೂ ಸೇರಿದೆ.

ಟ್ರಂಪ್‌ರವರ ವಿದೇಶಾಂಗ ಧೋರಣೆಯ ನಿಲುವುಗಳು ಭವಿಷ್ಯದಲ್ಲಿ ಹೇಗಿರಬಹುದು ಎಂದು ಹೇಳುವುದು ಕಷ್ಟವಾದರೂ ಭಾರತಕ್ಕೆ ಸಂಬಂಧಪಟ್ಟಂತೆ ಅವರ ದೀರ್ಘಾವಧಿ ಕಾರ್ಯವ್ಯೂಹದಲ್ಲಿ ಯಾವ ಬದಲಾವಣೆಯೂ ಆಗದು ಎಂಬುದನ್ನು ಟಿಲ್ಲರ್‌ಸನ್ ಭೇಟಿ ದೃಢಪಡಿಸಿದೆ.



ನೋಟುರದ್ದತಿ
ಭಾರತದ ಅತಿ ದೊಡ್ಡ ರಾಜಕೀಯ ಹಗರಣ

ಅದನ್ನು ನಡೆಸಿದವರು ದೇಶದ ಪ್ರಧಾನ ಮಂತ್ರಿಗಳು, ಅದಕ್ಕೆ ಬಲಿಯಾದವರು? ಅವರ ತ್ಯಾಗದ ಕರೆಗೆ ಓಗೊಡಲು ಪ್ರಯತ್ನಿಸಿದ 125 ಕೋಟಿ ಸಾಮಾನ್ಯ ಭಾರತೀಯರು

ಬಿ. ಸೃಜನಾ,
ಸಂಶೋಧನಾ ವಿಶ್ಲೇಷಕರು
ಕೃಪೆ: ನ್ಯೂಸ್‌ಕ್ಲಿಕ್.ಇನ್

ಒಂದು ವರ್ಷದ ಹಿಂದೆ, ನವಂಬರ್ 8, 2016– ಪ್ರಧಾನ ಮಂತ್ರಿಗಳು ದೇಶವನ್ನುದ್ದೇಶಿಸಿ ಕಪ್ಪು ಹಣ, ಖೋಟಾನೋಟುಗಳು ಇತ್ಯಾದಿಗಳ ಬಗ್ಗೆ ಮಾತಾಡುತ್ತ 500 ರೂ. ಮತ್ತು 1000ರೂ.ಗಳ ನೋಟುಗಳು ಈ ಮಧ್ಯರಾತ್ರಿಯಿಂದ ರದ್ದಾಗುತ್ತವೆ ಎಂದು ಸಾರಿದರು. ಇದರಿಂದಾಗುವ ಸ್ವಲ್ಪ ಅನಾನುಕೂಲತೆಗಳನ್ನು ಸಹಿಸಿಕೊಳ್ಳಿ ಎಂದರು. ನಿಮ್ಮ ಈ ತ್ಯಾಗದಿಂದ ಕಪ್ಪು ಹಣ, ಭ್ರಷ್ಟಾಚಾರ, ಬೇನಾಮಿ ವ್ಯವಹಾರಗಳು, ಭಯೋತ್ಪಾದನೆ ಮತ್ತು ಖೋಟಾ ನೋಟು–ದೇಶವನ್ನು ಬಾಧಿಸುತ್ತಿರುವ ಈ ಹಾವಳಿಗಳೆಲ್ಲವೂ ನಿವಾರಣೆಗೊಳ್ಳುತ್ತವೆ ಎಂದು 125 ಕೋಟಿ ಭಾರತೀಯ ನಾಗರಿಕರಿಗೆ ಹೇಳಿದರು.

ಈಗ ಒಂದು ವರ್ಷವಾಗುತ್ತಿರುವಂತೆ ಪರಮ ಮೋದಿ ಭಕ್ತರೂ ನೋಟುರದ್ಧತಿ ಈ ಯಾವುದನ್ನೂ ಈಡೇರಿಸದೆ ಸಂಪೂರ್ಣ ವಿಫಲವಾಗಿದೆ ಎಂದು ಒಪ್ಪದಿರಲು ಸಾಧ್ಯವಿಲ್ಲ. ಇದು ಪ್ರಧಾನಿಗಳ ಮೇರೆ ಮೀರಿದ ದುರಹಂಕಾರವನ್ನು ಮಾತ್ರವಲ್ಲ, ಭಾರತೀಯ ಆರ್ಥಿಕ ಹೇಗೆ ಕೆಲಸ ಮಾಡುತ್ತಿದೆ ಎಂಬ ಅವರ ತಿಳುವಳಿಕೆಯ ಕೊರತೆಯನ್ನೂ ಬಯಲಿಗೆ ತಂದಿದೆ.

ನೋಟುರದ್ಧತಿಯ ವಿಫಲತೆಯ ಅಂಶಗಳತ್ತ ಮತ್ತೊಮ್ಮೆ ನೋಟ ಬೀರಿದರೆ ಬಹುಶಃ ಅದ–ರಿಂದ ಪ್ರಯೋಜನಕರವಾದ ಪಾಟಗಳನ್ನು ಪಡೆಯಬಹುದು.

ನೋಟುರದ್ಧತಿ ದೇಶದ ಅಸಂಖ್ಯ ಕಾಯಿಲೆಗಳನ್ನು ಗುಣ ಪಡಿಸುತ್ತದೆ ಎಂಬ ಯೋಚನೆ ತಪ್ಪಾಗಿತ್ತು, ಮತ್ತು ನೋಟುರದ್ಧತಿ ಹೇರಿದ ಕಷ್ಟಗಳು ಎರಡು ತಿಂಗಳಲ್ಲಿ ಹೋಗಿಬಿಡುತ್ತವೆ ಎಂಬ ಅವರ ಲೆಕ್ಕಾಚಾರವೂ ತಪ್ಪಾಗಿತ್ತು ಎಂಬುದೀಗ ಸ್ಪಷ್ಟ.

ಹಾಸಿಗೆ, ದಿಂಬುಗಳು, ಕಪಾಟುಗಳು ಮತ್ತಿತರ ಕತ್ತಲ ಜಾಗಗಳಲ್ಲಿ ಪೇರಿಸಿಟ್ಟ ಕಪ್ಪು ಹಣ ಹೇಗೆ ನಿಷ್ಪ್ರಯೋಜಕಗೊಳ್ಳುತ್ತದೆ, ಹೇಗೆ 3–4ಲಕ್ಷ ಕೋಟಿ ರೂ.ಗಳಷ್ಟು ಹಣ ರಿಝರ್ವ್ ಬ್ಯಾಂಕಿಗೆ ಬಂದು ಜನಧನ ಖಾತೆಗಳಿಗೆ ಬರುತ್ತವೆ, ಹೇಗೆ ಹೊಲಸು ಕಪ್ಪು ಹಣದ ಕಂತೆಗಳಿಗೆ ಅದರ ಕಳ್ಳ ದಾಸ್ತಾನುಗಾರರು ಬೆಂಕಿ ಹಚ್ಚುತ್ತಾರೆ, ಅಥವ ನದಿ–ಕಾಲುವೆಗಳಲ್ಲಿ ತೇಲ ಬಿಡುತ್ತಾರೆ ಎಂಬ ದೃಶ್ಯಗಳನ್ನು ಚಿತ್ರಿಸಲಾಯಿತು.

ಒಂದು ತಿಂಗಳಾಗುತ್ತಿದ್ದಂತೆಯೇ.... ಹುಸಿಯಾದ ಕಪ್ಪುಹಣ ನಿವಾರಣೆಯ ಮಂತ್ರ

ಆದರೆ ಒಂದು ತಿಂಗಳಾಗುತ್ತಿದ್ದಂತೆಯೇ ಸುಮಾರಾಗಿ ಎಲ್ಲ ಹಣವೂ ರಿಝರ್ವ್ ಬ್ಯಾ–ಂಕ್ಗೆ ಬರಲಾರಂಭಿಸಿದವು. ಡಿಸೆಂಬರ್ 15ರ ವೇಳೆಗಾಗಲೇ ರದ್ದಾದ 15.44 ಲಕ್ಷ ಕೋಟಿ ರೂ. ಮೌಲ್ಯದ ನೋಟುಗಳಲ್ಲಿ 12.44 ಲಕ್ಷ ಕೋಟಿ ರೂ.ನಷ್ಟು ಹಿಂದಿರುಗಿ ಬಂದವು. 3ಲಕ್ಷ ರೂ.ನಷ್ಟು ಕಪ್ಪು ಹಣವನ್ನು ಹೊರಗೆಳೆಯುವ ಮಾತು ಸುಳ್ಳಾಗಲಾರಂಭಿಸಿತು. ಕರೆನ್ಸಿ ರೂಪದಲ್ಲಿದ್ದ ಕಪ್ಪುಹಣ ಬ್ಯಾಂಕುಗಳಿಗೆ ಹಿಂದಿರುಗಿ ಬರುತ್ತಿದೆ ಎಂಬುದು ಖಾತ್ರಿಯಾಯಿತು.

ಕಪ್ಪು ಹಣದ ಪೀಡೆಯ ಮಾತು ನಿಂತಿತು ನಗದು ಹೊಸ ಪೀಡೆಯಾಯಿತು.......

ನುರಿತ ರಾಜಕಾರಣಿ ಮೋದಿಯವರು ಈಗ ರಾಗ ಬದಲಿಸಿದರು. ಈಗ ಹೋರಾಟ ಕಪ್ಪು ಹಣದ ವಿರುದ್ಧವಾಗಿರಲಿಲ್ಲ, ನಗದಿನ ವಿರುದ್ಧವೇ ತಿರುಗಿ–ತು. ಮುಂದಿನ 15 ದಿನಗಳಲ್ಲಿ ಮೋದಿಯವರ ಪ್ರಚಾರ ಯಂತ್ರದ ಬಹಳಷ್ಟು ಸಮಯ ನಗದು ಹೊಂದಿರುವುದು, ನಗದನ್ನು ಬಳಸುವುದು ಮತ್ತು ನಗದಿನ ಬಗ್ಗೆ ಯೋಚಿಸುವುದೇ ಪಾಪ ಎಂದು ಜನಗಳು ಭಾವಿಸುವಂತೆ ಮಾಡಲಾಯಿತು. ಕಪ್ಪು ಹಣದ ಪೀಡೆಯ ಮಾತು ಹೋಯಿತು. ಈಗ ನಗದು ಹೊಸ ಪೀಡೆಯಾಯಿತು. ಅದನ್ನು ತೆ–ೊಡೆದು ಹಾಕುವುದು ಮೋದಿಯವರ ಹೊಸ ದೃಢನಿರ್ಧಾರವಾಯಿತು.

ಆದರೆ ಇದೂ ಅವರನ್ನು ಬಹಳ ದೂರ ಒಯ್ಯಲಿಲ್ಲ. ನಂಬಲರ್ಹ ಇಂಟರ್‌ನೆಟ್, ಸಾಕಷ್ಟು ಸಂಖ್ಯೆಯಲ್ಲಿ ಸ್ಮಾರ್ಟ್ ಫೋನ್‌ಗಳು ಮತ್ತು ಮಾರಾಟದ ಜಾಗದಲ್ಲಿ ಬಳಸಬೇಕಾದ ಪಿಒಎಸ್ ಮೆಶಿನ್‌ಗಳ ಕೊರತೆಯಿಂದಾಗಿ ಜನಗಳು ನಗದುರಹಿತ ವ್ಯವಹಾರ ಮಾಡಬೇಕೆಂಬ ದಬಾವಣೆ ಫಲಕಾರಿಯಾಗಲಿಲ್ಲ.



ಆರ್ಥಿಕದ ಜೀವದ್ರವ್ಯವನ್ನೇ ಖಾಲಿ ಮಾಡಿದರು..

ಇನ್ನೊಂದೆಡೆಯಲ್ಲಿ ನಗದಿಲ್ಲದೆ ವ್ಯವಹಾರಗಳು ಕುಸಿದು ಆರ್ಥಿಕ ವ್ಯವಸ್ಥೆ ಕುಗ್ಗಿತು, ಬೆಳವಣಿಗೆ ದರ ಈ ಮೂರುವರ್ಷಗಳಲ್ಲಿ ಕಂಡಿರದಷ್ಟು ಅತಿ ಕೆಳಕ್ಕೆ ಇಳಿಯಿತು. ಗ್ರಾಮೀಣ ಅರ್ಥವ್ಯವಸ್ಥೆಯಂತೂ ಭಾರೀ ಹೊಡೆತ ತಿಂದಿತು, ಬಂಪರ್ ಬೆಳೆ ಬಂದರೂ ಪ್ರಯೋಜನವಾಗಲಿಲ್ಲ. ಸಾವಿರಾರು ಸಣ್ಣ ವ್ಯವಹಾರ ಘಟಕಗಳು, ಅದರಲ್ಲಿ ಕೆಲಸಮಾಡುವ ಲಕ್ಷಾಂತರ ಜನಗಳು ಕೈಚೆಲ್ಲಿ ಕೂರಬೇಕಾಯಿತು. ಹಲವು ವಲಸೆ ಕಾರ್ಮಿಕರು ಕೆಲಸ ಸಿಗದೆ ತಮ್ಮ ಊರುಗಳಿಗೆ ಮರಳಿದರು.

ಮೋದಿಯವರು ನಗದಿನೊಂದಿಗೆ ಭಾರತೀಯ ಆರ್ಥಿಕದ ಜೀವದ್ರವ್ಯವನ್ನೇ ಖಾಲಿ ಮಾಡಿ ಬಿಟ್ಟಿದ್ದರು. ರದ್ದಾದ ನೋಟುಗಳ ಜಾಗದಲ್ಲಿ ಹೊಸ ನಗದಿನ ಪೂರೈಕೆಯ ನಿಧಾನ ಗತಿಯಿಂದಾಗಿ ಆರ್ಥಿಕ ವ್ಯವಸ್ಥೆ ಈಗಲೂ ಕುಂಟುತ್ತ ಸಾಗಿದೆ. ಈಗಲೂ ಒಂದು ವರ್ಷವಾಗುತ್ತಿದ್ದರೂ ಸುಮಾರು 2ಲಕ್ಷ ಕೋಟಿರೂ.ಗಳ ಮೌಲ್ಯದ ನಗದಿನ ಕೊರತೆಯಿದೆ.

ಭಾರತೀಯರು ನಗದುರಹಿತ ವ್ಯವಹಾರಗಳತ್ತ ಮುಖಮಾಡಿದ್ದಾರೆ ಎಂದೆಲ್ಲ ಎಷ್ಟೇ ಪ್ರಚಾರ ಮಾಡಿದರೂ ಇತ್ತೀಚಿನ ವರದಿಗಳ ಪ್ರಕಾರ ಕ್ರೆಡಿಟ್ ಕಾಡ್, ಡೆಬಿಟ್ ಕಾರ್ಡ್, ಮೊಬೈಲ್‌ಃನ ಇತ್ಯಾದಿ ನಗದುರಹಿತ ವ್ಯವಹಾರಗಳಲ್ಲಿ ಈ ಒಂದು ವರ್ಷದಲ್ಲಿ ಆದ ಹೆಚ್ಚಳ ಕೇವಲ 19ಸಾವಿರ ಕೋಟಿ.ಇದು 2ಲಕ್ಷ ಕೋಟಿರೂ.ನಗದಿಗೆ ಪರಿಹಾರವಾಗಬಲ್ಲುದೇ? ಅದಕ್ಕೆ ಜನಗಳು ದಿನಗಟ್ಟಲೆ ಬ್ಯಾಂಕ್, ಎಟಿಎಂಗಳ ಮುಂದೆ ಸಾಲುನಿಂತು ಇಷ್ಟೊಂದು 'ತ್ಯಾಗ' ಮಾಡಬೇಕಾದ ಅಗತ್ಯ ಖಂಡಿತಾ ಇರಲಿಲ್ಲ.

ಇನ್ನು, ಭಯೋತ್ಪಾದನೆಯನ್ನು ನಿರ್ಮೂಲ ಮಾಡುವ ಆಶ್ವಾಸನೆ.ಆ ಬಗ್ಗೆ ಹೇಳದಿರುವುದೇ ಒಳ್ಳೆಯದೇನೋ.

ಭಯೋತ್ಪಾದನೆಯ ಕ್ಲಿಷ್ಟ ಸಮಸ್ಯೆಯನ್ನು ಖೋಟಾ ನೋಟು ಮಟ್ಟಕ್ಕೆ ಇಳಿಸಿ ಸಾಧಿಸಿದ್ದೇನು?

ಗಡಿಯಾಚೆಯಿಂದ ವಿಲನ್‌ಗಳು ಪಾಕಿಸ್ತಾನದಲ್ಲಿ ಮುದ್ರಿತವಾದ ಖೋಟಾ ನೋಟುಗಳ ಕಂತೆಗಳನ್ನು ಹಿಡಿದುಕೊಂಡು ಬಂದು ಭಯೋತ್ಪಾದಕರಿಗೆ ಹಂಚುವ ಚಿತ್ರವನ್ನು ಬಿಂಬಿಸಿ ನೋಟುರದ್ಧತಿಯಿಂದ ಇದನ್ನು ಮುಗಿಸಿ ಬಿಡುವುದಾಗಿ ಪ್ರಧಾನಿಗಳು ಗುಡುಗಿದರು. ಆದರೆ ಭಯೋತ್ಪಾದಕ ದಾಳಿಗಳೇನೂ ಕಡಿಮೆಯಾಗಿಲ್ಲ. 2016ರಲ್ಲಿ 382 ಭದ್ರತಾ ಸಿಬ್ಬಂದಿ ಮತ್ತು ನಾಗರಿಕರು ಇಂತಹ ಕೃತ್ಯಗಳಿಗೆ ಬಲಿಯಾಗಿದ್ದಾರೆ, 2017ರಲ್ಲಿ ಈಗಾಗಲೇ ಇದು 315 ದಾಟಿದೆ.

1995ರಲ್ಲಿ 2200 ಇದ್ದ ಈ ಸಂಖ್ಯೆ 2005ರಲ್ಲಿ 1650ಕ್ಕಿಳಿದು 2015ರಲ್ಲಿ, ನೋಟುರದ್ಧತಿಯ ಮೊದಲೇ 336ಕ್ಕೆ ಇಳಿದಿತ್ತು ಎಂಬ ಸಂಗತಿ ಭಯೋತ್ಪಾದನೆ ನಿಗ್ರಹಕ್ಕೆ ಬಹುಶಃ ನೋಟುರದ್ಧತಿಗಿಂತ ಉತ್ತಮವಾದ ಮಾರ್ಗಗಳಿವೆ ಎಂಬುದನ್ನು ಸೂಚಿಸುತ್ತದೆ. ಭಯೋತ್ಪಾದನೆಯ ಕ್ಲಿಷ್ಟ ಸಮಸ್ಯೆಯನ್ನು ಖೋಟಾ ನೋಟುಗಳ ಮಟ್ಟಕ್ಕೆ ಇಳಿಸಿ ಮೋದಿಯವರು ಸಾಧಿಸಿದ್ದೇನು?

ರಿಝರ್ವ್ ಬ್ಯಾಂಕಿಗೆ ಈಗ ರದ್ದಾದ 15.44 ಲಕ್ಷ ಕೋಟಿ ರೂ.ಗಳಲ್ಲಿ 15.28 ಲಕ್ಷ ಕೊಟಿ ರೂ. ವಾಪಾಸಾಗಿದೆ. ಇದರಲ್ಲಿ ಕೇವಲ 0.0027% ಮಾತ್ರವೇ ಖೋಟಾ ಹಣ. ಇಷ್ಟಕ್ಕಾಗಿ ನೂರಕ್ಕೂ ಹೆಚ್ಚು ಜನಸಾಮಾನ್ಯರು ಪ್ರಾಣ ಕಳಕೊಳ್ಳಬೇಕಾಗಿತ್ತೇ?

ಗಾಯಕ್ಕೆ ಉಪ್ಪು ಸವರುವಂತೆ, ನೋಟುರದ್ಧತಿಯ ಗಡುವು ಮುಗಿಯುವ ಮೊದಲೇ ಹೊಸ ಖೋಟಾ ನೋಟುಗಳು ಚಲಾವಣೆಗೆ ಬಂದೇ ಬಿಟ್ಟವು. ನೋಟುರದ್ಧತಿಯಾದ ಎರಡೇ ವಾರದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಕೊಲ್ಲಲ್ಪಟ್ಟ ಭಯೋತ್ಪಾದಕನ ಬಳಿ 2000 ರೂ. ಖೋಟಾನೋಟು ಪತ್ತೆಯಾಯಿತಂತೆ.

ಇವೆಲ್ಲದರ ಸಾರಾಂಶ ಏನು?

ರದ್ದಾದ ಹಣದಲ್ಲಿ 98.96% ರಿಝರ್ವ್ ಬ್ಯಾಂ–ಕಿಗೆ ಮರಳಿ ಬಂದಿದೆ. ಹಿಂದಿರುಗಿ ಬರದಿರುವ ಕೇವಲ 16 ಸಾವಿರ ಕೋಟಿ ರೂ. ಕೂಡ ಕಪ್ಪು ಹಣವಾಗಿರುವ ಸಾಧ್ಯತೆಯಿಲ್ಲ. ಅದು ಮೋದಿಯವರು ಹಳೆಯ ನೋಟುಗಳ ವಿನಿಮಯಕ್ಕೆ ನೀಡಿದ್ದ ಅವಕಾಶವನ್ನು ಇದ್ದಕ್ಕಿದ್ದಂತೆ ಡಿಸೆಂಬರ್ 31ರಂದು ಮುಚ್ಚಿದ್ದರಿಂದಾಗಿ ವಿನಿಮಯ ಮಾಡಲಾಗದ ಬಡಜನರ ಹಣವಾಗಿರಬಹುದಷ್ಟೇ.

ದೇಶ ಹೊಸ ಕರೆನ್ಸಿಗಳ ಮುದ್ರಣಕ್ಕೆ 21 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗಿ ಬಂದಿದೆ. ಅದಕ್ಕಿಂತ ಎಷ್ಟೋ ಹೆಚ್ಚು ಹಣ ಧ್ವಂಸಗೊಂಡ ಉದ್ಯೋಗಗಳು ಮತ್ತು ವ್ಯವಹಾರಗಳಲ್ಲಿ ನಷ್ಟಗೊಂಡಿವೆ.

ಕಪ್ಪು ಹಣ ಇದ್ದವರಲ್ಲಿ ಕೆಲವು ಬಿಜೆಪಿ ಮುಖಂಡರೂ ಇದ್ದರು ಎಂದು ಈಗಾಗಲೇ ವರದಿಯಾಗಿದೆ. ಅವರೆಲ್ಲ ವಿವಿಧ ವಿಧಾನಗಳಲ್ಲಿ ತಮ್ಮ ಕಪ್ಪು ಹಣವನ್ನು ಸದ್ದಿಲ್ಲದೆ ಪರಿವರ್ತಿಸಿಕೊಂಡಿದ್ದಾರೆ. ಅಮಿತ್‌ಷಾ ಪುತ್ರ ಜಯ ಷಾರಂತವರಂತೂ ನೋಟುರದ್ಧತಿಯ ಅಡಿಯಲ್ಲಿ ಸಮೃದ್ಧಿ ಕಂಡಿದ್ದಾರೆ. ಕಲ್ಲಿದ್ದಲು ಹಗರಣ, ವಿದ್ಯುತ್ ಉಪಕರಣ ಹಗರಣದ ನಡುವೆಯೂ ಅದಾಣಿ ಆರಾಮವಾಗಿದ್ದಾರೆ. ಅಂ–ದರೆ ಚಮಚಾ ಬಂಡವಾಳಶಾಹಿಗಳು ಮತ್ತು ಭ್ರಷ್ಟ ರಾಜಕಾರಣಿಗಳು ಎಂದಿನಂತೆ ತಮ್ಮ ವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಒಟ್ಟಿನಲ್ಲಿ ನೋಟುರದ್ದತಿ ಭಾರತದ ಅತಿ ದೊಡ್ಡ ರಾಜಕೀಯ 'ಹಗರಣವೆನ್ನಬಹುದು. ಅದನ್ನು ನಡೆಸಿದವರು ದೇಶದ ಪ್ರಧಾನ ಮಂತ್ರಿಗಳು, ಅದಕ್ಕೆ ಬಲಿಯಾದವರು? ಇದಕ್ಕೆ ಬೆಂಬಲ ನೀಡಲು ಪ್ರಯತ್ನಿಸಿದ 125 ಕೋಟಿ ಸಾಮಾನ್ಯ ಭಾರತೀಯರು.

ಯಶಸ್ವಿ ನೋಟುರದ್ದತಿ? –ಸತೀಶ್ ಆಚಾರ್ಯ





ಕೈಗಾರಿಕೆ, ಬೇಸಾಯ, ಸಣ್ಣ ಉದ್ದಿಮೆ, ರಿಯಲ್ ಎಸ್ಟೇಟ್ ಇತ್ಯಾದಿಗಳನ್ನು ಕಡವಿ ಇಲಿ ಹಿಡಿದ ಕತೆ

ಪ್ರಧಾನಿಗಳು ನೋಟುರದ್ದತಿ ಬಗ್ಗೆ ಆಪ್‌ನಲ್ಲಿ ಅಭಿಪ್ರಾಯ ಕೇಳಿದರು–ಕೀರ್ತಿಶ್, ಬಿಬಿಸಿ ಹಿಂದಿ



ನೋಟುರದ್ದತಿ–ವ್ಯಂಗ್ಯಚಿತ್ರಕಾರರು ಕಂಡಂತೆ...



ಮಂಜುಲ್, ಡಿಎನ್‌ಎ



ಗೋಕುಲ್, ಡೆಕ್ಕನ್ ಕ್ರಾನಿಕಲ್



ಹಗರಣಕೋರ ಕಪ್ಪು ಹಣದವರ ಕೇಕೆ



ಸಂದೀಪ್ ಅಧ್ವರ್ಯು,ಟೈಂಸ್ ಆಫ್ ಇಂಡಿಯ

ಸೀತಾರಾಮ್ ಯೆಚೂರಿ
ಅನು: ಟಿ. ಸುರೇಂದ್ರರಾವ್

ಅಕ್ಟೋಬರ್ ಕ್ರಾಂತಿ



ಇವತ್ತಿನ ಪರಿಸ್ಥಿತಿಯಲ್ಲಿ ವರ್ಗ ಹೋರಾಟಗಳನ್ನು ತೀವ್ರಗೊಳಿಸಲು ಒಂದು ದಾರಿದೀಪ

ಸಿಪಿಐ(ಎಂ)ನ 21ನೇ ಮಹಾಧಿವೇಶನದಲ್ಲಿ ತೀರ್ಮಾನಿಸಿದಂತೆ ವರ್ಷವಿಡೀ ನಡೆದ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವ ಆಚರಣೆಯು ನವಂಬರ್ 7, 2017 ರಂದು ಕೊನೆಗೊಳ್ಳಲಿದೆ. ಈ ವರ್ಷದ ಅವಧಿಯಲ್ಲಿ, ಪಕ್ಷದ ಎಲ್ಲಾ ಹಂತಗಳಲ್ಲಿ ರಾಜಕೀಯ, ಸೈದ್ಧಾಂತಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿದೆ. ಸಮಾಜವಾದದ ಸಾಧನೆಗಳನ್ನು, 20ನೇ ಶತಮಾನದ ಇತಿಹಾಸವನ್ನು ರೂಪಿಸುವಲ್ಲಿ ಅದು ನೀಡಿದ ಕೊಡುಗೆ ಹಾಗೂ ಅದು ಭವಿಷ್ಯದ ಮಾನವನ ನಾಗರೀಕತೆಯನ್ನು ಮುಂದೆ ಕೊಂಡೊಯ್ಯುವಲ್ಲಿ ಅಚ್ಚಳಿಯದ ಪ್ರಭಾವ ಬೀರಿರುವುದನ್ನು ಆ ಚಟುವಟಿಕೆಗಳ ಮೂಲಕ ಎತ್ತಿತೋರಿಸಲಾಗಿದೆ.

ಅದರೊಟ್ಟಿಗೇ 'ದಾಸ್ ಕ್ಯಾಪಿಟಲ್'(ಸೆಪ್ಟೆಂಬರ್ 1867)ನ ಮೊದಲ ಸಂಪುಟ ಪ್ರಕಟಗೊಂಡ 150 ನೇ ವರ್ಷಾಚರಣೆ ಮತ್ತು ಕಾರ್ಲ್ ಮಾರ್ಕ್ಸ್ (ಮೇ 5, 1818)ನ 200ನೇ ಜನ್ಮದಿನಾಚರಣೆಯನ್ನೂ ಮಾಡಿದ್ದೇವೆ. ಪಕ್ಷವು ತನ್ನ ರಾಜಕೀಯ, ಸೈದ್ಧಾಂತಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಹೀಗೆಯೇ ಮುಂದುವರಿಸುತ್ತದೆ.

ಈ ವರ್ಷದ ಅವಧಿಯಲ್ಲಿ, ಸಮಾಜವಾದಿ ಸೋವಿಯೆಟ್ ಒಕ್ಕೂಟ (ಯು.ಎಸ್.ಎಸ್.ಆರ್.) ನ ಬಹುತೇಕ ಎಲ್ಲಾ ಕೊಡುಗೆಗಳನ್ನು ಮತ್ತು ಅಂತರ್‍ರಾಷ್ಟ್ರೀಯ ದುಡಿಯುವ ಜನರ ಚಳುವಳಿಗೆ ಹಾಗೂ ಜಗತ್ತಿನ ಎಲ್ಲೆಡೆ ಶ್ರಮಜೀವಿಗಳ ಹೋರಾಟಗಳಿಗೆ ಅಕ್ಟೋಬರ್ ಕ್ರಾಂತಿ ನೀಡಿದ ಸ್ಪೂರ್ತಿಯನ್ನು ದಾಖಲಿಸಲಾಗಿದೆ. ಆ ಸ್ಪೂರ್ತಿ ಮುಂದುವರಿಯುತ್ತದೆ. ಈ ಅಕ್ಟೋಬರ್ ಕ್ರಾಂತಿಯ ನಂತರ ಜಗತ್ತಿನ ಎಲ್ಲಾ ದೇಶಗಳಲ್ಲೂ ಕಮ್ಯುನಿಸ್ಟ್ ಪಕ್ಷಗಳು ರಚಿಸಲ್ಪಟ್ಟವು ಮತ್ತು ಮಾನವನ ಸ್ವಾತಂತ್ರ್ಯ ಮತ್ತು ವಿಮೋಚನಾ ಚಳುವಳಿಗಳು ಜಾಗತಿಕವಾಗಿ ತೀವ್ರಗೊಂಡವು.

ಸಮಾಜವಾದಕ್ಕೆ ಹಿನ್ನಡೆ

ಬಲಿಷ್ಠ ಸೋವಿಯತ್ ಯೂನಿಯನ್ ಹೇಗೆ ಮತ್ತು ಏಕೆ ಪತನಗೊಂಡು ಅಲ್ಲಿ ಸಮಾಜವಾದದ ಸಾವಿಗೆ ಕಾರಣವಾಯಿತು ಎಂಬ ವಿಶ್ಲೇಷಣೆಯನ್ನು ಸಿಪಿಐ(ಎಂ) ಮಾಡಿದೆ. ಮಾರ್ಕ್ಸ್‌ವಾದ–ಲೆನಿನ್‌ವಾದವೆಂಬ ಸೃಜನಾತ್ಮಕ ವಿಜ್ಞಾನದ ಅಸಮರ್ಪಕತೆಗಳಿಂದಾಗಿ ಸಮಾಜವಾದಕ್ಕೆ ಹಿನ್ನಡೆಯಾಗಲಿಲ್ಲ ಎಂಬ ನಿರ್ಣಯಕ್ಕೆ ನಾವು ಬಂದೆವು ಮತ್ತು ಆ ನಿಲುವನ್ನು ಈಗಲೂ ಮುಂದುವರಿಸಿದ್ದೇವೆ. ಅದರ ಬದಲು, ಆ ಹಿನ್ನಡೆಯಾಗಿದ್ದು ಪ್ರಾಥಮಿಕವಾಗಿ ಮಾರ್ಕ್ಸ್‌ವಾದ–ಲೆನಿನ್‌ವಾದದ ವೈಜ್ಞಾನಿಕ ಮತ್ತು ಕ್ರಾಂತಿಕಾರಿ ತಿರುಳಿನಿಂದ ಅಡ್ಡಸರಿದಿದ್ದು. ಆದ್ದರಿಂದ, ಈ ಹಿನ್ನಡೆಗಳು ಮಾರ್ಕ್ಸ್‌ವಾದ–ಲೆನಿನ್‌ವಾದ ಅಥವಾ ಸಮಾಜವಾದಿ ಆದರ್ಶದ ನಿರಾಕರಣೆ ಅಲ್ಲ.

ಇವತ್ತಿನ ಜಗತ್ತಿನಲ್ಲಿ ಶಾಶ್ವತ ಪ್ರಸ್ತುತತೆ

ಇತಿಹಾಸದಲ್ಲಿ ಹೂತು ಹೋಗಿರುವ ಆ ಕ್ರಾಂತಿಯ ಶತಮಾನೋತ್ಸವವನ್ನು ಏಕೆ ಆಚರಿಸುತ್ತಿದ್ದೀರಿ ಎಂದು ನಮ್ಮನ್ನು ಟೀಕಿಸುವವರು ಮತ್ತು ಕಮ್ಯುನಿಸ್ಟ್ ವಿರೋಧಿಗಳು ಕೇಳುತ್ತಲೇ ಇರುತ್ತಾರೆ. ಅಕ್ಟೋಬರ್ ಕ್ರಾಂತಿಯ ಸಾಧನೆಗಳು ಮತ್ತು ಕೊಡುಗೆಗಳು ಏನೇ ಇರಬಹುದು, ಆದರೆ ಈಗ ಅದು ಇಲ್ಲವಲ್ಲ, ಆದ್ದರಿಂದ ಅದರ ಶತಮಾನೋತ್ಸವ ಏಕೆ ಆಚರಿಸಬೇಕು?

ಬಲಿಷ್ಠ ಸೋವಿಯತ್ ಯೂನಿಯನ್ ಇವತ್ತು ಅಸ್ತಿತ್ವದಲ್ಲಿಲ್ಲದೆ ಇರಬಹುದು, ಆದರೆ ಅಕ್ಟೋಬರ್ ಕ್ರಾಂತಿ ಮತ್ತು ಅದರ ಅನುಭವಗಳು ಇವತ್ತಿನ ಪರಿಸ್ಥಿತಿಯಲ್ಲೂ ಅಚ್ಚಳಿಯದ ಪ್ರಸ್ತುತತೆಯನ್ನು ಹೊಂದಿದೆ.

ಮೊದಲನೆಯದಾಗಿ, ಅಕ್ಟೋಬರ್ ಕ್ರಾಂತಿಯು ಮಾನವನ ವಿಮೋಚನಾ ಹೋರಾಟ ಕಾರ್ಯತಃ ಗೆಲ್ಲಬಲ್ಲುದು ಎಂಬುದನ್ನು ನಿರೂಪಿಸಿದೆ. ಮನುಷ್ಯರು ಹಾಗೂ ಮಾನವ ಜನಾಂಗದ ಪೂರ್ಣ ಸಾಮರ್ಥ್ಯ ಮತ್ತು ಶಕ್ತಿಯ ಸಾಧ್ಯತೆಗಳನ್ನು ಆ ನಂತರದ ಅನುಭವಗಳು ಸಾಬೀತು ಮಾಡಿವೆ. ಅಕ್ಟೋಬರ್ ಕ್ರಾಂತಿ ಯಶಸ್ವಿಯಾಗುವುದಾದರೆ, ನಮ್ಮಂಥ ದೇಶಗಳಲ್ಲೂ ಕ್ರಾಂತಿ ಸಾಧ್ಯ ಎನ್ನುವ ವಿಶ್ವಾಸವನ್ನು ಅದು ಇಂದಿಗೂ ಮೂಡಿಸುತ್ತಿದೆ.


ಜತೆಯಲ್ಲೇ, ಅಕ್ಟೋಬರ್ ಕ್ರಾಂತಿಯ ಅನುಭವಗಳಲ್ಲಿನ ಕೊನೇ ಪಕ್ಷ ನಾಲ್ಕು ಅಂಶಗಳು ಜಗತ್ತಿನ ಇವತ್ತಿನ ಪರಿಸ್ಥಿತಿಯಲ್ಲಿ ಪ್ರಸ್ತುತವಾಗಿಯೇ ಮುಂದುವರಿದಿವೆ.

ಸಾಮ್ರಾಜ್ಯಶಾಹಿ ವಿರೋಧ

ಸಾಮ್ರಾಜ್ಯಶಾಹಿಯ ವಿರುದ್ಧ ದೃಢವಾಗಿ ಹೋರಾಟ ಮಾಡದೆ ಯಾವುದೇ ಕ್ರಾಂತಿಕಾರಿ ಹೋರಾಟಗಳು ಯಶಸ್ವಿಯಾಗುವುದಿಲ್ಲ ಎಂಬುದನ್ನು ಅಕ್ಟೋಬರ್ ಕ್ರಾಂತಿ ಸ್ಪಷ್ಟವಾಗಿ ನಿರೂಪಿಸಿದೆ.

ಮಾರ್ಕ್ಸ್ ತೆರೆದಿಟ್ಟ ಬಂಡವಾಳವಾದಿ ಬೆಳವಣಿಗೆಯ ನಿಯಮಗಳ ಆಧಾರದಲ್ಲಿ, ಸಮಕಾಲೀನ ಜಾಗತಿಕ ಸನ್ನಿವೇಶವನ್ನು ಮಾರ್ಕ್ಸ್‌ವಾದೀ ದೃಷ್ಟಿಕೋನದಲ್ಲಿ ಮುಂಬೆಳೆಸಿದ ಲೆನಿನ್, ಬಂಡವಾಳದ ಶೇಖರಣೆ ಮತ್ತು ಕೇಂದ್ರೀಕರಣದ ನಿಯಮವು ಏಕಸ್ವಾಮ್ಯ ಬಂಡವಾಳವಾದದ ಸೃಷ್ಟಿಯಲ್ಲಿ ಪರ್ಯವಸಾನವಾಗುತ್ತದೆ ಮತ್ತು ಅಂತಿಮವಾಗಿ ಸಾಮ್ರಾಜ್ಯಶಾಹಿ ಹಂತವನ್ನು ತಲುಪುತ್ತದೆ ಎಂಬುದನ್ನು ಲೆನಿನ್ ಗಮನಿಸುತ್ತಾರೆ. ಅದರ ಎಲ್ಲಾ ಪರಿಣಾಮಗಳ ನಡುವೆ ಒಂದಂಶ ಎದ್ದು ತೋರುತ್ತದೆ: ಸಾಮ್ರಾಜ್ಯಶಾಹಿಯು ಇಡೀ ವಿಶ್ವವನ್ನು ಬಂಡವಾಳಶಾಹಿ ಶೋಷಣೆಯ ಕಕ್ಷೆಗೆ ಎಳೆದು ತರುತ್ತದೆ ಮತ್ತು ಅದೇ ಸಮಯದಲ್ಲಿ ಜಗತ್ತಿನ ಸಂಪನ್ಮೂಲಗಳನ್ನು ವಶಕ್ಕೆ ಪಡೆಯಲು ಸಾಮ್ರಾಜ್ಯಶಾಹಿ ಕೇಂದ್ರಗಳ ನಡುವೆ ಅತ್ಯಂತ ಕ್ರೂರ ವೈರುಧ್ಯಗಳನ್ನು ಹರಿಬಿಡುತ್ತದೆ. ಸಾಮ್ರಾಜ್ಯಶಾಹಿ ಸರಪಳಿಯ ಅತ್ಯಂತ ದುರ್ಬಲ ಕೊಂಡಿಯನ್ನು ತುಂಡರಿಸುವ ಸಾಧ್ಯತೆಯನ್ನು ಲೆನಿನ್ ತಾತ್ವಿಕವಾಗಿ ಮುಂದಿಟ್ಟರು. 20ನೇ ಶತಮಾನದ ಮೊದಲ ಎರಡು ದಶಕಗಳಲ್ಲಿ ಯಾವಾಗ ಮೊದಲನೇ ವಿಶ್ವ ಯುದ್ಧ ಉಲ್ಬಣಗೊಂಡು ಕೊನೆಯ ಹಂತ ತಲುಪಿತ್ತೋ, ಆಗ ರಷ್ಯಾ ಅಂತಹ ದುರ್ಬಲ ಕೊಂಡಿಯಾಗಿತ್ತು. ಇದು ಸಾಮ್ರಾಜ್ಯಶಾಹಿಗಳ ನಡುವಿನ ಸಮರವನ್ನು ವಿಮೋಚನೆಗಾಗಿ ನಾಗರಿಕ ಸಮರವನ್ನಾಗಿ ಪರಿವರ್ತಿಸುವ ಅವಕಾಶವನ್ನು ರಷ್ಯಾದ ಕಾರ್ಮಿಕ ವರ್ಗಕ್ಕೆ ತೆರೆಯಿತು.

ಇವತ್ತಿನ ಜಾಗತಿಕ ಪರಿಸ್ಥಿತಿಯಲ್ಲಿ, ನಾವು ನಮ್ಮ ಪಕ್ಷದ 20ನೇ ಮಹಾಧಿವೇಶನದಲ್ಲಿ ಸೈದ್ಧಾಂತಿಕ ನಿರ್ಣಯದಲ್ಲಿ ವಿಶ್ಲೇಷಣೆ ಮಾಡಿದಂತೆ, ಸಾಮ್ರಾಜ್ಯಶಾಹಿಗಳ ನಡುವಿನ ಶತ್ರುತ್ವವು, ಬಹುಮಟ್ಟಿಗೆ, ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಉದಯದೊಂದಿಗೆ ಕಡಿಮೆಯಾಗಿದೆ, ಮತ್ತು ಅದರ ನಾಯಕತ್ವದಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣ ಮುಂದುವರಿಯುತ್ತಿದೆ. ಜಾಗತೀಕರಣದ ಈ ಪ್ರಸ್ತುತ ಹಂತವು, ಸಾಮ್ರಾಜ್ಯಶಾಹಿ ಘಟ್ಟದ ಒಳಗಡೆಯೇ, ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದಲ್ಲಿ ಇನ್ನೂ ಹೆಚ್ಚಿನ ಬಂಡವಾಳ ಕ್ರೋಢೀಕರಣಕ್ಕೆ ಕಾರಣವಾಗುತ್ತಿದೆ. ಈ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳವು, ಇಂದು, ತನ್ನ ಪರಮಾವಧಿ ಲಾಭದ ಹಿಂದೆ ಓಡುವ ಜಾಡಿನಿಂದಾಗಿ ಕೈಗಾರಿಕಾ ಮತ್ತಿತರ ಸ್ವರೂಪದ ಬಂಡವಾಳದೊಂದಿಗೆ ಹೆಣೆದುಕೊಂಡಿದೆ. ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳವು ಈಗ ಬಂಡವಾಳದ ಕ್ರೋಢೀಕರಣವನ್ನು ಅಪಾರವಾಗಿ ಹೆಚ್ಚಿಸಲು ಮತ್ತು ಇನ್ನೂ ಹೆಚ್ಚಿನ ಪರಮಾವಧಿ ಲಾಭ ಪಡೆಯಲು ಹೊಚ್ಚ ಹೊಸ ದಾಳಿಗಳನ್ನು ಹರಿಬಿಡುವ ಸಮಾನ ಉದ್ದೇಶಗಳ ನಾಯಕತ್ವ ವಹಿಸಿಕೊಂಡಿದೆ.



ಎಲ್ಲಾ ದೇಶದ ಕಾರ್ಮಿಕರು ಮತ್ತು ದಮನಿತರು ಒಂದಾಗಿ

ಬಂಡವಾಳವಾದದ ಇತಿಹಾಸದುದ್ದಕ್ಕೂ, ಕ್ರೋಢೀಕರಣ ಎರಡು ರೀತಿಯಲ್ಲಿ ನಡೆದಿದೆ: ಒಂದು ಎಂದಿನ ಉತ್ಪಾದನಾ ಪ್ರಕ್ರಿಯೆ ಹೊರಗೆಡವುವ ಬಂಡವಾಳ ವಿಸ್ತರಣೆ(ಸ್ವಾಧೀನ 'ಪಡಿಸಿಕೊಳ್ಳುವುದು)ಯ ಸಹಜ ಚಲನೆಯಿಂದ ಹಾಗೂ ಮತ್ತೊಂದು ಬಲವಂತದಿಂದ ಮತ್ತು ನೇರ ಸುಲಿಗೆಯಿಂದ(ಬಲವಂತವಾಗಿ ಕಿತ್ತುಕೊಳ್ಳುವುದು), ಯಾವುದರ ಕ್ರೂರವರ್ತನೆಯನ್ನು ಮಾರ್ಕ್ಸ್, ಆದಿಮ ಬಂಡವಾಳ ಕ್ರೋಢೀಕರಣ ಎಂದಿದ್ದರು. ಆದಿಮ ಕ್ರೋಢೀಕರಣವನ್ನು ಕೆಲವು ಬಾರಿ ಚಾರಿತ್ರಿಕ ಬಗೆ–ಯದು ಎಂದು – ಆದಿಮ ಅಥವಾ ಆಧುನಿಕ – ಎಂದು ತಪ್ಪಾಗಿ ಅರ್ಥೈಸಿದ್ದಿದೆ. ಆದರೆ ಮಾರ್ಕ್ಸ್‌ಗೆ ಮತ್ತು ಅದರಿಂದಾಗಿ ಮಾರ್ಕ್ಸ್‌ವಾದಿಗಳಿಗೆ ಆದಿಮ ಕ್ರೋಢೀಕರಣವು ಒಂದು ವಿಶ್ಲೇಷಣೆಯ ಬಗೆ: ಅಂದರೆ ಚಾರಿತ್ರಿಕವಾಗಿ ಅದು ಬಂಡವಾಳಶಾಹಿಯ ಸಹಜ ಚಲನೆಯ ಜತೆಯೇ ಇದ್ದುಕೊಂಡು ಮುಂದುವರಿಯುತ್ತದೆ. ಆದಿಮ ಕ್ರೋಢೀಕರಣದ ಪ್ರಕ್ರಿಯೆಯು ಈ ಹಿಂದೆ, ನೇರ ವಸಾಹತೀಕರಣವನ್ನು ಒಳಗೊಂಡಂತೆ, ಹಲವಾರು ಸ್ವರೂಪಗಳನ್ನು ಪಡೆದಿದೆ. ಆದಿಮ ಕ್ರೋಢೀಕರಣದ ಆಕ್ರಮಣಶೀಲತೆಯು, ಯಾವುದಾದರೂ ಒಂದು ನಿರ್ದಿಷ್ಟ ಸಮಯದಲ್ಲಿ, ಅಂತಹ ಬಂಡವಾಳಶಾಹಿ ಕ್ರೌರ್ಯದ ಪ್ರಕಟಣೆಯನ್ನು ಸಮ್ಮತಿಸುವ ಅಥವಾ ನಿರ್ಬಂಧಿಸುವ ಅಂತರ್‍ರಾಷ್ಟ್ರೀಯ ವರ್ಗ ಶಕ್ತಿಗಳ ಅಂತರ್ಸಂಬಂಧಗಳಲ್ಲಿನ ಸಾಂಗತ್ಯದ ಮೇಲೆ ನೇರವಾಗಿ ಅವಲಂಬಿಸಿರುತ್ತದೆ. ಸಮಕಾಲೀನ ಸಾಮ್ರಾಜ್ಯಶಾಹಿಯ ಪ್ರಸ್ತುತ ಹಂತದಲ್ಲಿ, ಅಂತಹ ಕ್ರೂರ ಆದಿಮ ಕ್ರೋಢೀಕರಣ ಪ್ರಕ್ರಿಯೆಯು ತೀವ್ರಗೊಳ್ಳುವಿಕೆಯೆಂದರೆ, ಅಭಿವೃದ್ಧಿಶೀಲ ಹಾಗೂ ಅಭಿವೃದ್ಧಿ ಹೊಂದಿದ ಎರಡೂ ದೇಶಗಳಲ್ಲಿನ ಅಪಾರ ಬಹುಸಂಖ್ಯಾತ ಜನಸಮುದಾಯದ ಮೇಲೆ ಹಲ್ಲೆ ಮಾಡುವುದು ಎಂದೇ ಆಗಿದೆ.

ನಿರಂತರ ಲಾಭ ಹೆಚ್ಚಿಸಿಕೊಳ್ಳುವ ಈ ಬಂಡವಾಳದ ಲೂಟಿಕೋರ ಗುಣವು ಜಾಗತಿಕವಾಗಿ ಮತ್ತು ಆಂತರಿಕವಾಗಿ ಪ್ರತಿಯೊಂದು ದೇಶದಲ್ಲೂ ಆರ್ಥಿಕ ಅಸಮಾನತೆಯನ್ನು ತೀಕ್ಷ್ಣವಾಗಿ ಹೆಚ್ಚಿಸುತ್ತಲೇ ಇದೆ ಮತ್ತು ಅದೇ ಸಮಯದಲ್ಲಿ ಜಾಗತಿಕ ದುಡಿಯುವ ಜನರ ಮತ್ತು ಬಡವರ ಮೇಲೆ ತೀವ್ರ ಸಂಕಷ್ಟಗಳನ್ನು ಹೊರಿಸುತ್ತಿದೆ. ಒಂದು ಹಂತದ ಇಡೀ ಬಿಕ್ಕಟ್ಟಿನಿಂದ ಹೊರಬರುವ ಪ್ರತಿಯೊಂದು ಪ್ರಯತ್ನವೂ ಹೊಸ ಹಂತದ ಇನ್ನೂ ಆಳವಾದ ಬಿಕ್ಕಟ್ಟಿನತ್ತ ಕೊಂಡೊಯ್ಯುತ್ತಿದೆ. **ಪುಟ 10 ಕ್ಕೆ**

ಅಕ್ಟೋಬರ್ ಕ್ರಾಂತಿ: ಇವತ್ತಿನ ಪರಿಸ್ಥಿತಿಯಲ್ಲಿ ವರ್ಗ ಹೋರಾಟಗಳನ್ನು ತೀವ್ರಗೊಳಿಸಲು ಒಂದು ದಾರಿದೀಪ..........

ಪುಟ 9 ರಿಂದ



ಫ್ಯಾಸಿಸಂ ವಿರುದ್ಧ ಐಕ್ಯ ಹೋರಾಟ 1941

ಏಕೆಂದರೆ ಬಂಡವಾಳಶಾಹಿ ಬೆಳವಣಿಗೆ ನಿಯಮಗಳ ಸ್ವಭಾವವೇ ಅಂಥದ್ದು.

ಸಾಮ್ರಾಜ್ಯಶಾಹಿಯ ವಿರುದ್ಧದ ಇಂದಿನ ಹೋರಾಟವನ್ನು ಪ್ರತಿಯೊಂದು ದೇಶವೂ ವೈಯಕ್ತಿಕ ಹಾಗೂ ಜಾಗತಿಕ ಎರಡೂ ಮಟ್ಟದಲ್ಲಿ ನಡೆಸಬೇಕಾಗುತ್ತದೆ. ಪ್ರಸ್ತುತ ನವ–ಉದಾರೀಕೃತ ಆರ್ಥಿಕ ವ್ಯವಸ್ಥೆಯ ವಿರುದ್ಧ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳನ್ನು ತೀವ್ರಗೊಳಿಸುವಾಗಲೇ, ಜಾಗತಿಕ ಮಟ್ಟದಲ್ಲಿ ಕಮ್ಯುನಿಸ್ಟ್ ಪಕ್ಷಗಳು ತೀವ್ರವಾದ ಆರ್ಥಿಕ ಶೋಷಣೆಯ ವಿರುದ್ಧದ ಹೋರಾಟಗಳನ್ನು ಜಗತ್ತಿನ ಹಲವಾರು ಕಡೆಗಳಲ್ಲಿನ ಸಾಮ್ರಾಜ್ಯವಾದಿ ಮಿಲಿಟರಿ ಆಕ್ರಮಣಶೀಲತೆ ಮತ್ತು ಮಧ್ಯಪ್ರವೇಶದ ವಿರುದ್ಧದ ಹೋರಾಟಗಳ ಜತೆ ತಮ್ಮ ಹೋರಾಟಗಳನ್ನು ಸಂಯೋಜನೆಗೊಳಿಸಬೇಕು.

ಕ್ರಾಂತಿಯ ಹಂತಗಳು

ಅಕ್ಟೋಬರ್ ಕ್ರಾಂತಿಯು ರಷ್ಯಾದಲ್ಲಿ ಸಾಮ್ರಾಜ್ಯಶಾಹಿಯ ಸರಪಳಿಯನ್ನು ತುಂಡುಮಾಡಿತು. ಆಗ ರಷ್ಯಾ ಬಂಡವಾಳಶಾಹಿ ಬೆಳವಣಿಗೆಯಲ್ಲಿ ತುಲನಾತ್ಮಕವಾಗಿ ಹಿಂದುಳಿದ ದೇಶವಾಗಿತ್ತು. ಮುಂದುವರಿದ ಬಂಡವಾಳಶಾಹಿ ಕೇಂದ್ರಗಳಲ್ಲಿ ಸಮಾಜವಾದದ ಪರಿವರ್ತನೆಯಾಗುತ್ತದೆ ಎಂಬ ಅಲ್ಲಿಯವರೆಗಿನ ಪ್ರತಿಪಾದನೆ, ಜರ್ಮನ್ ಕ್ರಾಂತಿಯ ಸೋಲಿನಿಂದಾಗಿ ಸಂಭವಿಸಲಿಲ್ಲ.

ಮುಂದುವರಿದ ಜರ್ಮನ್ ಕಾರ್ಮಿಕ ವರ್ಗವು ಹಿಂದುಳಿದ ರಷ್ಯನ್ ಕಾರ್ಮಿಕ ವರ್ಗವನ್ನು ಸಮಾಜವಾದಿ ಪರಿವರ್ತನೆಯ ಹಾದಿಯಲ್ಲಿ ಕೊಂಡೊಯ್ಯುತ್ತಾರೆಂಬ ಭರವಸೆ ಲೆನಿನ್ ಅವರಿಗೆ ಇತ್ತು. ಅದರ ಸೋಲಿನಿಂದಾಗಿ, ರಷ್ಯಾದಲ್ಲಿ ಸಮಾಜವಾದದ ಉಳಿಕೆ ನಿಜವಾಗಿಯೂ ಕಷ್ಟಸಾಧ್ಯದ ಸವಾಲಾಗಿ ಪರಿಣಮಿಸಿತು. ಒಂದು ದೇಶದಲ್ಲಿ ಸಮಾಜವಾದ ಎಂಬ ಪರಿಕಲ್ಪನೆಯೊಂದಿಗೆ, ಸಮಾಜವಾದದತ್ತ ಪರಿವರ್ತನೆಯಾಗುವಲ್ಲಿ ಹಿಂದುಳಿದ ಆರ್ಥಿಕತೆಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಕ್ರಾಂತಿಯ ಹಂತಗಳು ಎಂಬ ತತ್ವವನ್ನು ಲೆನಿನ್ ಪ್ರತಿಪಾದಿಸಿದರು. ಕ್ರಾಂತಿಯ ಪ್ರಜಾಪ್ರಭುತ್ವ ಘಟ್ಟ ಮತ್ತು ಸಮಾಜವಾದಿ ಘಟ್ಟಕ್ಕೆ ಅದರ ಪರಿವರ್ತನೆ ಎಂಬ ಅಕ್ಟೋಬರ್ ಕ್ರಾಂತಿಯಿಂದ ಹೊರಹೊಮ್ಮಿದ ಅನುಭವ ಇವತ್ತಿನ ಪರಿಸ್ಥಿತಿಯಲ್ಲೂ ನಮಗೆ ಪ್ರಸ್ತುತವಾಗಿಯೇ ಮುಂದುವರಿಯುತ್ತದೆ.

ಸಿಪಿಐ(ಎಂ) ಪಕ್ಷದ ಕಾರ್ಯಕ್ರಮವು ನಮ್ಮ ಇಂದಿನ ಕ್ರಾಂತಿಕಾರಿ ಹೋರಾಟವನ್ನು ಕ್ರಾಂತಿಯ ಪ್ರಜಾಪ್ರಭುತ್ವ ಹಂತದ ಸಾಕ್ಷಾತ್ಕಾರ ಎಂದು ಗುರುತಿಸುತ್ತದೆ; ಅಂದರೆ ಬ್ರಿಟಿಷ್ ವಸಾಹತುವಾದದಿಂದ ಭಾರತ ಸ್ವಾತಂತ್ರ್ಯ ಪಡೆದ ಕಾಲದಲ್ಲಿನ ಪೂರ್ಣಗೊಳಿಸದ ಕೆಲಸವನ್ನು ಪೂರ್ಣಗೊಳಿಸುವುದು ಎಂದು. ಅವುಗಳು ಯಾವುದೆಂದರೆ: (ಎ) ಸಾಮ್ರಾಜ್ಯಶಾಹಿ ವಿರೋಧಿ ಕೆಲಸವಾದ ಸಾಮ್ರಾಜ್ಯಶಾಹಿ ಶೃಂಖಲೆಗಳಿಂದ ಭಾರತವನ್ನು ವಿಮೋಚನೆಗೊಳಿಸುವುದು (ಬಿ)ಭೂಮಾಲಕ ವಿರೋಧಿ ಕೆಲಸವಾದ ಭಾರತದ ಅಪಾರ ಜನವಿಭಾಗಗಳನ್ನು ಪಾಳೇಗಾರಿ ಭೂಮಾಲಕ ಶೋಷಣೆಯಿಂದ ಮುಕ್ತಗೊಳಿಸುವುದು (ಸಿ) ಮೇಲಿನ ಎರಡು ಕೆಲಸಗಳು ಸಾಕ್ಷಾತ್ಕಾರವಾಗದಂತೆ ತಡೆಯುವ ಏಕಸ್ವಾಮ್ಯ ಬಂಡವಾಳಶಾಹಿಗಳಾದ ಇಂದಿನ ಭಾರತದ ದೊಡ್ಡ ಬಂಡವಾಳಗಾರರ ನೇತೃತ್ವದ ಆಳುವ ವರ್ಗಗಳನ್ನು ಕಿತ್ತು ಹಾಕುವುದು. ಇದು ಏಕಸ್ವಾಮ್ಯ ಬಂಡವಾಳಶಾಹಿ ವಿರೋಧಿ ಕೆಲಸ.

ಸಾಮ್ರಾಜ್ಯಶಾಹಿ ವಿರೋಧಿ, ಭೂಮಾಲಕ ವಿರೋಧಿ ಹಾಗೂ ಏಕಸ್ವಾಮ್ಯ ಬಂಡವಾಳಶಾಹಿ ವಿರೋಧಿ ಎಂಬ ಈ ಮೂರು ಕೆಲಸಗಳನ್ನು ಸಾಧಿಸುವ ಮೂಲಕ ಕಾರ್ಮಿಕ ವರ್ಗದ ನೇತೃತ್ವದಲ್ಲಿನ ವರ್ಗ ಶಕ್ತಿಗಳ ಮೈತ್ರಿಕೂಟ ಸಾಧಿಸಿ ಇಂದಿನ ಬಂಡವಾಳಶಾಹಿ–ಭೂಮಾಲಕ ಆಳುವ ವರ್ಗಗಳನ್ನು ಕಿತ್ತೊಗೆದು ಜನರ ಪ್ರಜಾಪ್ರಭುತ್ವ ರಾಜ್ಯವನ್ನು ಸ್ಥಾಪಿಸುವ ಅಗತ್ಯವಿದೆ.

ಕಾರ್ಮಿಕರ ರೈತರ ಸಖ್ಯತೆ

ಒಂದು ಹಿಂದುಳಿದ ದೇಶದಲ್ಲಿ ಕ್ರಾಂತಿ ಯಶಸ್ವಿಯಾಗಬೇಕಾದರೆ ಆ ಉದ್ದೇಶ ಈಡೇರಿಕೆಗಾಗಿ ಕಾರ್ಮಿಕ–ರೈತ ಸಖ್ಯತೆಯನ್ನು ರೂಪಿಸಿ ಮತ್ತು ಗಟ್ಟಿಗೊಳಿಸುವ ಮೂಲಕ ಮಾತ್ರ ಸಾಧ್ಯ ಎನ್ನುವುದನ್ನು ಅಕ್ಟೋಬರ್ ಕ್ರಾಂತಿ ಎತ್ತಿತೋರಿಸಿದೆ. ಕಮುನರ್ಡ್(ಪ್ಯಾರಿಸ್ ಕಮ್ಯೂನಿನ ಅನುಯಾಯಿ)ಗಳ ವಿರುದ್ಧ ರೈತಾಪಿ ಜನಗಳನ್ನು ಆಳುವ ವರ್ಗಗಳು ಯಶಸ್ವಿಯಾಗಿ ಸಂಘಟಿಸಿದ್ದ ಪ್ಯಾರಿಸ್ ಕಮ್ಯೂನಿನಿಂದ ಪಾಠ ಕಲಿತ ಲೆನಿನ್ ಕೃಷಿ ವಲಯದ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಶೋಷಿತ ವರ್ಗಗಳನ್ನು ಕ್ರಾಂತಿಯ ಮಿತ್ರರನ್ನಾಗಿ ಭದ್ರಪಡಿಸಬೇಕಾದ ಅಗತ್ಯವನ್ನು ಸ್ಪಷ್ಟವಾಗಿ ವಿಶದಪಡಿಸಿದರು. ಕಾರ್ಮಿಕ ವರ್ಗದ ನೇತೃತ್ವದಲ್ಲಿನ ಕಾರ್ಮಿಕ–ರೈತರ ಸಖ್ಯತೆಯು ಸಮಾಜವಾದಿ ಪರಿವರ್ತನೆಗಾಗಿ ಇಂದಿನ ಕ್ರಾಂತಿಕಾರಿಗಳ ಕೈಗೆ ಸಶಕ್ತ ಅಸ್ತ್ರವಾಗಲಿದೆ.

ಕಾರ್ಷಿಕ ಕ್ರಾಂತಿಯನ್ನು ಪ್ರಜಾಪ್ರಭುತ್ವ ಕ್ರಾಂತಿಯ ಅಕ್ಷವೆಂದು ಸಿಪಿಐ(ಎಂ) ಪಕ್ಷದ ಕಾರ್ಯಕ್ರಮವು ವಿವರಿಸಿದೆ. ಪ್ರಜಾಪ್ರಭುತ್ವ ಕ್ರಾಂತಿಯು ಕಾರ್ಮಿಕ ವರ್ಗದ ನೇತೃತ್ವದಲ್ಲಿ ನಡೆಯುತ್ತದೆ. ಈ ತಿಳುವಳಿಕೆಯಲ್ಲಿ ಅಂತರ್ಗತವಾಗಿರುವ ಅಂಶವೆಂದರೆ ಪ್ರಜಾಪ್ರಭುತ್ವ ಕ್ರಾಂತಿಯು ಯಶಸ್ವಿಯಾಗಬೇಕೆಂದರೆ ಕಾರ್ಮಿಕ–ರೈತ ಮೈತ್ರಿ ಸಾಧಿಸಿ ಬೆಳೆಸುವ ಸಂಗತಿಯನ್ನು ಬಹು ಮುಖ್ಯ ಸಾಧನವೆಂದು ಅರಿಯಬೇಕು.

ಈ ಅಂಶವನ್ನು ನಮ್ಮ ಪಕ್ಷದ ಮಹಾಧಿವೇಶನಗಳಲ್ಲಿ ಭಾರತದಲ್ಲಿನ ನಮ್ಮ ಕಾಲದ ನಿರ್ದಿಷ್ಠ ಸನ್ನಿವೇಶದಲ್ಲಿ ಪದೇ ಪದೇ ಒತ್ತಿ ಹೇಳಲಾಗಿದೆ. ನಮ್ಮ ಗುರಿಯಾದ ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಮುನ್ನಡೆಯಲು ಕಾರ್ಮಿಕ–ರೈತ ಸಖ್ಯತೆಯನ್ನು ಸಾಧಿಸುವುದು ಮತ್ತು ಗಟ್ಟಿಗೊಳಿಸುವುದು ಎರಡೂ ಬಹು ಮುಖ್ಯವಾದದ್ದು.


ದೇಶೀಯ ಕ್ರಾಂತಿಕಾರಿ ಹೋರಾಟಗಳನ್ನು ಜಾಗತಿಕ ಸಾಮ್ರಾಜ್ಯವಾದಿ ವಿರೋಧಿ ಹೋರಾಟಗಳೊಂದಿಗೆ ಸಮ್ಮಿಳಿತಗೊಳಿಸುವುದು

ವಸಾಹತುಗಳ ಜನರ ಸ್ವಾತಂತ್ರ್ಯ ಹೋರಾಟಗಳನ್ನು ಜಾಗತಿಕ ಸಾಮ್ರಾಜ್ಯವಾದಿ ವಿರೋಧಿ ವಿಮೋಚನಾ ಹೋರಾಟಗಳೊಂದಿಗೆ ಸಮ್ಮಿಳಿತಗೊಳಿಸಬೇಕಾದ ಅಂಶವನ್ನು ಲೆನಿನ್ ಅವರ 'ರಾಷ್ಟ್ರೀಯ ಮತ್ತು ವಸಾಹತು ಪ್ರಶ್ನೆಗಳು' ಎಂಬ ಪ್ರೌಢ ಪ್ರಬಂಧದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಅಂತರ್‍ರಾಷ್ಟ್ರೀಯ ಕಾರ್ಮಿಕ ವರ್ಗ ಹಾಗೂ ರಾಷ್ಟ್ರೀಯ ವಿಮೋಚನಾ ಹೋರಾಟಗಳು, ಈ ಎರಡರ ಅಂತರ್‍ರಾಷ್ಟ್ರೀಯವಾದವು ಅಕ್ಟೋಬರ್ ಕ್ರಾಂತಿಯ ಕಾಲದಲ್ಲಿಯಷ್ಟೇ ಈಗಲೂ ಇಂದಿನ ಸಂದರ್ಭದಲ್ಲೂ ವಿಭಿನ್ನ ರೀತಿಯಲ್ಲಿ ಪ್ರಸ್ತುತವಾಗಿಯೇ ಇದೆ.

ನಾವೀಗಾಗಲೇ ನೋಡಿರುವಂತೆ, 2008 ರ ಪ್ರಾರಂಭವಾದ ಆರ್ಥಿಕ 'ಕರಗುವಿಕೆ'ಯ ಬಿಕ್ಕಟ್ಟಿನಿಂದ ಹೊರಬರಲು ಜಾಗತಿಕ ಬಂಡವಾಳಶಾಹಿಯು ಹಲವಾರು ವಿಧಾನಗಳನ್ನು ಬಳಸಿದ್ದರೂ ಆ ಎಲ್ಲವೂ ಹೊಸ ಇನ್ನೂ ಆಳವಾದ ಬಿಕ್ಕಟ್ಟಿನಲ್ಲಿ ಪರ್ಯವಸಾನವಾಗಿವೆ. ಇವತ್ತಿನ ಹಂತದ ಈ ಬಿಕ್ಕಟ್ಟಿನಿಂದ ಹೊರಬರಲು ಕಾರ್ಮಿಕ ವರ್ಗ ಮತ್ತು ದುಡಿಯುವ ಜನರ ಮೇಲೆ ಇವತ್ತಿನ ಅವರ ಆದಾಯದ ಮಟ್ಟಗಳನ್ನು ಮತ್ತು ಬದುಕುತ್ತಿರುವ ಸ್ಥಿತಿಯನ್ನೂ ಕಡೆಗಣಿಸಿ ಹಿಂದೆಂದೂ ಕಂಡುಕೇಳರಿಯದ 'ಉಗ್ರ ಮಿತವ್ಯಯದ ಕ್ರಮಗಳನ್ನು' ಹೇರಲಾಗುತ್ತಿದೆ. ಸಂಬಳ, ಕೂಲಿ, ನಿವೃತ್ತಿ ವೇತನ ಹಾಗೂ ಮತ್ತಿತರ ಸಾಮಾಜಿಕ ಭದ್ರತಾ ವೆಚ್ಚಗಳನ್ನು ದೊಡ್ಡ ರೀತಿಯಲ್ಲಿ ಕಡಿತಗೊಳಿಸಲಾಗುತ್ತಿದೆ. ಅಂದರೆ, ಜಾಗತಿಕ ಬಂಡವಾಳಶಾಹಿಯು, ಯಾವಾಗಲೂ ಮಾಡುವಂತೆಯೇ, ತನ್ನ ಬಿಕ್ಕಟ್ಟಿನಿಂದ ಹೊರಬರಲು ಆರ್ಥಿಕ ಶೋಷಣೆಯ ಹೇರುವಿಕೆಯನ್ನು ಹೆಚ್ಚು ತೀವ್ರಗೊಳಿಸಲು ಬಯಸುತ್ತಿದೆ. ಇದನ್ನು ಸಂರಕ್ಷಿಸಿಕೊಳ್ಳುವ ಸಲುವಾಗಿ ಸಾಮ್ರಾಜ್ಯಶಾಹಿಯು ತನ್ನ ಜಾಗತಿಕ ರಾಜಕೀಯ ಒಡೆತನವನ್ನು ಬಲಪಡಿಸಿಕೊಳ್ಳುತ್ತದೆ ಮತ್ತು ತನ್ನ ಆಕ್ರಮಣಕಾರಿ ಪ್ರವೃತ್ತಿಯನ್ನು ತೀವ್ರಗೊಳಿಸುತ್ತದೆ.

ಅನೇಕ ದೇಶಗಳಲ್ಲಿ, ಈ ಹೊಸ ಆರ್ಥಿಕ ಹೊರೆಗಳು ಮತ್ತು ತೀವ್ರವಾಗುತ್ತಿರುವ ಶೋಷಣೆಯ ವಿರುದ್ಧ ಕಾರ್ಮಿಕ ವರ್ಗ ಮತ್ತು ದುಡಿಯುವ ಜನರ ದೊಡ್ಡ ರೀತಿಯ ಪ್ರತಿಭಟನೆಗಳು ನಡೆಯುತ್ತಿವೆ. ಈ ಹೋರಾಟಗಳು, ನಾವೀಗಾಗಲೇ 21ನೇ ಮಹಾಧಿವೇಶನದಲ್ಲಿ ಗಮನಿಸಿದಂತೆ, ಮುಖ್ಯವಾಗಿ ಸ್ವರಕ್ಷಣೆಯ ಸ್ವರೂಪದ್ದಾಗಿವೆ; ಸ್ವರಕ್ಷಣೆಯ ಸ್ವರೂಪ



ವಿಯೆಟ್ನಾಂ ಜೊತೆ ಸೌಹಾರ್ದತೆ 1970

ಅಂದರೆ ತಮ್ಮ ಈಗಿನ ಬದುಕಿನ ಸ್ಥಾನಮಾನಗಳನ್ನು ಕಾಪಾಡಿಕೊಳ್ಳಲು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಇನ್ನೂ ಹೆಚ್ಚಿನ ದಾಳಿಗಳಾಗದಂತೆ ತಡೆಯಲು. ಈ ಹೋರಾಟಗಳನ್ನೇ ಆಧಾರಸ್ಥಂಭಗಳನ್ನಾಗಿಸಿ, ಅದರ ಆಧಾರದಲ್ಲಿ ಬಂಡವಾಳದ ಆಳ್ವಿಕೆಯ ವಿರುದ್ಧವೇ ಭವಿಷ್ಯದ ಹೋರಾಟಗಳನ್ನು ರೂಪಿಸಿ ಬಲಪಡಿಸಿ ಹರಿಬಿಡುವ ಅವಶ್ಯಕತೆ ಇದೆ.

ಬಿಕ್ಕಟ್ಟು ಎಷ್ಟೇ ತೀವ್ರವಾಗಿದ್ದರೂ, ಬಂಡವಾಳಶಾಹಿ ಎಂದಿಗೂ ತಾನೇ ತಾನಾಗಿ ಕುಸಿಯುವುದಿಲ್ಲ. ಶೋಷಣೆಯನ್ನು ತೀವ್ರಗೊಳಿಸುವ ಮೂಲಕ ಮತ್ತು ಸ್ವಲ್ಪ ಪ್ರಮಾಣದ ಉತ್ಪಾದನಾ ಶಕ್ತಿಗಳನ್ನು ನಾಶ ಮಾಡುವ ಮೂಲಕ ಅದು ಸದಾ ತನ್ನ ಬಿಕ್ಕಟ್ಟಿನಿಂದ ಹೊರಬರಲು ಯತ್ನಿಸುತ್ತದೆ. ಆದ್ದರಿಂದಲೇ ಬಂಡವಾಳಶಾಹಿಯನ್ನು ಕಿತ್ತೊಗೆಯಬೇಕಿದೆ, ಅದಕ್ಕೆ ಅಗತ್ಯವಾದ ಮೂಲ ಶಕ್ತಿಯಾದ ಕಾರ್ಮಿಕ ವರ್ಗದ ಶಕ್ತಿಯ ಮೇಲೆ ಅದು ಅವಲಂಬಿತವಾಗಿದೆ. ಕಾರ್ಮಿಕ ವರ್ಗವು ತನ್ನ ಜನಪ್ರಿಯ ಹೋರಾಟಗಳ ಮೂಲಕ ವರ್ಗ ಹೋರಾಟವನ್ನು ತೀವ್ರಗೊಳಿಸಿ ಬಂಡವಾಳಶಾಹಿಯ ಮೇಲೆ ರಾಜಕೀಯ ದಾಳಿಯನ್ನು ಹರಿಬಿಡಬೇಕು. ಈ ಮೂಲ ಶಕ್ತಿಯನ್ನು ಬೆಳೆಸುವುದು ಮತ್ತು ಬಲಪಡಿಸುವುದೇ ಲೆನಿನ್ ವಿವರಿಸಿದಂತೆ 'ಕತೃತ್ವ ಅಂಶ'(ಸಬ್ಜೆಕ್ಟಿವ್ ಫ್ಯಾಕ್ಟರ್). ಅಂದರೆ ಅದನ್ನು ಬಲಪಡಿಸುವುದೇ ಅತ್ಯಗತ್ಯವಾದ ಕರ್ತವ್ಯ. 'ವಸ್ತುನಿಷ್ಠ ಅಂಶ'(ಆಬ್ಜೆಕ್ಟಿವ್ ಫ್ಯಾಕ್ಟರ್)–ಬಿಕ್ಕಟ್ಟಿನ ನಿರ್ದಿಷ್ಟ ಸನ್ನಿವೇಶ–ಕ್ರಾಂತಿಕಾರಿ ಮುನ್ನಡೆಗೆ ಎಷ್ಟೇ ಅನುಕೂಲಕರವಾಗಿರಲಿ, 'ಕತೃತ್ವ ಅಂಶ'ವನ್ನು ಬಲಪಡಿಸದೆ ಬಂಡವಾಳಶಾಹಿಯ ಮೇಲಿನ ಕ್ರಾಂತಿಕಾರಿ ದಾಳಿಯನ್ನಾಗಿ ಪರಿವರ್ತಿಸಲು ಸಾಧ್ಯವಿಲ್ಲ.

ಪ್ರತಿಯೊಂದು ದೇಶದಲ್ಲಿನ ನಿರ್ದಿಷ್ಟ ಪರಿಸ್ಥಿತಿಗಳ ನಿರ್ದಿಷ್ಟ ವಿಶ್ಲೇಷಣೆಯ ಆಧಾರದಲ್ಲಿ, ವರ್ಗ ಹೋರಾಟವನ್ನು ಮೊನಚುಗೊಳಿಸಲು, ವಾಸ್ತವ ಪರಿಸ್ಥಿತಿಗಳ ಸವಾಲುಗಳನ್ನು ಎದುರಿಸಲು, 'ಕತೃತ್ವ ಅಂಶ'ವನ್ನು ಬಲಪಡಿಸುವ ಸಲುವಾಗಿ ಕಾರ್ಮಿಕ ವರ್ಗವು ಹಲವಾರು ಮಧ್ಯಂತರ ಘೋಷಣೆಗಳನ್ನು, ಕ್ರಮಗಳನ್ನು ಮತ್ತು ತಂತ್ರಗಳನ್ನು ಅಳವಡಿಸಿಕೊಳ್ಳಬೇಕು ಮತ್ತು ಅದುವೆ ಕ್ರಾಂತಿಕಾರಿ ಬದಲಾವಣೆಯ ಪ್ರಕ್ರಿಯೆಯನ್ನು ತಮ್ಮ ಆಯಾಯ ದೇಶಗಳಲ್ಲಿ ಮುನ್ನಡೆಸಬೇಕು.

ನಮ್ಮ ಪಕ್ಷದ ಈ ಶತಮಾನೋತ್ಸವ ಆಚರಣೆಯು ಮತ್ತು ನಮ್ಮ ರಾಜಕೀಯ ಸೈದ್ಧಾಂತಿಕ ಚಟುವಟಿಕೆಗಳ ಮುಂದುವರಿಕೆಯು, ನಿರ್ದಿಷ್ಟ ಪರಿಸ್ಥಿತಿಯ ನಿರ್ದಿಷ್ಟ ವಿಶ್ಲೇಷಣೆ ಹಾಗೂ ಭಾರತೀಯ ಸ್ಥಿತಿಯಲ್ಲಿ 'ಕತೃತ್ವ ಅಂಶ'ವನ್ನು ಬಲಪಡಿಸಲು ಅಗತ್ಯವಾದ ತುರ್ತು ಯತ್ನಗಳ ಮೇಲೆ ಆಧಾರವಾಗಿರಬೇಕು. ಸಿಪಿಐ(ಎಂ) ತನ್ನ 20ನೇ ಮಹಾಧಿವೇಶನದ ಸೈದ್ಧಾಂತಿಕ ನಿರ್ಣಯದಡಿಯಲ್ಲಿ 'ಕತೃತ್ವ ಅಂಶ'ವನ್ನು ಬಲಪಡಿಸುವ ಸಲುವಾಗಿ ಯಾವಾವ ಕ್ಷೇತ್ರಗಳಲ್ಲಿ ನಮ್ಮ ಗಮನವನ್ನು ಸೆಳೆಯಬೇಕೆಂಬುದನ್ನು ಗುರುತುಹಚ್ಚಿದೆ. 21ನೇ ಮಹಾಧಿವೇಶನದಲ್ಲಿ, ನಮ್ಮ ಪಕ್ಷದ ಸಂಘಟನೆಯನ್ನು ಪುನಶ್ಚೇತನಗೊಳಿಸಲು ಸಂಘಟನಾ ಪ್ಲೀನಂ ನಡೆಸಲು ನಾವು ನಿರ್ಧರಿಸಿದ್ದೇವೆ. ಸಿಪಿಐ(ಎಂ) ಪಕ್ಷವು ಸಾಮೂಹಿಕ ನಿಲುವಿನ ಕ್ರಾಂತಿಕಾರಿ ರಾಜಕೀಯ ಪಕ್ಷ ಎಂದು ಈ ಪ್ಲೀನಂ ನಿರ್ಧರಿಸಿದೆ. ಭಾರತೀಯ ಜನರೊಂದಿಗಿನ ನಮ್ಮ ಸಂಬಂಧವನ್ನು ಆಳಗೊಳಿಸಬೇಕು ಮತ್ತು ಆ ಪ್ರಕ್ರಿಯೆಯ ಮೂಲಕ ಭಾರತೀಯ ಸ್ಥಿತಿಯಲ್ಲಿ 'ಕತೃತ್ವ ಅಂಶ'ವನ್ನು ಬಲಪಡಿಸಬೇಕು ಎಂದು ಪ್ಲೀನಂ ನಿರ್ದೇಶಿಸಿದೆ.

ಈ ನಿಟ್ಟಿನಲ್ಲಿ ಇಡೀ ವರ್ಷದ ನಮ್ಮ ಅಕ್ಟೋಬರ್ ಕ್ರಾಂತಿ ಶತಮಾನೋತ್ಸವ ಆಚರಣೆಯು ಗಣನೀಯವಾಗಿ ನಮ್ಮ ಪ್ರಯತ್ನಗಳಿಗೆ ಕೊಡುಗೆ ನೀಡಬೇಕು. ●



"ಖಾತಾ ವಿಭಜನೆ" ಮಾಫಿಯಾ!

ತನಿಖಾ ವರದಿ



ಲಿಂಗರಾಜು

ಸದ್ದಿಲ್ಲದೇ, ಯಾರ ವಿರೋಧವೂ ಇಲ್ಲದೆಯೇ ಮಾಫಿಯಾವೊಂದು ಇರುವುದು ಅಸಾಧ್ಯವಾದರೂ ಅಂಥದ್ದೊಂದು ಮಾಫಿಯಾ ಸದ್ಯ ಬೆಂಗಳೂರನ್ನು ಆಳುತ್ತಿದೆ ಎಂದರೆ ಆಶ್ಚರ್ಯ ಆಗಬಹುದು. ಹೌದು ನಿಮಗೆ ಗೊತ್ತಿರಲಿ, ಭೂ ಮಾಫಿಯಾಕ್ಕೆ ಹತ್ತಾರು ಮುಖಗಳಿವೆ. ಕೆಲವು ಮುಖಗಳು ಕಣ್ಣಿಗೆ ಕಾಣುತ್ತವೆ. ಕಣ್ಣಿಗೆ ಕಾಣದ ಮುಖಗಳೂ ಇವೆ. ಆ ರೀತಿ ಕಣ್ಣಿಗೆ ಕಾಣದ ಮುಖವೇ 'ಖಾತಾ ವಿಭಜನೆ' ಮಾಫಿಯಾ.

ಈ ಹಿಂದೆ ಇದು ಇರಲಿಲ್ಲವೆಂದಲ್ಲ, ಇದು ಇತ್ತಾದರೂ ರಿಯಲ್ ಎಸ್ಟೇಟ್ ಬಲ್ಲ ಕೆಲವರಿಗೆ ಮಾತ್ರವೇ ಇದರ ಕರಾಳಮುಖ ಗೊತ್ತಿತ್ತು. ಸಾಮಾನ್ಯರಿಗೆ ಇದು ಅರ್ಥವಾಗುವುದು ತುಸು ಕಷ್ಟವೇ ರಿಯಲ್ ಎಸ್ಟೇಟ್‌ನಲ್ಲಿನ ಜನರ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡು ಹೇಗೆಲ್ಲಾ ಜನರನ್ನು ವಂಚಿಸುತ್ತಾರೆ ಎಂಬುದಕ್ಕೆ ಟ್ರೇಲರ್ ರೂಪದಲ್ಲಿ ಈ ಹಗರಣದ 'ಸಣ್ಣ' ಪ್ರಕರಣವೊಂದು ಸದ್ಯ ಬಿಬಿಎಂಪಿ ಬೊಮ್ಮನಹಳ್ಳಿ ವಲಯದಲ್ಲಿ ಬಯಲಾಗಿದೆ.

ಇತ್ತೀಚೆಗೆ ಬೆಂಗಳೂರಿನ ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಬೇಗೂರು ಉಪ ವಿಭಾಗದಲ್ಲಿ ಅಕ್ರಮವಾಗಿ ಖಾತಾ ವಿಭಜನೆ ಮಾಡಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ನಾಲ್ವರು ಅಧಿಕಾರಿಗಳನ್ನು ಅಮಾನತು ಮಾಡಿದ್ದಾರೆ. ಉಪ ಕಂದಾಯ ಅಧಿಕಾರಿ ಗುಲ್ತಾಜ್ ಫಾತಿಮಾ (ಅಂಜನಾಪುರ), ಸಹಾಯಕ ಕಂದಾಯ ಅಧಿಕಾರಿ ಸೋಮಶೇಖರ್ (ಉತ್ತರಹಳ್ಳಿ), ಕಂದಾಯ ಪರಿವೀಕ್ಷಕರಾದ ನಂಜುಂಡಪ್ಪ (ಬೇಗೂರು) ಮತ್ತು ಕುಮಾರಸ್ವಾಮಿ (ಅರಕೆರೆ) ಅಮಾನತುಗೊಂಡವರು.

ಅಮಾನತು ಶಿಕ್ಷೆ ಯಾಕಾಗಿ?

ಬೇಗೂರು ಉಪ ವಿಭಾಗ ವ್ಯಾಪ್ತಿಯಲ್ಲಿ ಅಕ್ರಮವಾಗಿ ಖಾತಾ ವಿಭಜನೆ ಮಾಡಲಾಗಿದೆ ಎಂದು ಕೆ.ವಿ.ಪಟೇಲ್‌ರಾಜು ಎಂಬುವರು ಬಿಬಿಎಂಪಿ ಆಯುಕ್ತರಿಗೆ ದೂರು ಸಲ್ಲಿಸಿದ್ದರು. ಅದರಂತೆ ಬೊಮ್ಮನಹಳ್ಳಿ ಜಂಟಿ ಆಯುಕ್ತರಿಂದ ವರದಿ ಕೇಳಿದ್ದರು. ವರದಿಯಲ್ಲಿ 9 ಜನ ಅಧಿಕಾರಿಗಳು ಭಾಗಿಯಾಗಿದ್ದಾರೆಂದು ಹೇಳಲಾಗಿತ್ತು. ವಿಚಾರಣೆ ನಡೆಸಿದ ಬಿಬಿಎಂಪಿ ಆಯುಕ್ತರು, ಸುಧಾರಣಾ ವೆಚ್ಚ ಪಾವತಿಸದಿರುವುದು, ಸ್ವಾಧಿನಾನುಭವ ಪತ್ರ ಪಡೆಯದೇ, ಹಾಗೆಯೇ ನಿಯಮಾನುಸಾರ ಭೂಪರಿವರ್ತನೆಯನ್ನೂ ಮಾಡದೇ ಅಕ್ರಮವಾಗಿ ಖಾತಾ ವಿಭಜನೆ ಮಾಡಿರುವುದು ಕಂಡುಬಂದಿದೆ. ಈ ಪ್ರಕರಣದಲ್ಲಿ 6 ಜನ ಅಧಿಕಾರಿಗಳು ನೇರ ಭಾಗಿಯಾಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಅಮಾನತು ಆದೇಶ ಹೊರಡಿಸಿದ್ದಾರೆ. ಆದರೆ ಇದರಲ್ಲಿ ಆ ಸಂದರ್ಭದಲ್ಲಿ ಜಂಟಿ ಆಯುಕ್ತರಾಗಿದ್ದ ಎನ್.ಮುನಿರಾಜು ಸದ್ಯ ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾವಣೆ ಆಗಿದ್ದಾರೆ. ಜತೆಗೆ ಅಂದು ಉಪ ಆಯುಕ್ತರಾಗಿದ್ದ ಎಂ.ಎಚ್. ತಿಪ್ಪೇಸ್ವಾಮಿ ರಾಜರಾಜೇಶ್ವರಿ ನಗರ ವಲಯದ ಜಂಟಿ ಆಯುಕ್ತರಾಗಿ ವರ್ಗವಾಗಿರುವ ಕಾರಣದಿಂದ ಈ ಇಬ್ಬರಿಗೆ ಲಿಖಿತ ಸಮಜಾಯಿಷಿ ನೀಡುವಂತೆ ನೊಟೀಸ್ ನೀಡಲಾಗಿದೆ. ಮದವೇರಿದ ಆನೆ ಕಾಡಲ್ಲಿ ಅಡ್ಡಾದಿಡ್ಡಿ ನುಗ್ಗುವಾಗ ಅದರ ಆರ್ಭಟಕ್ಕೆ ಸಾಯುವುದು ಮೊಲ, ಆಮೆಯಂತಹ ಸಣ್ಣ ಪ್ರಾಣಿಗಳು ಮಾತ್ರ! ಇಲ್ಲಿಯೂ ಕೂಡ ಈ ಹಗರಣದ ಪ್ರಮುಖ ಸೂತ್ರಧಾರಿ ಅಧಿಕಾರಿಗಳಿಗೆ ಕೇವಲ ನೋಟೀಸ್ ಜಾರಿ!

ಯಾವೆಲ್ಲಾ ಪ್ರಕರಣಗಳು?

ಕಮ್ಮನಹಳ್ಳಿಯಲ್ಲಿನ ಸರ್ವೆ ನಂ. 104/2 ಮತ್ತು 105 ನಲ್ಲಿ ಒಟ್ಟು 104 ಪ್ಲಾಟ್‌ಗಳು, ಏಳೇನಹಳ್ಳಿಯ 47 ಫ್ಲಾಟ್‌ಗಳನ್ನು ಖಾತಾ ವಿಭಜನೆ ಮಾಡಿರುವ ಆರೋಪ ಇದೆ. ಇದೇ ಗ್ರಾಮ ವ್ಯಾಪ್ತಿಯಲ್ಲಿ 97289 ಚದರ ಅಡಿ ಜಮೀನನ್ನು ಕೇವಲ ಕ್ರಯಪತ್ರದ ಆಧಾರದ ಮೇಲೆ ಸುಧಾರಣಾ ವೆಚ್ಚವನ್ನೂ ಪಾವತಿಸದೇ ಖಾತಾ ವಿಭಜನೆ ಮಾಡಲಾಗಿದೆ. ಬೆರಟೇನ ಅಗ್ರಹಾರ ಗ್ರಾಮದ 24000 ಚದರ ಅಡಿ ಜಮೀನಿಗೆ ಸುಧಾರಣಾ ವೆಚ್ಚ ಪಾವತಿಸಿಲ್ಲ ಮತ್ತು ಭೂ ಪರಿವರ್ತನೆ ಮಾಡದೇ ಖಾತಾ ವಿಭಜನೆ ಮಾಡಲಾಗಿದೆ. ಚಿಕ್ಕ ತೋಗೂರು ಗ್ರಾಮದ 160 ನಿವೇಶನಗಳ ಖಾತಾ ವಿಭಜನೆ, ಹಾಗು

ನಂಬಲು ಅಸಾಧ್ಯವಾದರೂ ಇದು ಸತ್ಯ. ಬಲ್ಲ ಮೂಲಗಳು ಹೇಳುವಂತೆ 30*40 ನಿವೇಶನದ ಖಾತಾ ಆಗಬೇಕಿದ್ದರೆ ಒಂದೂವರೆ ಲಕ್ಷ ರೂಪಾಯಿ! 1 ಫ್ಲ್ಯಾಟ್ ಗೆ 1 ಲಕ್ಷ ರೂಪಾಯಿ! ಅಲಿಖಿತ ದರ. ಈ ದರದಲ್ಲಿ ಸ್ವಲ್ಪ ವ್ಯತ್ಯಾಸ ಆದರೂ ಬಿಲ್‌ಕುಲ್ ಖಾತಾ ಆಗದು. ಈ ಮೂರು ವಾರ್ಡುಗಳ ಖಾತಾ ವಿಭಜನೆಯಲ್ಲಿ 500 ಕೋಟಿ ವ್ಯವಹಾರ ನಡೆಯುತ್ತದೆ ಎಂದರೆ ಇದರ ಭಯಾನಕ ರೂಪವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿದೆ. ಕಾರಣ ಬಿಬಿಎಂಪಿಯಲ್ಲಿ 198 ವಾರ್ಡುಗಳಿವೆ! ಈ ಹಣ ಮೇಲಿಂದ ಕೆಳಗಿನ ಎಲ್ಲ ಅಧಿಕಾರಿಗಳಿಗೂ ಅವರ ಹುದ್ದೆಯ ದರ್ಜೆ ಆಧಾರದ ಮೇಲೆ ಹಂಚಿಕೆಯಾಗುತ್ತದೆ. ಇಲ್ಲಿಯೂ ಪ್ರೋಟೋಕಾಲ್ ಪಾಲಿಸಲಾಗುತ್ತದೆ!

ಏಳೇನಹಳ್ಳಿ ಗ್ರಾಮದ 21 ನಿವೇಶನಗಳಿಗೆ ಅಕ್ರಮವಾಗಿ ಖಾತಾ ವಿಭಜನೆ ಮಾಡಿರುವುದನ್ನು ಅಮಾನತು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಇವಿಷ್ಟೂ ನಾಲ್ಕು ವಾರ್ಡುಗಳಲ್ಲಿ ಆಗಿರುವ ಪ್ರಕರಣಗಳು. ಇದರ ಜತೆಯಲ್ಲಿ ಏಳು ಪ್ರಕರಣಗಳಲ್ಲಿ ಅಕ್ರಮವಾಗಿ ಖಾತಾ ವಿಭಜನೆ ಆಗಿರುವುದನ್ನು ಈಗಲೇ ಜಾರಿಗೆ ಬರುವಂತೆ ರದ್ದುಪಡಿಸಿದ್ದಾರೆ.

ಮೇಲ್ಕಂಡ ಪ್ರಕರಣಗಳಲ್ಲಿ ಕೆಎಂಸಿ ಕಾಯ್ದೆಯನ್ನು ಉಲ್ಲಂಘಿಸಿ ಕರ್ತವ್ಯಲೋಪ ಎಸಗಿ ಭಾರಿ ಅವ್ಯವಹಾರ ನಡೆಸಿರುವುದು ಕಂಡು ಬಂದಿದೆ. ನಿಯಮ ಉಲ್ಲಂಘಿಸಿ ನಕ್ಷೆ ಅನುಮೋದನೆ ಪಡೆಯದೇ ಹಾಗು ಸುಧಾರಣಾ ವೆಚ್ಚ ಪಾವತಿಸದೇ ಇರುವುದು, ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯದೇ ಮತ್ತು ಭೂ ಪರಿವರ್ತನೆ ಆಗದೆಯೂ ಖಾತಾ ವಿಭಜನೆ ಮಾಡಿರುವುದರಿಂದ ಜವಾಬ್ದಾರಿಯುತ ಅಧಿಕಾರಿಯಾಗಿ 1966ರ ಸರ್ಕಾರಿ ನೌಕರರ ನಡತೆ ನಿಯಮ ಉಲ್ಲಂಘನೆ 3(111) ಅಡಿ ಕರ್ತವ್ಯಲೋಪ ಹಿನ್ನೆಲೆಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಗಳ ಅಡಿಯಲ್ಲಿ ಈ ನಾಲ್ವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಖಾತಾ ವಿಭಜನೆ ಹೇಗೆ?

ಒಂದು ನಿರ್ದಿಷ್ಟ ಮೊತ್ತದ ಜಮೀನಿಗೆ ಕಂದಾಯ ಇಲಾಖೆಯ ಸರ್ವೆ ನಂಬರ್ ಇರುವುದು ತಿಳಿಯದ ವಿಚಾರವೇನಲ್ಲ. (ಉದಾ: ಸರ್ವೆ ನಂ.185-ಮೂರು ಎಕರೆ ಇಪ್ಪತ್ತಾರು ಗುಂಟೆ) ಸದರಿ ಸರ್ವೆ ನಂಬರಿನ ಖಾತಾಯನ್ನು ಆಸ್ತಿ ಖರೀದಿಸಿದ ಮಾಲೀಕರ ಹೆಸರಿಗೆ ಬದಲಾಯಿಸಿ ಕೊಡಬೇಕು. ಹೀಗೆ ಮಾಡಲು ಸದರಿ ಸರ್ವೆ ನಂಬರಿಗೆ / ಹಾಕಿ ಉದಾ: 185/1, ಈ ರೀತಿ ಎಂ.ಆರ್.ಬುಕ್‌ನಲ್ಲಿ ನಮೂದಿಸಲಾಗುತ್ತದೆ. ಈ ಪ್ರಕಾರವಾಗಿಯೇ ಕಾಗದ ಪತ್ರಗಳನ್ನು ಸಿದ್ಧಪಡಿಸಲಾಗುತ್ತದೆ.

ಯಾಕಾಗಿ ಖಾತಾ 'ವಿಭಜನೆ' ಮಾಡಲಾಗುತ್ತದೆ?

2007ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂದು ಮರು ನಾಮಕರಣ ಆದ ಸಂದರ್ಭದಲ್ಲಿ ಬಿಎಂಪಿ ಸುತ್ತಲೂ ಇದ್ದ ಏಳು ನಗರ ಸಭೆಗಳು ಮತ್ತು ಒಂದು ಪಟ್ಟಣ ಪಂಚಾಯತ್‌ನ್ನು ಬಿಬಿಎಂಪಿ ವ್ಯಾಪ್ತಿಗೆ ತರಲಾಯಿತು. ಈ ಪ್ರದೇಶಗಳ ಒಟ್ಟು 111 ಹಳ್ಳಿಗಳು ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡವು. ಈ 111 ಹಳ್ಳಿಗಳಲ್ಲಿ ಕೃಷಿಯೇತರ (ನಿವೇಶನ ಇತ್ಯಾದಿ) ಉದ್ದೇಶಗಳಿಗೆ ಬಳಸಿಕೊಳ್ಳಲಾಗುವ ಜಮೀನುಗಳನ್ನು 2010 ನವೆಂಬರ್ ಒಳಗೆ ಭೂಪರಿವರ್ತನೆ ಮಾಡಿ ಬೆಟರ್‌ಮೆಂಟ್ ಶುಲ್ಕ ಪಾವತಿಸಿ, ಸ್ವಾಧೀನಾನುಭವ ಪತ್ರ ಪಡೆದಲ್ಲಿ ಅಂತಹ ಆಸ್ತಿಗಳಿಗೆ ಎ ಖಾತಾ ನೀಡಲಾಗುವುದು ಎಂದು ನಿಯಮಾವಳಿಗಳನ್ನು ರೂಪಿಸಲಾಯಿತು. 2010 ನವೆಂಬರ್ ನಂತರ ಖಾತಾ ಬದಲಾವಣೆ ಮಾಡಿದ್ದಲ್ಲಿ ಅಂತಹವುಗಳಿಗೆ ಬಿ ಖಾತಾ ನೀಡಲಾಯಿತು. ಅವ್ಯವಹಾರ ಮೂಲ ಇರುವುದೇ ಇಲ್ಲಿ. ಬ್ಯಾಂಕುಗಳು ಸಾಲ ನೀಡುವುದು ಎ ಖಾತಾಗಳಿಗೆ ಮಾತ್ರ. ಬಿ ಮತ್ತು ಇ ಖಾತಾಗಳಿಗೆ ಬ್ಯಾಂಕುಗಳು ಸಾಲ ನೀಡುವುದಿಲ್ಲ. ಇದೇ ಕಾರಣದಿಂದ ಎ ಖಾತಾ ಆಸ್ತಿಗಳಿಗೆ ಮೌಲ್ಯ ಹೆಚ್ಚಿರುತ್ತದೆ. ಬಿ ಮತ್ತು ಇ ಖಾತಾ ಆಸ್ತಿಗಳ ಮೌಲ್ಯ ಕಡಿಮೆ ಇರುತ್ತದೆ. ಇದೇ ಕಾರಣದಿಂದ ಎ ಖಾತಾ ಇರುವ ಸರ್ವೆ ನಂಬರಿಗೆ 184/1, 184/2, 184/3, 184/4...... ಎಂದು ಎಂ.ಆರ್ ಬುಕ್‌ನಲ್ಲಿ ನಮೂದಿಸಿ ಅಕ್ರಮವಾಗಿ 'ಎ' ಖಾತಾಯಾಗಿ ಪರಿವರ್ತಿಸಲಾಗುತ್ತದೆ.

ಹೀಗೆ ನಕಲಿ ಖಾತಾ ವಿಭಜನೆ ಎಂಬ ಈ ಭೂ ಮಾಫಿಯಾ ಸದ್ದಿಲ್ಲದೇ ಬೆಳೆಯುತ್ತಲೇ ಹೋಯಿತು. ಬಿಲ್ಡರ್‌ಗಳು, ಅಪಾರ್ಟ್‌ಮೆಂಟ್ ಮಾಲೀಕರ ಧಾವಂತಕ್ಕೆ ಕೈಜೋಡಿಸಿದವರು ಅಧಿಕಾರಿಗಳು ಮತ್ತು ರಾಜಕಾರಣಿಗಳು. ಈ ಖಾತಾ ವಿಭಜನೆ ಎಂಬ ಮಾಫಿಯಾ ಬಿಜೆಪಿ ಬಸಿರು ಎಂಬುದು ಬೆಂಗಳೂರಿಗರಿಗೆ ತಿಳಿದಿರಬೇಕಾದ ಸತ್ಯ. ಅವರೇನು ಬೆಂಗಳೂರನ್ನು ಸಿಂಗಾಪುರ್ ಮಾಡಲು ಮಾಡಿದ ಕಾನೂನೇನಲ್ಲ, ತಮ್ಮ ಧನದಾಹಕ್ಕೆ ಮತ್ತು ತಮ್ಮ ಅನೈತಿಕ ರಾಜಕಾರಣಕ್ಕೆ ಯಾವುದೇ ಪೂರ್ವ ತಯಾರಿಗಳಿಲ್ಲದೇ, ಅಂದರೆ ಆಸ್ತಿಗಳ ಗುರ್ತಿಸುವಿಕೆ, ಮೂಲಸೌಲಭ್ಯಗಳ ಅಗತ್ಯತೆ, ಅದಕ್ಕೆ ಬೇಕಿರುವ ಬಜೆಟ್, ಸಂಪನ್ಮೂಲ ಸಂಗ್ರಹ, ಸಿಬ್ಬಂದಿ ಅಗತ್ಯತತೆ, ಈ ಯಾವುದನ್ನು ಯೋಚಿಸದೇ ಆತುರಾತುರವಾಗಿ ಕಾನೂನು ಮಾಡಿದ್ದರ ಫಲ ಇದು. ಇವರ ಈ ಕಪಟತನ ಅರಿತೋ-ಅರಿಯದೋ, ಮನೆ-ನಿವೇಶನ ಖರೀದಿಸಿ ಖಾತಾ ಮಾಡಿಸಿಕೊಂಡು ಇದು ತಮ್ಮ ಆಸ್ತಿಯೆಂದು ಬೀಗುತ್ತಿರುವ ಬಹಳ ಜನಕ್ಕೆ ತಮ್ಮ ಖಾತಾ ಅಕ್ರಮದಿಂದ ಕೂಡಿದೆ ಮತ್ತು ಇದು ರದ್ದಾಗಿದೆ ಎಂದು ಬಹಳ ಜನಕ್ಕೆ ಇನ್ನೂ ಗೊತ್ತಾಗಿಲ್ಲ!


ಅವ್ಯವಹಾರದ ಮೊತ್ತ 500 ಕೋಟಿ!


ನಂಬಲು ಅಸಾಧ್ಯವಾದರೂ ಇದು ಸತ್ಯ. ಬಲ್ಲ ಮೂಲಗಳು ಹೇಳುವಂತೆ 30*40 ನಿವೇಶನದ ಖಾತಾ ಆಗಬೇಕಿದ್ದರೆ ಒಂದೂವರೆ ಲಕ್ಷ ರೂಪಾಯಿ! 1 ಫ್ಲ್ಯಾಟ್ ಗೆ 1 ಲಕ್ಷ ರೂಪಾಯಿ! ಅಲಿಖಿತ ದರ. ಈ ದರದಲ್ಲಿ ಸ್ವಲ್ಪ ವ್ಯತ್ಯಾಸ ಆದರೂ ಬಿಲ್‌ಕುಲ್ ಖಾತಾ ಆಗದು. ಈ ಮೂರು ವಾರ್ಡುಗಳ ಖಾತಾ ವಿಭಜನೆಯಲ್ಲಿ 500 ಕೋಟಿ ವ್ಯವಹಾರ ನಡೆಯುತ್ತದೆ ಎಂದರೆ ಇದರ ಭಯಾನಕ ರೂಪವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿದೆ. ಕಾರಣ ಬಿಬಿಎಂಪಿಯಲ್ಲಿ 198 ವಾರ್ಡುಗಳಿವೆ! ಈ ಹಣ ಮೇಲಿಂದ ಕೆಳಗಿನ ಎಲ್ಲ ಅಧಿಕಾರಿಗಳಿಗೂ ಅವರ ಹುದ್ದೆಯ ದರ್ಜೆ ಆಧಾರದ ಮೇಲೆ ಹಂಚಿಕೆಯಾಗುತ್ತದೆ. ಇಲ್ಲಿಯೂ ಪ್ರೋಟೋಕಾಲ್ ಪಾಲಿಸಲಾಗುತ್ತದೆ! ಹೀಗಾಗಿಯೇ ಪಾಪದ ಹಣದಿಂದಲೇ ಸಾಮಾನ್ಯ ಸಹಾಯಕ ಗುಮಾಸ್ತನೊಬ್ಬ ಸಿನಿಮಾ ನಿರ್ಮಾಪಕನೂ ಆಗುತ್ತಾನೆ! ಇನ್ನು ಇದರಲ್ಲಿ ಜನರು ಆರಿಸಿ ಕಳುಹಿಸಿದ ಪ್ರತಿನಿಧಿಗಳಿಗೆ ಸಿಂಹಪಾಲು ಇರುತ್ತದೆ. ಇದು ಬಹಿರಂಗ ಸತ್ಯ. ಏಕೆಂದರೆ ಪಕ್ಷಬೇಧ ಮರೆತು ಇಂಥದ್ದೊಂದು ಕಾನೂನು ಮಾಡಿದ್ದು ಇವರೇ ಅಲ್ಲವೇ!?

ಇರಲಿ, ಮುಂದುವರಿದು ಹೇಳುವುದಾದರೆ ಈ ರೀತಿಯ ನಕಲಿ ಖಾತಾ ವಿಭಜನೆ ಆಗಿದೆ ಎಂದು ಕಂಡುಬಂದ ಪ್ರಕರಣಗಳಲ್ಲಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ಒಂದರಲ್ಲಿ ಸದ್ಯ 571 ಖಾತಾಗಳನ್ನು ಅಧಿಕೃತವಾಗಿ ರದ್ದುಪಡಿಸಲಾಗಿದೆ! ನೆನಪಿರಲಿ ಇಲ್ಲಿ ನಿಜವಾಗಿ ಬಲಿಪಶುಗಳಾದವರು ಈ ರೀತಿ ರದ್ದುಪಡಿಸಲಾದ ಖಾತಾಗಳ ವಾರಸುದಾರರು. ಇವರು ತಮ್ಮ ದುಡ್ಡನ್ನು ಕಳೆದುಕೊಂಡಿದ್ದು ಮಾತ್ರವಲ್ಲ, ಪೈಸೆಗೆ ಪೈಸೆ ಕೂಡಿಸಿ ಜೀವನದ ಬಹುದೊಡ್ಡ ಕನಸು ನನಸಾಯಿತೆಂದು ಸಂಭ್ರಮಿಸಿ ಖರೀದಿಸಿದ ಆಸ್ತಿಯ ಮಾಲೀಕರೂ ಅಲ್ಲ!

ಮತ್ತೂ ಮುಂದುವರಿಯುವುದಾದರೆ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ 5000 ನಕಲಿ ಖಾತಾ ವಿಭಜನೆ ಪ್ರಕರಣಗಳು ಪತ್ತೆಯಾಗಿವೆ ಎಂದು ಹೇಳಲಾಗುತ್ತಿದೆ...! ಗಣಿತದಲ್ಲಿ ವೀಕ್ ಇರುವ ನನ್ನಂತಹವರು ಈ ವ್ಯವಹಾರದ ಒಟ್ಟು ಮೊತ್ತ ಲೆಕ್ಕ ಹಾಕುವುದು ಕಷ್ಟ!

ಲೆಕ್ಕಬಲ್ಲವರು ತಲೆಕೆಡಿಸಿಕೊಳ್ಳಬಹುದು!





ಮಾನವಾಭಿವೃದ್ಧಿ, ಹಸಿವಿನ ಜಾಗತಿಕ ಸೂಚ್ಯಂಕಗಳ ಹೊಡೆತಕ್ಕೆ ಈಗ ವ್ಯವಹಾರ ಸುಗಮತೆಯ 'ಚಾರಿತ್ರಿಕ ನೆಗೆತ'ದ 'ಮುಲಾಮು'

ವಿಶ್ವ ಬ್ಯಾಂಕ್‌ನ 'ಸುಗಮ ವ್ಯವಹಾರ'ದ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕ ಕಳೆದ ವರ್ಷ 190 ದೇಶಗಳಲ್ಲಿ 136 ಇದ್ದದ್ದು ಈ ವರ್ಷ 100ಕ್ಕೆ ಏರಿದೆ ಎಂಬ ಸುದ್ದಿ ಅಚ್ಛೇದಿನ್‌ವಾಲಾಗಳಿಗೆಲ್ಲ ಬಹಳ ಸಂತಸ ತಂದಿದೆ. ಇಂತಹ ಜಾಗತಿಕ ಸೂಚ್ಯಂಕಗಳ ಬಗ್ಗೆ ದಿವ್ಯಮೌನ ತಳೆಯುತ್ತಿರುವ, ಅದರಿಂದಾಗಿ ಮತ್ತು ಈಗ ನೋಟುರದ್ದತಿಯ ನಂತರ ಅಚ್ಛೇದಿನ್ ಬಗ್ಗೆ ಮಾತಾಡದೆ, ನಯಾಭಾರತ್ ಬಗ್ಗೆಯಷ್ಟೇ ಮಾತಾಡುತ್ತಿರುವ ಸ್ವತಃ ಪ್ರಧಾನ ಮಂತ್ರಿಗಳಿಗೂ ಭಾರೀ ಸಂತಸ ತಂದಿದೆ.

ಕೆಲವು ತಿಂಗಳ ಹಿಂದೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕ ಒಂದು ಶ್ರೇಯಾಂಕದಷ್ಟು ಕೆಳಗಿಳಿದಿದೆ (188ದೇಶಗಳಲ್ಲಿ 130ರಿಂದ 131ಕ್ಕೆ) ಎಂಬ ಸುದ್ದಿ ಬಂತು. ಕೆಲವು ದಿನಗಳ ಹಿಂದೆ ಜಾಗತಿಕ ಹಸಿವಿನ ಶ್ರೇಯಾಂಕದಲ್ಲೂ ಭಾರತದ ಸ್ಥಾನ 119 ದೇಶಗಳಲ್ಲಿ 99ರಿಂದ 100ಕ್ಕೆ ಇಳಿಯಿತು ಎಂಬ ಸುದ್ದಿ ಬಂದಿತ್ತು. ಆಗ ಮನದ ಮಾತುಗಳಲ್ಲೂ, ವೇದಿಕೆಗಳ ಮೇಲಿನ ಅಬ್ಬರಗಳಲ್ಲೂ ಈ ಬಗ್ಗೆ ದಿವ್ಯಮೌನ ತಳೆದಿದ್ದ ಪ್ರಧಾನಿಗಳು ಈಗ ವಿಶ್ವಬ್ಯಾಂಕಿನಿಂದ ಬಂದ ಈ 'ಪ್ರಶಂಸೆ'ಯಿಂದ ಪುಳಕಿತರಾಗಿದ್ದಾರೆ. 'ಚಾರಿತ್ರಿಕ ನೆಗೆತ', ಸರ್ವತೋಮುಖ ಮತ್ತು ಬಹುವಲಯ ಸುಧಾರಣಾ ಒತ್ತಿನ ಫಲಿತಾಂಶವಿದು ಎಂದಿದ್ದಾರೆ.

ವ್ಯಾಪಾರ/ವ್ಯವಹಾರದಲ್ಲಿ ಸುಗಮತೆ ಎಂದರೆ ಏನದು? ಭಾರತ ಸರಕಾರದ ಆಡಳಿತ ಈಗ ಬಹಳಷ್ಟು ವ್ಯಾಪಾರ–ಸ್ನೇಹಿಯಾಗಿದೆ, ಮಾರುಕಟ್ಟೆ–ಸ್ನೇಹಿಯಾಗಿದೆ, ವ್ಯಾಪಾರ–ವ್ಯವಹಾರ ನಡೆಸುವುದು ಈಗ ಹೆಚ್ಚು ಲಾಭದಾಯಕವಾಗಿದೆ, ಕಾನೂನುಗಳ, ನಿಯಮಗಳ, ಅಧಿಕಾರಶಾಹಿಯ ಅಡೆ–ತಡೆಗಳು ಬಹಳಷ್ಟು ಕಡಿಮೆಯಾಗಿವೆ ಎಂಬುದನ್ನು ಸೂಚಿಸುವ ಸೂಚ್ಯಂಕ ಇದು ಎನ್ನಲಾಗಿದೆ.

ಈ ಎಲ್ಲ ವಿಷಯಗಳಲ್ಲಿ ನಮ್ಮ ಪ್ರಧಾನಿಗಳ ಮೇಲೆ ಪ್ರಶಂಸೆಯ ಸುರಿಮಳೆ ಸುರಿದಿರುವ ಈ ವಿಶ್ವ ಬ್ಯಾಂಕ್ ವರದಿಯ ತಲೆಬರಹ "ವ್ಯಾಪಾರ–ವ್ಯವಹಾರ ನಡೆಸುವುದು: ಉದ್ಯೋಗ ಸೃಷ್ಟಿಗಾಗಿ ಸುಧಾರಣೆಗಳು"! ಅಂದರೆ ವ್ಯಾಪಾರ–ವ್ಯಹಾರಗಳನ್ನು ನಡೆಸುವುದನ್ನು ಸುಗಮಗೊಳಿಸಿದರೆ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂಬ ನಂಬಿಕೆ. ಆದರೆ ಈ ಸೂಚ್ಯಂಕದ ಆಧಾರವಾದ ಇಡೀ ವಿಶ್ವಬ್ಯಾಂಕ್ ವಿಶ್ಲೇಷಣೆಯಲ್ಲಿ ಉದ್ಯೋಗ ಸೃಷ್ಟಿಯ ಪ್ರಸ್ತಾಪವೇ ಇಲ್ಲ ಎನ್ನುತ್ತಾರೆ ಈ ವರದಿಯನ್ನು ಪರಿಶೀಲಿಸಿರುವ ಪರಿಣಿತರು (ಸುಭೋದ್ ವರ್ಮ, ನ್ಯೂಸ್‌ಕ್ಲಿಕ್.ಇನ್, ನವಂಬರ್ 1).

ಏಕೆಂದರೆ ಸುಧಾರಣೆಗಳಿಗೂ ಮತ್ತು ಉದ್ಯೋಗ ಸೃಷ್ಟಿಗೂ ನೇರ ಸಂಬಂಧವಿದೆ ಎಂಬುದನ್ನು ಭಾರತದ ಅನುಭವವಂತೂ ನಿರಾಕರಿಸುತ್ತಿದೆ. 2001 ರಿಂದ ಇದುವರೆಗೆ ಎರಡು ಯುಪಿಎ ಸರಕಾರಗಳು, ಮತ್ತು ಮೋದಿಯವರದ್ದೂ ಸೇರಿದಂತೆ ಎರಡು ಎನ್‌ಡಿಎ ಸರಕಾರಗಳು ಒಟ್ಟು 37 'ಸುಧಾರಣೆ'ಗಳನ್ನು ತಂದಿವೆ. ಈ ಅವಧಿಯಲ್ಲಿ ಆರ್ಥಿಕದ ಬೆಳವಣಿಗೆ ಸರಾಸರಿ 7%. ಆದರೂ 2001ರಿಂದ 2011ರ ನಡುವೆ ಉದ್ಯೋಗ ಬೆಳವಣಿಗೆಯ ವಾರ್ಷಿಕ ದರ ಕೇವಲ 2%, 2011 ನಂತರವಂತೂ ಕೇವಲ 1%. ಅಚ್ಛೇ ದಿನ್‌ಗಳಲ್ಲಂತೂ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಯ ಅಬ್ಬರ ಹುಸಿಯಾಗಿದೆಯಷ್ಟೇ ಅಲ್ಲ, ಉದ್ಯೋಗ ನಷ್ಟಗಳು ಬಿಜೆಪಿ ಸರಕಾರವನ್ನೂ ಆತಂಕಕ್ಕೀಡು ಮಾಡಿವೆ ಎಂಬುದನ್ನು ಈ ಅಂಕಣದಲ್ಲಿ ಮತ್ತೆ–ಮತ್ತೆ ನೋಡಿದ್ದೇವೆ.

ಈ ಸೂಚ್ಯಂಕಕ್ಕೆ ಸಂಬಂಧಪಟ್ಟಂತೆ ಎರಡು ಅಂಶಗಳನ್ನು ಪರಿಣಿತರು ಗಮನಿಸಿದ್ದಾರೆ: ಮೊದಲನೆಯದಾಗಿ, ಈ ಸೂಚ್ಯಂಕವನ್ನು ಲೆಕ್ಕ ಹಾಕಿದ್ದು ಕೇವಲ ಎರಡು ನಗರಗಳ, ಕೇವಲ 516 ಮಂದಿಯ ಅಭಿಪ್ರಾಯ ಕೇಳಿ.ಈ 516 ಮಂದಿಗೆ ವ್ಯವಹಾರ ನಡೆಸುವ ಬಗ್ಗೆ ಎಲ್ಲವೂ ಗೊತ್ತಿದೆಯೇ, ಗೊತ್ತಿದ್ದರೂ ಎಲ್ಲವನ್ನೂ ಹೇಳಿದ್ದಾರೆಯೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ ಎನ್ನುತ್ತಾರೆ ಅವರು.

ಎರಡನೆಯದಾಗಿ, ಇದು ಜೂನ್2017ರ ವರೆಗಿನ ಮಾಹಿತಿಗಳನ್ನು ಆಧರಿಸಿದೆ ಎಂದಿದ್ದರೂ, ತೆರಿಗೆಗಳನ್ನು ಕುರಿತಂತೆ ಕೇವಲ ಡಿಸೆಂಬರ್2016 ರ ವರೆಗಿನ ಮಾಹಿತಿಯನ್ನು ಮಾತ್ರ ಆಧರಿಸಿದೆ. ಅಂದರೆ ನೋಟು ರದ್ಧತಿ ಮತ್ತು ಜಿಎಸ್‌ಟಿ ತಂದ ಅವಾಂತರಗಳ ಪರಿಣಾಮಗಳನ್ನು ಗಮನಕ್ಕೆ ತಗೊಂಡಿಲ್ಲ. ತಗೊಂಡರೆ ಈ 'ಚಾರಿತ್ರಿಕ ನೆಗೆತ'ದ ಗತಿ ಏನಾಗುತ್ತದೋ ಊಹಿಸಬೇಕಷ್ಟೇ. ಏಕೆಂದರೆ ಜಿಎಸ್‌ಟಿ ಪಾವತಿಗೆ ದಾಖಲು ಮಾಡಿಕೊಂಡವರ ಪೈಕಿ ಕೇವಲ 55% ಮಂದಿಗೆ ತೆರಲು ಸಾಧ್ಯವಾಗಿದೆ ಎಂದು ವರದಿಯಾಗಿದೆ.

ಅಂದರೆ ಪ್ರಧಾನಿಗಳನ್ನು ಪುಳಕಿತರಾಗಿಸಿರುವ ಈ ಸೂಚ್ಯಂಕ ವಾಸ್ತವವಾಗಿ ಜಾಳುಜಾಳಾದ ಆಧಾರದ ಮೇಲೆ ನಿಂತಿದೆ. ಇದು ಕೇವಲ ಎರಡು ಮಹಾನಗರಗಳ ಕೆಲವು ಸೇವಾವಲಯದ ವ್ಯವಹಾರಗಳ ಬಗ್ಗೆ ಮಾತ್ರ ನಿಜವಿರಬಹುದು. ದೇಶದ ನೂರಾರು ನಗರ–ಪಟ್ಟಣಗಳಲ್ಲಿ ಹರಡಿರುವ 4.5 ಕೋಟಿ ಕೃಷಿಯೇತರ ಉದ್ದಿಮೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ, ಅವರ ನೋವು–ಸಂಕಟಗಳನ್ನು ಗಮನಕ್ಕೇ ತಗೊಂಡಿಲ್ಲ. ತಗೊಳ್ಳಬೇಕು ಎಂದನಿಸಿದಂತೆಯೂ ಇಲ್ಲ, ತಗೊಂಡರೆ ವಿಶ್ವ ಬ್ಯಾಂಕ್ ಪ್ರಶಂಸೆಯ ಸುರಿಮಳೆಗರೆಯುವುದಾದರೂ ಹೇಗೆ? ಮತ್ತು ಅಚ್ಛೇ ದಿನ್ ಮಂದಿ ಮಾನವ ಅಭಿವೃದ್ಧಿ ಸೂಚ್ಯಂಕ, ಜಾಗತಿಕ ಹಸಿವಿನ ಸೂಚ್ಯಂಕ ಮತ್ತು ದೇಶದ ಅರ್ಥಿಕದ ಬಗ್ಗೆ ಪ್ರತಿದಿನವೆಂಬಂತೆ ಬರುತ್ತಿರುವ ಕಳವಳಕಾರಿ ಮಾಹಿತಿಗಳನ್ನು ಮರೆಮಾಚುವುದಾದರೂ ಹೇಗೆ?

ಕಗ್ಗೊಲೆ ಆಪಾದಿತರಿಗೆ ಸರಕಾರದ ಹಿರಿಯ ಕಾನೂನು ಅಧಿಕಾರಿಯ ನೆರವು!

ಫರೀದಾಬಾದ್‌ನಲ್ಲಿ ರೈಲಿನಲ್ಲಿ 'ಗೋರಕ್ಷಕರು' ಇರಿದು ಕೊಂದ ಬಾಲಕ ಜುನೈದ್‌ನ ಕೊಲೆಯ ವಿಚಾರಣೆಯಲ್ಲಿ ಹರ್ಯಾಣ ಸರಕಾರದ ಅಡಿಶನಲ್ ಅಡ್ವೊಕೇಟ್ ಜನರಲ್ ಅವರು ಆಪಾದಿತರಿಗೇ ನೆರವಾಗುತ್ತಿದ್ದಾರೆ ಎಂದು ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಶರೇ ಟಿಪ್ಪಣಿ ಮಾಡಿದ್ದು, ಇದು ವೃತ್ತಿ ದುರ್ವರ್ತನೆ ಎನ್ನುತ್ತ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಸರಕಾರ ನಿರ್ವಾಹವಿಲ್ಲದೆ ಆ ವ್ಯಕ್ತಿ ರಾಜೀನಾಮೆ ನೀಡುವಂತೆ ಹೇಳಿದೆ.

ಇದು ಕೇವಲ ಒಬ್ಬ ವ್ಯಕ್ತಿಯ ದುರ್ವರ್ತನೆಯಂತೆ ಕಾಣುತ್ತಿಲ್ಲ. ಏಕೆಂದರೆ ಹರ್ಯಾಣ ಸರಕಾರದಿಂದ ತನಗೆ ನ್ಯಾಯ ಸಿಗುವ ಸಂಭವ ಇಲ್ಲ ಎಂಬ ಸಂದೇಹ ಜುನೈದನ ತಂದೆಗೆ ಬಂದಿದೆ. ಅವರು ಪಂಜಾಬ್ ಮತ್ತು ಹೈಕೋರ್ಟಿನಲ್ಲಿ ಈ ಕೇಸನ್ನು ಹರ್ಯಾಣ ಪೋಲಿಸ್‌ನಿಂದ ಸ್ವತಂತ್ರ ತನಿಖಾಸಂಸ್ಥೆಗೆ ವರ್ಗಾಯಿಸಬೇಕು ಮತ್ತು ತನ್ನ ಕುಟುಂಬ ಹಾಗೂ ಫಿರ್ಯಾದಿ ಸಾಕ್ಷಿಗಳಿಗೆ ಭದ್ರತೆ ನೀಡಬೇಕು ಎಂದು ಅರ್ಜಿ ಹಾಕಿದ್ದಾರೆ ಎಂದು ವರದಿಯಾಗಿದೆ.

ಗೋರಕ್ಷಕರೆನ್ನುವವರು ಬಡಿದು ಸಾಯಿಸಿದ ಪೆಹ್ಲೂ ಖಾನ್‌ರ ಕೊಲೆಗಡುಕರನ್ನು ಬಚಾವ್ ಮಾಡಲು ಇದೇ ಪೊಲೀಸರು ಪ್ರಯತ್ನಿಸುತ್ತಿದ್ದಾರೆ ಎಂಬ ಸುದ್ದಿ ಈ ಹಿಂದೆಯೇ ಮಾಧ್ಯಮಗಳಲ್ಲಿ ಬಂದಿದೆ.

ನೇರ ಫಲಾನುಭವ ವರ್ಗಾವಣೆಯ 'ಕೀರ್ತಿ'ಯ ಸ್ಪರ್ಧೆಯಲ್ಲಿ ಸ್ವತಃ ಪ್ರಧಾನಿಗಳು

ಅಕ್ಟೋಬರ್ 29 ರಂದು ಬೀದರಿನಲ್ಲಿ ಮಾತಾಡುತ್ತ ಪ್ರಧಾನಿಗಳು ತಮ್ಮ ಎನ್‌ಡಿಎ ಸರಕಾರ ವಿವಿಧ ಸರಕಾರೀ ಯೋಜನೆಗಳ ಫಲಾನುಭವಿಗಳಿಗೆ ಹಣವನ್ನು ನೇರವಾಗಿ ವರ್ಗಾವಣೆ ಮಾಡುವುದನ್ನು (ಡಿಬಿಟಿ) ಆರಂಭಿಸಿದೆ ಎಂದು ಹೇಳಿಕೊಂಡಿರುವುದಾಗಿ ವರದಿಯಾಗಿದೆ. ಇದರಿಂದಾಗಿ ಈ ಹಿಂದೆ ಮಧ್ಯವರ್ತಿಗಳ ಪಾಲಾಗುತ್ತಿದ್ದ 57,000 ಕೋಟಿ ರೂ.ಗಳಷ್ಟು ಹಣದ ಸೋರಿಕೆ ನಿಂತಿದೆ ಎಂದು ಬೆನ್ನು ತಟ್ಟಿ–ಕೊಂಡರು. ಈ ಸೋರಿಕೆ ತಡೆ'ಯ ನಿಜ ಏನು ಎಂಬುದನ್ನು ಹಿಂದಿನ ಸಂಚಿಕೆಯೊಂದರಲ್ಲಿ ನೋಡಿದ್ದೇವೆ. ಈ ನೇರ ವರ್ಗಾವಣೆಯ ಕೀರ್ತಿಯ ಕತೆಯೇನು?

ಈ ಡಿಬಿಟಿ ಎಂಬುದು ಜನವರಿ 2013ರಿಂದ ಜಾರಿಗೆ ಬಂದಿದೆ. ಫೆಬ್ರುವರಿ 2013ರ ಬಜೆಟಿನಲ್ಲಿ ಇದನ್ನು ಪ್ರಕಟಿಸಲಾಗಿದೆ ಎಂದು ಸರಕಾರದ ಮಾಹಿತಿಗಳೇ ಹೇಳುತ್ತವೆ. ವಾಸ್ತವವಾಗಿ ಈ ನೇರ ವರ್ಗಾವಣೆಯ ಬಗ್ಗೆಯೇ ಹಲವು ಟೀಕೆಗಳು ಬಂದಿದ್ದು ಇವು ಫಲಾನುಭವಿಗಳ ಸಂಖ್ಯೆಯನ್ನು ಸೀಮಿತಗೊಳಿಸುವ, ಆಮೂಲಕ ಸರಕಾರದ ಸಬ್ಸಿಡಿಗಳಲ್ಲಿ ಉಳಿತಾಯ ಮಾಡುವ ಒಂದು ಪ್ರಯತ್ನ ಎಂದೂ ಹೇಳಲಾಗಿದೆ. ಆದರೂ ಅದನ್ನು ತಂದ ಕೀರ್ತಿಗೆ ಸ್ಪರ್ಧೆ ನಡೆದಿದೆ.

ಇದರಲ್ಲಿ ಈಗ ಹಳೆಯದಾಗಿರುವ ಸಂಗತಿಯೆಂದರೆ 'ಆಧಾರ್' ಈ ಡಿಬಿಟಿಯ ಬೆನ್ನೆಲುಬು. ಗುಜರಾತಿನ ಮುಖ್ಯಮಂತ್ರಿಯಾಗಿ ಈಗಿನ ನಮ್ಮ ಪ್ರಧಾನಿಗಳು ಅದನ್ನು ವಿರೋಧಿಸಿದ್ದರು. ಈಗ ಕೇಂದ್ರ ಮಂತ್ರಿಯಾಗಿರುವ ಕರ್ನಾಟಕದ ಬಿಜೆಪಿ ಮುಖಂಡರಂತೂ 2014ರಲ್ಲಿ ತಾವು ಅಧಿಕಾರಕ್ಕೆ ಬಂದರೆ ಆಧಾರ್ ಅನ್ನು ರದ್ದು ಮಾಡುವುದಾಗಿಯೂ ಸಾರಿದ್ದರು. ಈಗ ಈ ಸರಕಾರದ 'ಆಧಾರ್' ಗೀಳು ಎಲ್ಲರಿಗೂ ತಿಳಿದಿರುವ, ಅಷ್ಟೇ ಅಲ್ಲ ಕಿರಿಕಿರಿ ಉಂಟು ಮಾಡುತ್ತಿರುವ ಸಂಗತಿಯಾಗಿ ಬಿಟ್ಟಿದೆ ತಾನೇ?



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಇನ್ನೊಬ್ಬ ಅಧಿಕಾರಸ್ಥರಿಗೆ 'ಕ್ಲೀನ್‌ಚಿಟ್': ವ್ಯಾಪಂ ಹಗರಣದ ಸಿಬಿಐ ತನಿಖೆಯ ಪ್ರಾಥಮಿಕ ವರದಿ

ಮಧ್ಯಪ್ರದೇಶದ 'ವ್ಯಾವಸಾಯಿಕ್ ಪರೀಕ್ಷಾ ಮಂಡಲ್'(ವ್ಯಾಪಂ) ಎಂಬುದು ವೃತ್ತಿಪರ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಸರಕಾರೀ ನೇಮಕಾತಿಗಳಿಗಾಗಿ ಪರೀಕ್ಷೆ ನಡೆಸುವ ಸರಕಾರೀ ಒಡೆತನದ ಸಂಸ್ಥೆ. 1995ರಿಂದಲೂ ಇಲ್ಲಿ ಲಂಚಗಳನ್ನು ಪಡೆದು ಪರೀಕ್ಷೆಗಳನ್ನು ಪಾಸು ಮಾಡಿಸುವ, ನೇಮಕಾತಿ ಮಾಡಿಸುವ ಹಗರಣಗಳು ನಡೆಯುತ್ತಿದ್ದು, 2009ರಿಂದ 2013ರ ನಡುವೆ ಸುಮಾರು 1000 ಕೋಟಿ ರೂ.ಗಳ ಹಗರಣಗಳು ನಡೆದಿವೆ, 1087 ದೋಷಪೂರ್ಣ ನೇಮಕಾತಿಗಳು ನಡೆದಿವೆ ಎನ್ನಲಾಗಿತ್ತು. 2013ರಲ್ಲಿ ಇದರ ತನಿಖೆಗೆ ವಿಶೇಷ ತನಿಖಾ ಪಡೆ(ಎಸ್‌ಐಟಿ)ಯನ್ನು ನೇಮಿಸಲಾಯಿತು. ಈ ನಡುವೆ ಇದಕ್ಕೆ ಸಂಬಂಧಪಟ್ಟ ಹಲವರರು ವಿದ್ಯಾರ್ಥಿಗಳು, ವೈದ್ಯರು, ಪತ್ರಕರ್ತರು, ನಾಗರಿಕ ಅಧಿಕಾರಿಗಳ ಸಾವು/ 'ಆತ್ಮಹತ್ಯೆ'ಗಳು ಸಂಭವಿಸಿದವು. ಸರಕಾರದ ಪ್ರಕಾರ ಈ ಸಂಖ್ಯೆ 24, ವಾಸ್ತವವಾಗಿ 40ರ ಹತ್ತಿರ ಬಂದಿದೆ ಎನ್ನಲಾಗಿದೆ. ಇವೆಲ್ಲ ನಿಜವಾದ ಹಗರಣಕಾರರ ಸುಳಿವು ಸಿಗದಂತೆ ಮಾಡುವ ಕೊಲೆಗಳು ಎನ್ನಲಾಗಿತ್ತು. 2005 ರಿಂದ ಶಿವರಾಜ್ ಸಿಂಗ್ ಚೌಹಾಣ್ ಅವರೇ ಮುಖ್ಯಮಂತ್ರಿಯಾಗಿದ್ದು 2008ರಿಂದ 2012 ರ ನಡುವೆ ಅವರೇ ವೈದ್ಯಕೀಯ ಶಿಕ್ಷಣದ ಮಂತ್ರಿಗಳೂ ಆಗಿದ್ದರು. ಆದ್ದರಿಂದ ಈ ಹಗರಣದಲ್ಲಿ ಅವರ ನೇರ ಪಾತ್ರ ಇದೆ ಎನ್ನಲಾಗಿತ್ತು.

2015ರಲ್ಲಿ ಈ ಬಗ್ಗೆ ಮತ್ತೆ ಆಪಾದನೆಗಳು ಭುಗಿಲೆದ್ದು ಸುಪ್ರಿಂ ಕೋರ್ಟ್ ಆ ವರ್ಷದ ಜುಲೈನಲ್ಲಿ ತನಿಖೆಯನ್ನು ಸಿಬಿಐಗೆ ಒಪ್ಪಿಸಿತು. ಈಗ ಎರಡೂವರೆ ವರ್ಷಗಳ ನಂತರ ಕೊನೆಗೂ ಸಿಬಿಐ ತನ್ನ ತನಿಖೆಯ ಪ್ರಾಥಮಿಕ ವರದಿಯನ್ನು ಸಲ್ಲಿಸಿದೆ. ಈಗ ಸಾಮಾನ್ಯವಾಗುತ್ತಿರುವಂತೆ ಮುಖ್ಯಮಂತ್ರಿಗಳಿಗೆ 'ಕ್ಲೀನ್ ಚಿಟ್' ಸಿಕ್ಕಿದೆ. ಈ ನಡುವೆ ಸಂಭವಿಸಿದ 24 (ಸರಕಾರೀ ಮಾಹಿತಿ ಪ್ರಕಾರ) ಆತ್ಮಹತ್ಯೆಗಳು/ ಸಾವುಗಳಲ್ಲಿ ಯಾವುದೇ ಪಿತೂರಿ ಅದಕ್ಕೆ ಕಂಡಿಲ್ಲ. ಆದರೆ ಹಗರಣ ನಡೆದಿಲ್ಲ ಎಂದು ಮಾತ್ರ ಅದು ಹೇಳಿಲ್ಲ. ಆದ್ದರಿಂದ 490 ಮಂದಿ ಮೇಲೆ ಚಾರ್ಜ್‌ಶೀಟ್ ಹಾಕಲಾಗಿದೆ.

ಈ ತನಿಖೆಯನ್ನು ಸಿಬಿಐಗೆ ಒಪ್ಪಿಸುವಾಗ ಆಗ ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ನ್ಯಾಯಮೂರ್ತಿ ಹೆಚ್ ಎಲ್ ದತ್ತು "ನಾವು ಸಾವುಗಳ ಸಂಖ್ಯೆ 36ರಿಂದ 37ಕ್ಕೆ ಅಥವ 38ಕ್ಕೆ ಏರಲು ಬಿಡುವುದಿಲ್ಲ. ಇನ್ನು ಯಾರೂ ಸಾಯುವುದಿಲ್ಲ" ಎಂದಿದ್ದರಂತೆ. ಆದರೆ ಸಿಬಿಐ ಒಂದನ್ನು ಬಿಟ್ಟು ಉಳಿದ ಯಾವ ಸಾವುಗಳೂ ಈ ಹಗರಣಕ್ಕೆ ಸಂಬಂಧಪಟ್ಟವಲ್ಲ ಎಂದಿದೆ. ಇನ್ನೂ ಹಲವು ಪ್ರಶ್ನೆಗಳು, ಸಂದೇಹಗಳು ಈ ಪ್ರಾಥಮಿಕ ವರದಿಯ ಮೇಲೆ ಎದ್ದಿವೆ. ಈ ಹಗರಣಕ್ಕೆ ಸಂಬಂಧಪಟ್ಟಂತೆ ಹಲವಾರು ಪ್ರಶ್ನೆಗಳಿಗೆ ಈ ವರದಿಯಲ್ಲಿ ಉತ್ತರ ಸಿಕ್ಕಿಲ್ಲ ಎನ್ನಲಾಗಿದೆ. ನಿಧಾನವಾಗಿ ನಡೆದಿರುವ ಈ ತನಿಖೆಯಲ್ಲಿ ಸತ್ಯ ಸಂಗತಿ ಅಧಿಕಾರಸ್ಥ ಆಪಾದಿತರು ಹಾಕಿರುವ ಮುಸುಕಿನಿಂದ ಇನ್ನೂ ಹೊರಬಂದಿಲ್ಲ, ಮುಖ್ಯಮಂತ್ರಿಗಳಿಗೆ 'ಕ್ಲೀನ್ ಚಿಟ್' ಈ ತನಿಖೆಯ ಅಂತ್ಯದ ಆರಂಭವಿರಬಹುದು ಎಂಬ ಸಂದೇಹ ಹಲವರಿಗೆ.

ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್



ಹಸಿವಿನಿಂದ ಸಾಯೋರು ನಮ್ಮ ಜನಗಳು..... ಏಕೆ?



ದೇಶದ ಜನತೆ ಹಸಿವಿನಿಂದ ಬಳಲುತ್ತಿದ್ದರೂ, ನಮ್ಮ ದೇಶ ಜಾಗತಿಕ ಮಾರುಕಟ್ಟೆಗೆ ಆಹಾರಧಾನ್ಯಗಳನ್ನು ರಫ್ತು ಮಾಡುತ್ತಿದೆ, ಇದಕ್ಕಾಗಿ ಅತ್ಯಲ್ಪ ಇರುವ ತಲಾವಾರು ಆಹಾರಧಾನ್ಯಗಳ ಉತ್ಪನ್ನದಿಂದಲೂ ರಫ್ತಿಗಾಗಿ ಒಂದು ಮಿಗುತೆಯನ್ನು ಹಿಂಡುವುದಕ್ಕಾಗಿ ಜನರ ನೈಜ ಖರೀದಿ ಶಕ್ತಿಯನ್ನು "ಉತ್ತಮ ಅರ್ಥಶಾಸ್ತ್ರ'ದ ಹೆಸರಲ್ಲಿ ಕುಂಠಿತಗೊಳಸಲಾಗುತ್ತಿದೆ. "ಅಭಿವೃದ್ಧಿ" ಬೇಕಾದರೆ ಹಸಿವಿನಿಂದ ಬಳಲಬೇಕು ಎಂದು ಹೇಳಲಾಗುತ್ತಿದೆ. ಇದು ನವ-ಉದಾರವಾದೀ ವ್ಯವಸ್ಥೆಯ ಫಲಿತಾಂಶ ಎನುತ್ತಾರೆ **ಪ್ರೊ. ಪ್ರಭಾತ್ ಪಟ್ನಾಯಕ್**

ಅನುವಾದ: ಭಾರತಿ ಗಾಂವ್ಕರ್

ಅಂತರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆ (ಐಎಫ್‌ಪಿಆರ್‌ಐ)ಯು 2017ರ ಜಾಗತಿಕ ಹಸಿವು ಸೂಚ್ಯಂಕ(ಜಿಹೆಚ್‌ಐ)ವನ್ನು ಪ್ರಕಟಿಸಿದೆ. ಹಸಿವು ಒಂದು ಸಮಸ್ಯೆ ಎಂದು ನಂಬಿರುವ ಐಎಫ್‌ಪಿಆರ್‌ಐ ಮಾಡಿರುವ 119 ದೇಶಗಳ ನಿರ್ದಿಷ್ಟ ಅಧ್ಯಯನದಲ್ಲಿ ಭಾರತವು 100ನೇ ಸ್ಥಾನ ಹೊಂದಿದೆ, ಮತ್ತು ಏಷ್ಯಾದ ಇನ್ನೆರಡು ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ಮಾತ್ರವೇ ಭಾರತಕ್ಕಿಂತ ಕೆಳಗಿನ ಸ್ಥಾನದಲ್ಲಿವೆ ಎಂಬುದು ಮಾಧ್ಯಮಗಳ ಗಮನವನ್ನು ಸ್ವಲ್ಪ ಸೆಳೆದಿದೆ. ಆದರೆ ಐಎಫ್‌ಪಿಆರ್‌ಐ ಬೆಳಕಿಗೆ ತಂದ ಅಂಶಗಳು ಬಹುಕಾಲದಿಂದ ಗೊತ್ತಿರುವ ವಿಷಯವೇ. "ಅಭಿವೃದ್ಧಿ" ಬಗ್ಗೆ ಜುಗುಪ್ಸೆ ಬರಿಸುವಷ್ಟು ಅಧಿಕೃತ ಮಾತುಗಳು ಮತ್ತು ಭಾರತವು "ಆರ್ಥಿಕ ಮಹಾಶಕ್ತಿ" ಆಗಿ ಹೊರ ಹೊಮ್ಮುತ್ತಿದೆ ಎಂದು ಎಷ್ಟೇ ಬೊಬ್ಬಿಡುತ್ತಿದ್ದರೂ ನಮ್ಮದು ಅತ್ಯಂತ ಹಸಿವು ಪೀಡಿತ ದೇಶ, ಜಗತ್ತಿನಲ್ಲಿಯೇ ಅತಿ ಹೆಚ್ಚು ಹಸಿವೆಯ ದೇಶಗಳಲ್ಲಿ ಒಂದು. ಇದು ದೇಸದಲ್ಲಿ ಸಆರ್ವತ್ರಿಕ ಆಕ್ರೋಶವನ್ನು ಎಬ್ಬಿಸಬೇಕಾಗಿತ್ತು. ಆದರೆ ಹಾಗಿಲ್ಲದಿರುವುದು ನಮ್ಮ ಸಮಾಜದಲ್ಲಿ ಬಡವರ ಬಗ್ಗೆ ಯಾವುದೇ ಕಾಳಜಿ ಇಲ್ಲದಿರುವುದರ ಒಂದು ಲಕ್ಷಣ. ಇದು ಜಾತಿವ್ಯವಸ್ಥೆಯ ಭೀಕರ ಪರಂಪರೆ ಆಳವಾಗಿ ಬೇರೂರಿರುವಂತದ್ದು.

ಜಾಗತಿಕ ಹಸಿವು ಸೂಚ್ಯಂಕವನ್ನು ನಾಲ್ಕು ಸೂಚಕಗಳಿಂದ ರಚಿಸಲಾಗುತ್ತದೆ: 1) ಒಟ್ಟೂ ಜನಸಂಖ್ಯೆಲ್ಲಿನ ಅಪೌಷ್ಟಿಕತೆಯ ಪ್ರಮಾಣ.2) ಐದು ವರ್ಷದೊಳಗಿನ ಮಕ್ಕಳಲ್ಲಿ ಉಂಟಾಗುವ "ಕ್ಷೀಣತೆ". 3) ಐದು ವರ್ಷದೊಳಗಿನ ಮಕ್ಕಳಲ್ಲಿ ಉಂಟಾಗುವ " ಕುಂಠಿತ ಬೆಳವಣಿಗೆ 4) ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ.

ಮಕ್ಕಳಲ್ಲಿ ಕಂಡುಬರುವ "ಕ್ಷೀಣತೆ" "ಕುಂಠಿತತೆ" ಮತ್ತು ಮರಣ ಪ್ರಮಾಣ ಪೌಷ್ಟಿಕತೆ ಸಂಬಂಧಿತ ವಾದದ್ದಾದರೂ, ಈ ಸೂಚ್ಯಂಕವು ಪೌಷ್ಟಿಕಾಂಶ ಮತ್ತು ಹಸಿವಿನ ಪರಿಸ್ಥಿತಿಯನ್ನು ಸಾಕಷ್ಟು ಸಮಗ್ರವಾಗಿ ಅಳೆಯಬಹುದಾದ ಮಾಪಕವಾಗಿದೆ. ಈ ಸೂಚ್ಯಂಕ ಹೆಚ್ಚಾದಂತೆ ಅದು ಹೆಚ್ಚೆಚ್ಚು ಹಸಿವಿನ ಪ್ರಮಾಣವನ್ನು ಸೂಚಿಸುವಂತೆ ಇದನ್ನು ರೂಪಿಸಲಾಗಿದೆ.

ಭಾರತದ ಹಸಿವಿನ ಸೂಚ್ಯಂಕವನ್ನು ಗಮನಿಸಿದಾಗ ಕಂಡುಬರುವ ಆಘಾತಕಾರಿ ಸಂಗತಿ ಎಂದರೆ, 2015ರಲ್ಲಿ 29ರಷ್ಟಿದ್ದ ಮೌಲ್ಯವು 2017ರ ವೇಳೆಗೆ 31.4ಕ್ಕೆ ಏರಿದೆ.(2015ರಲ್ಲ ಇದರ ವಿಧಾನವನ್ನು ಪರಿಷ್ಕರಿಸಲಾಯಿತು, ಇದರಿಂದಾಗಿ ಈ ಹಿಂದಿನ ವರ್ಷಗಳಲ್ಲಿ ಇದ್ದ ಅಂಕಿ-ಅಂಶಗಳೊಂದಿಗೆ ಹೋಲಿಕೆ ಸಮಸ್ಯಾತ್ಮಕವಗುತ್ತದೆ) **"ಅಭಿವೃದ್ಧಿ" ಬಗೆಗಿನ ಅಸಂಬದ್ಧ ಕೂಗು ಉತ್ತುಂಗದಲ್ಲಿದ್ದ ಮೋದಿ ಅವಧಿಯಲ್ಲಿಯೇ ಹಸಿವು ಸೂಚ್ಯಂಕ ಅತಿಹೆಚ್ಚು ಏರಿಕೆ ಆಗಿರುವದು ಕಂಡುಬರುತ್ತದೆ. ಹಸಿವಿನ ಸೂಚ್ಯಂಕದಿಂದಾಗಿ, ಭಾರತದ ಶ್ರೇಯಾಂಕ ಜಾಗತಿಕ ಮಟ್ಟದಲ್ಲಿ ಕುಸಿದಿರುವ ಅವಧಿ** ಇದು. 2014ರಲ್ಲಿ 99ನೇ ಶ್ರೇಯಾಂಕ ದಲ್ಲಿದ್ದ ಭಾರತ 2017ರ ವೇಳೆಗೆ 100ಕ್ಕೆ ಇಳಿಯಿತು.

ಭಾರತದ ಹಸಿವಿನ ಪ್ರಮಾಣ "ಕನಿಷ್ಟ ಅಭಿವೃದ್ಧಿಯ ರಾಷ್ಟ್ರಗಳೊಂದಿಗೆ(ವಿಶ್ವ ಸಂಸ್ಥೆ ಗೊತ್ತುಪಡಿಸಿದ 40 ದೇಶಗಳ ಒಂದು ವಿಶೇಷ ಗುಂಪು) ಅಥವಾ ಆಫ್ರಿಕಾದ ಸಹಾರಾ ಕೆಳಗಣ ರಾಷ್ಟ್ರಗಳಲ್ಲಿರುವ ಹಸಿವಿನ ಪ್ರಮಾಣಕ್ಕಿಂತಲೂ ಹೆಚ್ಚಿಲ್ಲದಿದ್ದರೂ ಅವುಗಳೊಮದಿಗೆ ಹೋಲಿಸುವಷ್ಟಿದೆ ಎಂಬುದು ಮೊದಲಿನಿಂದಲೇ ತಿಳಿದ ವಿಷಯ. ಆಹಾರ ಮತ್ತು ಕೃಷಿ ಸಂಸ್ಥೆ(ಎಫ್‌ಎಒ) ಜಗತ್ತಿನ ವಿವಿಧ ದೇಶಗಳಲ್ಲಿ ಉತ್ಪಾದಿಸಲಾಗುವ ಧಾನ್ಯಗಳು ಮತ್ತು ಬಳಕೆಯ ಬಗೆಗಿನ ವ್ಯವಸ್ಥಿತ ಮಾಹಿತಿ ನೀಡುತ್ತದೆ. ಇಲ್ಲಿ ಗಮನಿಸಬೇಕಾದ ಅಂಶ ಎಂದರೆ, ಧಾನ್ಯಗಳು ನೇರವಾಗಿ ಮತ್ತು ಪರೋಕ್ಷವಾಗಿ ಬಳಕೆಯಾಗುತ್ತವೆ. ಪರೋಕ್ಷವಾಗಿ ಎಂದರೆ ಪ್ರಾಣಿ-ಮೂಲದ ಉತ್ಪನ್ನಗಳ ಮೂಲಕ, ಅಂದರೆ ಆ ಪ್ರಾಣಿಗಳಿಗೆ ಮೇವಾಗಿ ಬಳಕೆಯಾಗುವ ಧಾನ್ಯಗಳು. ಅಮೇರಿಕಾದಂತಹ ಶ್ರೀಮಂತ ರಾಷ್ಟ್ರಗಳಲ್ಲಿ ತುಲನಾತ್ಮಕವಾಗಿ ಧಾನ್ಯಗಳು ನೇರ ಬಳಕೆಗಿಂತ, ಪರೋಕ್ಷವಾಗಿ ಬಳಕೆಯಾಗುವದೇ ಹೆಚ್ಚು. ತಲಾವಾರು ಆಹಾರ ಧಾನ್ಯ ಸೇವನೆ ಮತ್ತು ಮೇವುಧಾನ್ಯದ ಬಳಕೆಯನ್ನು ಗಮನಿಸಿ, ಎಫ್‌ಎಒ ನ ಅಂಕಿಅಂಶಗಳ ಆಧಾರವಾಗಿಟ್ಟುಕೊಂಡು ನೋಡಿದರೆ, ಒಂದು ದೇಶದ ಪೌಷ್ಟಿಕಾಂಶ ಮಟ್ಟವನ್ನು ಸರಿ-ಸುಮಾರಾಗಿ ಅಂದಾಜಿನಬಹುದು.

ಈ ಕೆಳಗಿನ ಕೊಷ್ಟಕದಲ್ಲಿ, 2011ರ ಕೆಲ ರಾಷ್ಟ್ರಗಳ ಚಿತ್ರಣ ಸಿಗುವದು.

ಜಾಗತಿಕ ತಲಾ ವಾರ್ಷಿಕ ಧಾನ್ಯ ಬಳಕೆ –ಆಹಾರವಾಗಿ ಮತ್ತು ಮೇವಾಗಿ(ಕೆಜಿಗಳಲ್ಲಿ)–2011

ದೇಶ	ಆಹಾರ	ಮೇವು	ಒಟ್ಟು
ಭಾರತ	152.1	9.0	161.1
ಕನಿಷ್ಟ ಅಭಿವೃದ್ಧಿ ದೇಶಗಳು	148.4	26.9	175.3
ಆಫ್ರಿಕ	150.5	40.5	191.0
ಚೀನಾ	152.5	121.7	274.2
ಯುರೋಪ್	124.9	330.5	455.4
ಅಮೇರಿಕ	105.8	396.3	502.1

ಮೇಲ್ಕಂಡ ಅಂಕಿಅಂಶಗಳು ನೀಖರವಾದ ಸೂಚಕಗಳಲ್ಲ. ಏಕೆಂದರೆ, ಕೃಷಿಯು ಹೆಚ್ಚು ಯಾಂತ್ರೀಕರಣಗೊಂಡ ದೇಶಗಳಲ್ಲಿ ಮೇವು ಧಾನ್ಯಗಳು ಮುಖ್ಯವಾಗಿ ಜನರು ಬಳಸುವ ಪ್ರಾಣಿ ಉತ್ಪನ್ನಗಳನ್ನು ಉತ್ಪಾದಿಸುವುದಕ್ಕಾಗಿಯೇ ಬಳಕೆಯಾಗುತ್ತವೆ. ಆದರೆ ಆದರೆ ಬಡ ರಾಷ್ಟ್ರಗಳಲ್ಲಿ ಈ ಮೇವಿನ ಧಾನ್ಯಗಳ ಒಂದಂಶ ಭಾರ ಎಳೆಯುವ ಜಾನುವಾರುಗಳ ಸಾಕಣೆಗೆ ಬಳಕೆ ಆಗುತ್ತದೆ, ಮತ್ತು ಪೌಷ್ಟಿಕಾಂಶ ಮಟ್ಟವನ್ನು ನಾವು ತಿಳಿಯಬೇಕಾದರೆ ಮೇವಾಗಿ ಬಳಸಿದ ಆ ಭಾಗವನ್ನು ಕಳೆಯಬೇಕಾಗುತ್ತದೆ. ಹೀಗಿರುವಾಗಲೂ, ಆಹಾರ ಧಾನ್ಯಗಳ ನೇರ ಬಳಕೆಯ ದೃಷ್ಟಿಯಿಂದ ನೋಡಿದರೆ, ಭಾರತದ ಅಂಕಿಅಂಶಗಳು ಆಫ್ರಿಕ ಮತ್ತು ಕನಿಷ್ಟ ಅಭಿವೃದ್ಧಿಯ ರಾಷ್ಟ್ರಗಳಿಗೆ ತೀರಾ ಸಮೀಪದಲ್ಲಿದೆ, (ಧಾನ್ಯಗಳನ್ನು ಮೇವಾಗಿ ಬಳಕೆಯಾಗುವ ಪ್ರಮಾಣ ತುಂಬಾ ಕಡಿಮೆ ಇದೆ, ಹೀಗಾಗಿ, ತುಲನಾತ್ಮಕವಾಗಿ ನೊಡುವದಾದಾರೆ, ಭಾರತದ ವಿಷಯದಲ್ಲಿ ಹೆಚ್ಚುವರಿ ಪೌಷ್ಟಿಕಾಂಶದ ಪೂರೈಕೆ ಇಲ್ಲಿಂದ ಆಗುತ್ತಿರುವುದು ಬಹಳ ಕಡಿಮೆಯೇ). ಈ ಕಾರಣದಿಂದಾಗಿ, **ಭಾರತದ ಪೌಷ್ಟಿಕಾಂಶ ಮಟ್ಟವು ಆಫ್ರಿಕ ಮತ್ತು ಕನಿಷ್ಟ ಅಭಿವೃದ್ಧಿಯ ರಾಷ್ಟ್ರಗಳಿಗೆ ತೀರಾ ಸಮೀಪ ಅಥವಾ ಅದಕ್ಕಿಂತ ಕೆಳಗೆ ಇರುವುದರಲ್ಲಿ ಅಚ್ಚರಿ ಏನಿಲ್ಲ.**

ಆದರೆ ಅಚ್ಚರಿ ಇನ್ನೊಂದು ಮೂಲದಿಂದ ಕಾಣಬರುತ್ತದೆ, ಅದೆಂದರೆ, ಆಫ್ರಿಕಾ ದೇಶದ ತಲಾವಾರು ಧಾನ್ಯ ಉತ್ಪಾದನೆ ಭಾರತಕ್ಕಿಂತ ಬಹಳ ಕಡಿಮೆ, 2011 ರಲ್ಲಿ ಭಾರತದ್ದು 192.7 ಕೆಜಿ ಒಟ್ಟು ಉತ್ಪಾದನೆ ಅದರೆ, ಆಫ್ರಿಕಾವು 158.3 ಕೆಜಿ ಉತ್ಪಾದಿಸಿತ್ತು. ಬೇರೆ ಪದಗಳಲ್ಲಿ ಹೇಳುವುದಾದರೆ, ಆಫ್ರಿಕಾ ತನ್ನ ಆಹಾರ ಮತ್ತು ಮೇವು ಅಗತ್ಯತೆಗಳಿಗಿಂತ ಕಡಿಮೆ ತಲಾವಾರು ಧಾನ್ಯಗಳನ್ನು ಉತ್ಪಾದನೆ ಮಾಡುತ್ತಿದೆ, ಅದೇ ವೇಳೆ ಭಾರತ ತಲಾವಾರು ಧಾನ್ಯಗಳ ಉತ್ಪಾದನೆ ಗಮನಾರ್ಹವಾಗಿ ಆಫ್ರಿಕಾಕ್ಕಿಂತ ಹೆಚ್ಚಿದೆ. ಈಗ ಉದ್ಭವಿಸುವ ಪ್ರಶ್ನೆ ಹೀಗಿದೆ: ಆದರೂ ಭಾರತವು ಯಾಕಿಷ್ಟು ಗಂಭೀರ ಪ್ರಮಾಣದ ಅಪೌಷ್ಟಿಕತೆಯ ಮಟ್ಟವನ್ನು ಹೊಂದಿರಬೇಕು?. ಆಫ್ರಿಕಾದ ಮಟ್ಟಿಗೆ, ಧಾನ್ಯಗಳ ಆಮದು ಆಗಬೇಕು, ಹಾಗಾಗಲು ಆಫ್ರಿಕಾ ರಫ್ತು ಮಾಡುವ ವಸ್ತುವಿನ ತುಲನಾತ್ಮಕ ಬೆಲೆಯ ಮೇಲೆ ಅವರ ಸಾಮರ್ಥ್ಯ ನಿರ್ಧರಿತವಾಗುತ್ತದೆ ಮತ್ತು ಆಫ್ರಿಕಾ ರಫ್ತು ಮಾಡಿರುವ ವಸ್ತುವಿನ ತುಲನಾತ್ಮಕ ಬೆಲೆ ಕಡಿಮೆ ಆಗಿರುವುದರಿಂದ ಅದರ ತಲಾವಾರು ಧಾನ್ಯಗಳ ಬಳಕೆ ಕಡಿಮೆ ಆಗುತ್ತದೆ. ಆದರೆ ಧಾನ್ಯಗಳ ಆಮದಿನ ಅಗತ್ಯ ಇಲ್ಲದ ಭಾರತ ಏಕೆ ಕೆಳ ಮಟ್ಟದಲ್ಲಿ ಇರಬೇಕು?

ವಾಸ್ತವವಾಗಿ, ಇತ್ತೀಚಿಗೆ, ಭಾರತವು ನಿಯಮಿತವಾಗಿ ಧಾನ್ಯಗಳ ನಿವ್ವಳ ರಫ್ತುದಾರನಾಗಿದೆ, ಇದು ನವ ಉದಾರವಾದಿ ಅವಧಿಯಲ್ಲಿ ಆದಾಯದ ಕುಸಿತಕ್ಕೆ ಕಾರಣವಾಯಿತು. ಒಟ್ಟಾರೆ ಆಹಾರ ಧಾನ್ಯಗಳನ್ನು ತೆಗೆದುಕೊಂಡರೆ (ಧಾನ್ಯಗಳು ಮತ್ತು ಬೇಳೆಕಾಳುಗಳು), 2011 ಮತ್ತು 2017ರ ನಡುವೆ ಆಗಿರುವ ಒಟ್ಟು ನಿವ್ವಳ ರಫ್ತು ಕ್ರಮಾನುಗತವಾಗಿ 9.6, 19.8, 71.9, 19.9, 12.3, 8.6, ಮತ್ತು 7.7 ಮಿಲಿಯ ಟನ್ನುಗಳು.. ದೇಶಿಯ ಬಳಕೆಗಾಗಿ ಭಾರತ ಸಾಕಷ್ಟು ಬೇಳೆಕಾಳುಗಳನ್ನು ಉತ್ಪಾದಿಸುವದಿಲ್ಲವಾದ್ದರಿಂದ, ಆಮದಿನ ಮೇಲೆ ಅವಲಂಬಿಸಿರುತ್ತೆ, ಇದರ ಅರ್ಥ, ಮೇಲ್ಕಂಡ ಅಂಕಿ ಅಂಶ ಒಂದನ್ನೇ ತೆಗೆದು-ಕೊಂಡರೂ ಧಾನ್ಯಗಳ ರಫ್ತು ಮೇಲಿನ ಅಂಕೆಗಳು ಸೂಚಿಸುವುದಕ್ಕಿಂತಲೂ ಹೆಚ್ಚಿರುತ್ತದೆ. **ಇದರ ಅರ್ಥ, ದೇಶದ ಜನತೆ ಹಸಿವಿನಿಂದ ಬಳಲುತ್ತಿದ್ದರೂ, ನಮ್ಮ ದೇಶ ಜಾಗತಿಕ ಮಾರುಕಟ್ಟೆಗೆ ಧಾನ್ಯಗಳನ್ನು ರಫ್ತು ಮಾಡುತ್ತಿದೆ, ಅವನ್ನು ಮುಂದುವರಿದ ರಾಷ್ಟ್ರಗಳಲ್ಲಿ ಜಾನುವಾರು ಮೇವನ್ನಾಗಿ ಬಳಸುತ್ತಾರೆ.**

ಅತ್ಯಲ್ಪ ಇರುವ ತಲಾವಾರು ಉತ್ಪನ್ನದಿಂದಲೂ ರಫ್ತಿಗಾಗಿ ಒಂದು ಮಿಗುತೆಯನ್ನು ಹಿಂಡುವುದಕ್ಕಾಗಿ ಜನರ ನೈಜ ಕೊಳ್ಳುವ ಶಕ್ತಿಯನ್ನು ಕುಂಠಿತಗೊಳಿಸಲಾಗುತ್ತಿದೆ. ಇದು ಮೂರು ಸಂಭವನೀಯ ವಿಧಾನಗಳಲ್ಲಿ ನಡೆಯುತ್ತದೆ: ಬಹಿರಂಗ ಹಣದುಬ್ಬರ, ಸೂಚ್ಯ ಹಣದುಬ್ಬರ(ಇಲ್ಲಿ ಯಾವುದೇ ಬಹಿರಂಗ ಹಣದುಬ್ಬರವಿಲ್ಲದಿದ್ದರೂ ಬಳಕೆದಾರ ಹೆಚ್ಚಿನ ಬೆಲೆ ತೆರುತ್ತಾನೆ-ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ "ಗುರಿ' ನಿರ್ದೇಶನ ಇದ-ಕ್ಕೊಂದು ಪಕ್ಕಾ ಉದಾಹರಣೆ) ಮತ್ತು ಹಣ ಖರೀದಿ ಶಕ್ತಿಯನ್ನು ನೇರವಾಗಿ ಹಿಂಡುವುದು. ಕಳೆದ 6 ವರ್ಷಗಳಲ್ಲಿ ಅಂದರೆ 2010-11 ಮತ್ತು 2016-17ರಿಂದ, ತುಲನಾತ್ಮಕವಾಗಿ ಧಾನ್ಯಗಳ ಸಗಟು ಬೆಲೆಗಳ ಏರಿಕೆಯ ದರದಲ್ಲಿ ಇಳಿಕೆ ಇದೆ, ವಾರ್ಷಿಕ 5% ಕಿಂತ ತುಸು ಕಡಿಮೆ ಇದೆ, ಅಂದರೆ ಆಂತರಿಕ ಬೇಡಿಕೆಯನ್ನು ಕಡಿಮೆ ಮಟ್ಟದಲ್ಲಿ ಇಡಲು ಜನರ ಕೊಂಡುಕೊಳ್ಳುವ ಶಕ್ತಿಯನ್ನು ಬಹಿರಂಗವಲ್ಲದ ಹಣದುಬ್ಬರದ ಮೂಲಕ ಹಿಂಡಲಾಗುತ್ತಿದೆ.

ಜನರ ಕೊಂಡುಕೊಳ್ಳುವ ಶಕ್ತಿಯನ್ನು ಹಿಂಡುವ ಸಲುವಾಗಿಯೇ ಒಂದಿಡೀ ಕ್ರಮಗಳ ಭರ್ಜರಿ ಕವಚವನ್ನೇ ರೂಪಿಸಲಾಗಿದೆ. ಅದನ್ನು "ಉತ್ತಮ ಅರ್ಥಶಾಸ್ತ್ರ" ಎಂದು ಹೇಳಲಾಗುತ್ತಿದೆ. "ಹಣಕಾಸಿನ ಕೊರತೆಯನ್ನು ಅಂಕೆಯೊಳಗೆ ಇಡಲು ಸರ್ಕಾರದ ವೆಚ್ಚವನ್ನು ಕಡಿತಗೊಳಿಸುವದು, 'ನಿಗದಿತ ದರದೊಳಗೇ ಹಣದುಬ್ಬರ ಇರುವಂತೆ ಮಾಡಲು' ಬಡ್ಡಿದರ ಹೆಚ್ಚಾಗಿರುವಂತೆ ನೋಡಿಕೊಳ್ಳುವದು, ಇವೆಲ್ಲ ಬೇಡಿಕೆಯನ್ನು ಕುಂಠಿತಗೊಳಿಸುವ ಕ್ರಮಗಳಾಗಿದ್ದು, ಇದರ ಪರಿಣಾಮವೆಂದರೆ, ಜನರ ಕೊಳ್ಳುವ ಶಕ್ತಿಯನ್ನು ನೇರವಾಗಿಯೋ ಪರೋಕ್ಷವಾಗಿಯೋ ಅವರಿಂದ ತೆಗೆದು ಹಾಕಿ ಹಸಿವಿನಲ್ಲಿಡುವುದು.

ಇದರ ಅರ್ಥ ಬಹಿರಂಗ ಹಣದುಬ್ಬರ ಉಂಟಾಗಲು ಅವಕಾಶ ನೀಡಬೇಕು ಎಂದಲ್ಲ, ಏಕೆಂದರೆ ಇದರ ಹೊರೆಯೂ ಸಹ, ಜನರ ಹಣ ಖರೀದಿ ಶಕ್ತಿ ಕುಂಠಿತಗೊಳಿಸುವ ಕ್ರಮಗಳ ಮೂಲಕ ಅದೇ ಜನರ ಮೇಲೆ ಬೀಳುತ್ತದೆ. ಆದರೆ ನವ ಉದಾರವಾದಿ ವ್ಯವಸ್ಥೆಯಲ್ಲಿ ಸರಕಾರವು, ಆದಾಯ ಸಂಕುಚನ ಮತ್ತು ಹಣದುಬ್ಬರ ಮಾತ್ರವೇ ಒಂದು ದೇಶಕ್ಕೆ ಲಭ್ಯವಿರುವ ಆಯ್ಕೆ ಎಂಬಂತೆ ನಟಿಸುತ್ತದೆ: ದುಡಿಯುವ ಜನರ ಕೈಯ್ಯಲ್ಲಿ ಸಾಕಷ್ಟು ಖರೀದಿ ಶಕ್ತಿ ಉಳಿಯುವಂತೆ ಖಾತ್ರಿಪಡಿಸಲು ಶ್ರೀಮಂತರಿಗೆ ತೆರಿಗೆ ವಿಧಿಸುವ ದಾರಿ ಆಯ್ದುಕೊಳ್ಳುವಂತಿಲ್ಲ, ಏಕೆಂದರೆ ಅದು 'ಅಭಿವೃದ್ಧಿ'ಗೆ ಬಾಧಕ! ಆದ್ದರಿಂದ ಈ "ಅಭಿವೃದ್ಧಿ "ಯ ಹೆಸರಿನಲ್ಲೇ ಜನ ಇಂದು ಹಸಿವಿನಿಂದ ಬಳಲಬೇಕು!

ಇದು ಇಷ್ಟೇ ಅಲ್ಲ, ಇಂತಹ "ಅಭಿವೃದ್ಧಿ" ಯನ್ನು ಕೊಂಡಾಡುವ ,ಅರ್ಥಶಾಸ್ತ್ರಜ್ಞರ ದೊಡ್ಡ ಹಿಂಡೊಂದು ಈ "ಅಭಿವೃದ್ಧಿ" ಎಲ್ಲರಿಗೂ ಪ್ರಯೋಜನಕಾರಿ ಎಂದು ಹೇಳಲಾರಂಭಿಸಿದೆ. ಅಂಕಿಅಂಶಗಳು ಜನರಿಗೆ ತಿನ್ನಲು ಸಾಕಷ್ಟು ಸಿಗುತ್ತಿಲ್ಲ ಎಂದು ತೋರಿಸುತ್ತಿದ್ದರೆ, ಅವರು "ಅಭಿವೃದ್ಧಿ"ಯಿಂದ ಎಷ್ಟು ಪ್ರಯೋಜನ ಪಡೆದಿದ್ದಾರೆಂದರೆ, ಅವರಿಗೆ ಈಗ ಧಾನ್ಯಗಳನ್ನು ಬಳಸುವ ಆಸಕ್ತಿ ಇಲ್ಲ! ಬದಲಾಗಿ ಅವರಿಗೆ ಈಗ ಸೆಲ್ ಫೋನ್ ಗಳಂತಹ ಉತ್ತಮ ವಸ್ತುಗಳನ್ನು ಖರೀದಿಸಲು ಅಥವ ಮಕ್ಕಳಿಗೆ ಶಿಕ್ಷಣದಂತಹ ಸೇವೆಗಳನ್ನು ಬಳಸುವುದರಲ್ಲೇ ಹೆಚ್ಚು ಆಸಕ್ತಿ ಎನ್ನುತ್ತಾರೆ.

ಜನರು ಮಕ್ಕಳಿಗೆ ಶಿಕ್ಷಣ ಮತ್ತು ಸೆಲ್ ಫೋನ್ ಗಳಂತಹ ಉತ್ತಮ ವಸ್ತುಗಳನ್ನು ಖರೀದಿಸುತ್ತಿದ್ದಾರೆ ಎಂಬುದರ ಬಗ್ಗೆ ಸಂಶಯವಿಲ್ಲ (ಅದು ಒಳ್ಳೆಯದೇ), ಆದರೆ ಇದರ ಅರ್ಥ ಅವರ ಬಳಿ ತಿನ್ನಲು ಸಾಕಷ್ಟು ಆಹಾರ ಇದೆಯೆಂದಲ್ಲ, ಬದಲಾಗಿ ನವ ಉದಾರವಾದಿ ಆಳ್ವಿಕೆಯು ಅವರ ಕೈಗಳಲ್ಲಿ ಉಳಿಸಿರುವ ಸೀಮಿತ ಖರೀದಿ ಶಕ್ತಿಯೊಳಗೆ ತಮ್ಮ ಆಹಾರ ಬಳಕೆಯನ್ನು ಮಿತಗೊಳಿಸುವ ಮೂಲಕ ಅವನ್ನು ಖರೀದಿಸುತ್ತಿದ್ದಾರೆ.

ಐಎಫ್‌ಪಿಆರ್‌ಐನ 'ಹಸಿವಿನ ಸೂಚ್ಯಂಕ' ಇಂತಹ ಅಪೌಷ್ಟಿಕತೆಯನ್ನು ಜನರ ಜೀವನ ಮಟ್ಟದ ಸುಧಾರಣೆ ಎಂದೇ ಬಿಂಬಿಸುವ ಕಣ್ಣೋಟಕ್ಕೆ ಬಲಿ ಬಿದ್ದಿಲ್ಲ ಎಂಬುದು ಗೌರವಾರ್ಹ ಸಂಗತಿ. ಅದು ಕೊಡಲಿಯನ್ನು ಕೊಡಲಿ ಎಂದೇ ಹೇಳುವ ದಿಟ್ಟತನ ಮತ್ತು ಪ್ರಾಮಾಣಿಕತೆಯನ್ನು ತೋರಿದೆ.

ಭಾರತದಲ್ಲಿ ದುಡಿಯುವ ಜನರಲ್ಲಿ ಧಾನ್ಯಸೇವನೆಯ ಕೊರತೆ ಹೆಚ್ಚಾಗಿರುವುದು, ನವ ಉದಾರವಾದಿ ಆರ್ಥಿಕ ನೀತಿಯ ಪರಿಣಾಮವಾಗಿಯೇ. ಸ್ವಾತಂತ್ರ್ಯಾನಂತರ ಮತ್ತು ನವ ಉದಾರವಾದಿ ಆಳ್ವಿಕೆಗೆ ಮೊದಲು ತಲಾವಾರು ಅಹಾರ ಧಾನ್ಯಗಳ ಬಳಕೆಯಲ್ಲಿ ಏರಿಕೆ ಇತ್ತು, ನವ ಉದಾರವಾದಿ ಅವಧಿಯಲ್ಲಿ ಅದು ವ್ಯತಿರಿಕ್ತಗೊಂಡಿತು.

ಆಫ್ರಿಕಾದ ಬಗ್ಗೆಯೂ ಇದೇ ತೀರ್ಮಾಣಕ್ಕೆ ಬರಬಹುದು. ನವ ಉದಾರವಾದಿ ಅವಧಿಯಲ್ಲಿ, ವ್ಯತ್ಯಾಸವೆಮದರೆ ಅದು ಆಹಾರ ಧಾನ್ಯಗಳ ರಫ್ತಿನ ಬದಲಾಗಿ ಹಲವು ಆಹಾರೇತರ ವಾಣಿಜ್ಯ ಬೆಳೆಗಳನ್ನು ರಫ್ತು ಮಾಡಬೇಕಾಗಿ ಬಂದಿದೆ. ಇದಕ್ಕಾಗಿ ಆಹಾರ ಧಾನ್ಯಗಳನ್ನು ಬೆಳೆಯುವ ಭೂಮಿಯನ್ನು ಆಹಾರೇತರ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಭೂಮಿಯನ್ನಾಗಿ ಮಾಡಲಾಯಿತು. ಆಫ್ರಿಕಾದಲ್ಲಿ ಜನಗಳಿಗೆ ಎದುರಾಗಿರುವ ಆಹಾರ ವಂಚನೆಗೆ ಇಂತಹ ಬೆಳೆಗಳ ಹಾಗೂ ಆಹಾರ ಧಾನ್ಯಗಳ ತುಲನಾತ್ಮಕ ಬೆಲೆಗಳೂ ಒಂದು ಪಾತ್ರ ವಹಿಸಿರಬಹುದು. ಆದರೆ ಅಲ್ಲಿಯೂ ಸಹ ಜನಗಳ ಖರೀದಿ ಶಕ್ತಿಯನ್ನು ಹಿಂಡುವ ವಿದ್ಯಮಾನ ಕೆಲಸ ಮಾಡುತ್ತಿದೆ.

ನಾವೀಗ ಆತಂಕ ಪಡಬೇಕಾಗಿರುವುದು ಹಸಿವಿನ ಸೂಚ್ಯಂಕ ಪಟ್ಟಿಯಲ್ಲಿ ಭಾರತದ ಶ್ರೇಯಾಂಕದ ಬಗೆಗಿಂತ ಹೆಚ್ಚಾಗಿ ದೇಶದ ಪೌಷ್ಟಿಕತೆಯ ಮಟ್ಟ ಎಷ್ಟೊಂದು ಹೀನವಾಗಿದೆ ಎಂಬ ಬಗ್ಗೆ. ಮತ್ತು ಅದು ದಿನೇದಿನೇ ಇನ್ನಷ್ಟು ಹೀನ ಮಟ್ಟಕ್ಕೆ ಇಳಿಯುತ್ತಿದೆ ಎಂಬ ಸಂಗತಿ ನವ ಉದಾರವಾದದ ಕೊಡುಗೆ.



ಉತ್ತರಪ್ರದೇಶ: ಮತ್ತೊಂದು ಹುಸಿಯಾದ ಚುನಾವಣಾ ಆಶ್ವಾಸನೆ

ವಿಧಾನಭವನ ಮತ್ತು ಬಿಜೆಪಿ ಕಚೇರಿ ಮುಂದೆ ಕಬ್ಬು ಸುಟ್ಟು ಸಿಟ್ಟಿಗೆದ್ದ ರೈತರ ಪ್ರತಿಭಟನೆ


ಬಿಜೆಪಿ ವಿಧಾನಸಭಾ ಚುನಾವಣೆಯ ಪ್ರಚಾರದಲ್ಲಿ ಕಬ್ಬಿಗೆ ಕ್ವಿಂಟಾಲಿಗೆ 450 ರೂ. ನಿಗದಿ ಮಾಡುವುದಾಗಿ ಆಶ್ವಾಸನೆ ನೀಡಿತ್ತು. ಈ ಬಗ್ಗೆ ಇದುವರೆಗೆ ಈ ಮೂರು ವರ್ಷಗಳ ಅದರ ಮುಖಂಡರ ಟ್ರೇಡ್‌ಮಾರ್ಕ್ ಮೌನದ ನಂತರ ಈಗ 305 ರೂ. ಇದ್ದ ಬೆಲೆಯನ್ನು 315ರೂ.ಗೆ ಹೆಚ್ಚಿಸುವ ಪ್ರಕಟಣೆ ಮಾಡಿದೆ. ಇದು ತಮಗೆ ಬಗೆದಿರುವ ವಿಶ್ವಾಸಘಾತ ಎಂದು ನೂರಾರು ಕಬ್ಬು ಬೆಳೆಗಾರರು ಅಕ್ಟೋಬರ್ 28 ರಂದು ರಾಜ್ಯ ವಿಧಾನ ಸಭೆಯಿರುವ ಭವನದ ಮುಂದೆ ತಮ್ಮ ಕಬ್ಬು ಬೆಳೆಯನ್ನು ಸುಟ್ಟು ಸರಕಾರದ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ವಿಧಾನಭವನದ ಮುಂದೆ ಪ್ರತಿಭಟನೆಯ ನಂತರ ಅವರು ಬಿಜೆಪಿ ಮುಖ್ಯ ಕಚೇರಿಯ ಮುಂದೆಯೂ ಇದೇ ರೀತಿಯ ಪ್ರತಿಭಟನೆ ನಡೆಸಿ ಕಲೆಕ್ಟರ್ ಕಚೇ-ರಿಯತ್ತ ನಡೆದರು.

ಒಂದು ನಿರ್ದಿಷ್ಟ ಸಮಯ ಚೌಕಟ್ಟಿನಲ್ಲಿ ಚುನಾವಣಾ ಆಶ್ವಾಸನೆಯನ್ನು ಈಡೇರಿಸದಿದ್ದರೆ ರಾಜ್ಯಾದ್ಯಂತ ಚಳುವಳಿ ನಡೆಸುವುದಾಗಿ ಅವರು ಯೋಗಿ ಸರಕಾರವನ್ನು ಎಚ್ಚರಿಸಿದ್ದಾರೆ.

ಇನ್ನೊಂದೆಡೆಯಲ್ಲಿ ಸಕ್ಕರೆ ಕಾರ್ಖಾನೆ ಮಾಲಿಕರು ಯೋಗಿ ಸರಕಾರದ ಈ ಪ್ರಕಟಣೆಯನ್ನು ತರ್ಕಬದ್ಧ ಎಂದು ಸ್ವಾಗತಿಸಿದ್ದಾರೆ, ಈ ಮೂಲಕ ಬಿಜೆಪಿ ನಿಜವಾಗಿ ಯಾರ ಪಕ್ಷ ಎಂಬ ಪ್ರಶ್ನೆಯನ್ನೂ ಎತ್ತಿದ್ದಾರೆ

ಜಮ್ಮು -ಕಾಶ್ಮೀರದ ಸ್ವಾಯತ್ತತೆಯ ಪ್ರಶ್ನೆಯನ್ನು ನಿರಾಕರಿಸಿ ಅರ್ಥಪೂರ್ಣ ಸಂವಾದ ಸಾಧ್ಯವಿಲ್ಲ-ತರಿಗಾಮಿ



ಇತ್ತೀಚೆಗೆ ಕಾಶ್ಮೀರ ಪ್ರಶ್ನೆ ಕುರಿತು ಪರಿಶೀಲಿಸಲು ಸಂವಾದಕಾರರಾಗಿ ಗುಪ್ತಚರ ಮಾಹಿತಿ ಇಲಾಖೆಯ ಮುಖ್ಯಸ್ಥರಾಗಿದ್ದ ದಿನೇಶ್ವರ ಶರ್ಮ ಅವರನ್ನು ನೇಮಿಸಲಾಗಿದೆ ಎಂಬ ಸುದ್ದಿ ಬಂದಿತ್ತು. ಈ ಬಗ್ಗೆ ಸರಕಾರದ ಕಡೆಯಿಂದ ಕೆಲವು ಗೊಂದಲದ ಹೇಳಿಕೆಗಳೂ ಬಂದರೂ ಈ ಹಿನ್ನೆಲೆಯಲ್ಲಿಯೇ ಕೇಂದ್ರ ಸರಕಾರ ಕಲಮು 35ಎ ಕುರಿತ ಅರ್ಜಿಯ ವಿಚಾರಣೆಯನ್ನು ಸದ್ಯಕ್ಕೆ ತಡೆ ಹಿಡಿಯಬೇಕೆಂದು ಸುಪ್ರಿಂ ಕೋರ್ಟಿನಲ್ಲಿ ಮನವಿ ಮಾಡಿತ್ತು.

ಈ ನಡುವೆ ಪ್ರಧಾನಿಗಳು ಕೂಡ ಸೇರಿದಂತೆ ಸರಕಾರದ ಮುಖಂಡರು ಜಮ್ಮು ಮತ್ತು ಕಾಶ್ಮೀರಕ್ಕೆ 'ಸ್ವಾಯತ್ತತೆ ಎಂದರೆ 'ರಾಷ್ಟ್ರೀಯ ವಿಘಟನೆಗೆ ಪ್ರೋತ್ಸಾಹ" ಎಂದು ಹೇಳಿರುವುದು ಆಶ್ಚರ್ಯದ ಸಂಗತಿ ಎಂದು ಜಮ್ಮು ಮತ್ತು ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡರು ಮತ್ತು ಶಾಸಕರೂ ಆದ ಮಹಮ್ಮದ್ ಯೂಸುಫ್ ತರಿಗಾಮಿ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯು ಅಡಿಯಲ್ಲಿ ಕೊಟ್ಟಿರುವ ಸ್ವಾಯತ್ತತೆ ಈ ರಾಜ್ಯ ಮತ್ತು ಕೇಂದ್ರದ ನಡುವಿನ ಸಂಬಂಧಗಳ ಮೂಲ ಆಧಾರ. ಇದರಲ್ಲಿ ಮತ್ತು 35ಎ ವಿಧಿಯಲ್ಲಿ ಕೈಯಾಡಿಸುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

1953ರ ನಂತರ ಕೇಂದ್ರೀಕರಣದ ಮತ್ತು ಸ್ವಾ-ಯತ್ತತೆಯ ಹರಣದ ಪ್ರಕ್ರಿಯೆ ಆರಂಭವಾಯಿತು. 370ನೇ ಕಲಮನ್ನು ಬಳಸಿಕೊಂಡೇ 'ಸಂವಿಧಾನ ಆದೇಶ' ಎಂಬ ಹೆಸರಿನಲ್ಲಿ ಸ್ವಾಯತ್ತತೆಯನ್ನು ಬುಡಮೇಲು ಮಾಡಲಾಗುತ್ತಿದೆ. ಇದರಡಿಯಲ್ಲಿ ಇದುವರೆಗೆ 43 ಆದೇಶಗಳು ಬಂದಿವೆ, ಈ ಮೂಲಕ ಈಗ ಎಂತಹ ಸನ್ನಿವೇಶ ನಿರ್ಮಾಣವಾಗಿದೆಯೆಂದರೆ ಜಮ್ಮು ಮತ್ತು ಕಾಶ್ಮೀರ ಈಗ ವಿಶೇಷ ಸ್ಥಾನಮಾನವನ್ನು ಹೊಂದಿರುವ ಬದಲು ಬೇರೆ ರಾಜ್ಯಗಳು ಹೊಂದಿರುವ ಹಕ್ಕುಗಳು ಮತ್ತು ಅಧಿಕಾರದಿಂದಲೂ ವಂಚಿತವಾಗಿದೆ ಎಂದು ತರಿಗಾಮಿ ಖೇದ ವ್ಯಕ್ತಪಡಿಸಿದ್ದಾರೆ.

ಇದು ಕೇಂದ್ರದೊಡನೆ ಸಂಬಂಧಗಳನ್ನು ಬುಡಮೇಲು ಮಾಡ ಬಯಸುವ ಶಕ್ತಿಗಳಿಗೆ ಪ್ರೋತ್ಸಾಹ ನೀಡಿದ್ದರೆ, ಇನ್ನೊಂದೆಡೆಯಲ್ಲಿ ಜನಗಳಲ್ಲಿ ಪರಕೀಯ ಭಾವವನ್ನು ಆಳಗೊಳಿಸಿ ಹಿಂದೆಂದೂ ಕಾಣದಂತಹ ಅಸಂತೃಪ್ತಿಯನ್ನು ಉಂಟುಮಾಡಿದೆ ಎಂಬುದು ಈಗಿನ ವಾಸ್ತವ.

"ಸ್ವಾಯತ್ತತೆ ಜಮ್ಮು ಮತ್ತು ಕಾಶ್ಮೀರ ಪ್ರಶ್ನೆಯ ಸಾರಸತ್ವ, ಅದನ್ನು ಮರುಸ್ಥಾಪಿಸಲೇಬೇಕು ಮತ್ತು ಈ ಪ್ರದೇಶದ ಜನತೆಗೆ ಇನ್ನು ಮುಂದೆ ಅವರ ವಿಶಿಷ್ಟ ಅಸ್ಮಿತೆಯನ್ನು ಯಾವುದೇ ಸ್ವರೂಪದಲ್ಲಿ ದುರ್ಬಲಗೊಳಿಸಲು ಆಗದು ಎಂಬ ಭರವಸೆ ಕೊಡಬೇಕು. ಈ ರಾಜಕೀಯ ಪ್ರಶ್ನೆಯನ್ನು ಎದುರಿಸಿದರೆ ಮಾತ್ರವೇ ಸಂವಾದ ಪ್ರಕ್ರಿಯೆ ಅರ್ಥಪೂರ್ಣವಾಗಲು ಸಾಧ್ಯ" ಎಂದು ಅವರು ಒತ್ತಿ ಹೇಳಿದ್ದಾರೆ.

ಗುಜರಾತ್: ಚುನಾವಣೆ ಘೋಷಣೆಯ ನಂತರದ ಮೊದಲ ಪೋಲೀಸ್ ಹಿಂಸಾಚಾರದಲ್ಲಿ ಇಬ್ಬರ ಸಾವು

ಕೊನೆಗೂ ಮುಖ್ಯ ಚುನಾವಣಾ ಆಯುಕ್ತರು ಗುಜರಾತ್ ವಿಧಾನಸಭೆಗೆ ಚುನಾವಣೆ ಘೋಷಿಸಿದ್ದಾರೆ. ಆ ಸುದ್ದಿಯ ಬೆನ್ನಲ್ಲೇ ಇಬ್ಬರು ಆದಿವಾಸಿ ಜನಗಳ ಸಾವಿನ ಸುದ್ದಿಯೂ ಬಂದಿದೆ. ಇವರಲ್ಲಿ ಒಬ್ಬರು ಪೋಲಿಸ್ 'ವಿಚಾರಣೆ'ಯ ನಂತರ ಮನೆಗೆ ಮರಳು ತ್ತಿದ್ದಂತೆಯೇ ಸಾವನ್ನಪ್ಪಿದರೆ, ಮತ್ತೊಬ್ಬರು ಪೋಲಿಸ್ ಗೋಲೀಬಾರಿಗೆ ಬಲಿಯಾಗಿದ್ದಾರೆ.

ದಹೊಡ್ ಜಿಲ್ಲೆಯ ಚಿಲಕೊಟದಲ್ಲಿ ಢಕಾಯಿತಿ ಕೇಸಿನಲ್ಲಿ ಸ್ಥಳೀಯ ವಿಶೇಷ ಪೋಲೀಸರು ಹುಡುಕುತ್ತಿದ್ದವ ಸಿಗದ್ದರಿಂದ ಆತನ ತಮ್ಮ ಕನೇಶ್ ಗಮರನನ್ನು, ಆತ ನಿರಪರಾಧಿ ಎಂದು ಗೊತ್ತಿದ್ದರೂ ಠಾಣೆಗೆ 'ವಿಚಾರಣೆ'ಗೆ ಒಯ್ದರು. ಆ 'ವಿಚಾರಣೆ' ಎಷ್ಟು ಬಲವಾಗಿತ್ತೆಂದರೆ, ಅದು ಮುಗಿದು ಆತ ಮನೆಗೆ ಹಿಂದಿರುಗಿದ ಸ್ವಲ್ಪ ಸಮಯದಲ್ಲೇ ಸಾವನ್ನಪ್ಪಿದ. ಕ್ರುದ್ಧರಾದ ಹಳ್ಳಿಯ ಜನ ಕನೇಶನ ಶವ ಹಿಡಿದುಕೊಂಡೇ ಪೋಲೀಸ್ ಠಾಣೆಗೆ ಹೋಗಿ ವಿಚಾರಣೆ ನಡೆಸಿದ ಪೋಲಿಸರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ಅವರ ಬೇಡಿಕೆಗೆ ಕಿವಿಗೊಡಲು ಪೋಲೀಸರು ನಿರಾಕರಿಸಿದರು. ಕ್ರುದ್ಧಗೊಂಡಿದ್ದ ಜನ ಪೋಲಿಸ್ ಠಾಣೆಗೆ ಮುತ್ತಿಗೆ ಹಾಕಿದರು. ಪೋಲಿಸರು 'ಆತ್ಮರಕ್ಷಣೆ'ಯಲ್ಲಿ ಗೋಲೀಬಾರ್ ನಡೆಸಿದರು. ಪಕ್ಕದ ಹಳ್ಳಿಯ 45 ವರ್ಷದ ರೈತ ರಮ್ಸು ಮೋಹನಿಯ ಗುಂಡು ತಗಲಿ ಸಾವನ್ನಪ್ಪಿದ. ಆತ ಪ್ರತಿಭಟನೆಗೆ ಬಂದ ವ್ಯಕ್ತಿಯಾಗಿರಲಿಲ್ಲ ಎನ್ನಲಾಗಿದೆ.

ಈ ಘಟನೆ ಚುನಾವಣಾ ಸನ್ನಿವೇಶದಲ್ಲಿರುವ ಈ ರಾಜ್ಯದಲ್ಲಿ ಆಳುವ ಪಕ್ಷದ ವಿರುದ್ಧ ವ್ಯಾಪಕ ಆಕ್ರೋಶವನ್ನು ಉಂಟು ಮಾಡಿದೆ ಎಂದು ವರದಿಯಾಗಿದೆ. ಈ ಪ್ರದೇಶದ ಆದಿವಾಸಿ ಜನಗಳು ಈ ಮೊದಲು ದಶಕಗಳ ಕಾಲ ಕಾಂಗ್ರೆಸ್‌ಗೆ ಮತ ಹಾಕುತ್ತಿದ್ದವರು. ಆದರೆ ಮೋದಿಯವರು ಅವರನ್ನು ಬಿಜೆಪಿಗೆ ಗೆದ್ದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಈಗ ಈ ಘಟನೆ ಈಗಾಗಲೇ ಆಳುವ ಪಕ್ಷದ ಬಗ್ಗೆ ಭ್ರಮನಿರಸನಗೊಂಡಿರುವ ರಾಜ್ಯದಲ್ಲಿ ಬಹಳಷ್ಟು ಆಕ್ರೋಶ ಉಂಟು ಮಾಡಿದ್ದರೂ ಮೋದಿಯವರು ಕೊನೆ ಗಳಿಗೆಯಲ್ಲಿ ಏನಾದರೂ ತಂತ್ರ ಹೂಡಿ ಅದನ್ನು ಶಮನ ಮಾಡುತ್ತಾರೆ ಎಂಬುದು ಆಳುವ ಪಕ್ಷದ ನಿರೀಕ್ಷೆಯಂತೆ.

ರಾಜಸ್ತಾನ ಬಿಜೆಪಿ ಸರಕಾರ-ಕ್ಕೆ ಕರಾಳ ಸುಗ್ರೀವಾಜ್ಞೆ ಮೇಲೆ ಹೈಕೋರ್ಟ್ ನೋಟೀಸ್

ಇತ್ತೀಚೆಗೆ ಭ್ರಷ್ಟಾಚಾರದ ವಿರುದ್ಧ ಬಿಜೆಪಿಯ ಹೋರಾಟ ಎಷ್ಟು ಟೊಳ್ಳು ಎಂಬುದನ್ನು ಸ್ಪಷ್ಟಗೊಳಿಸಿರುವ ರಾಜಸ್ತಾನದ ಕ್ರಿಮಿನಲ್ ಕಾನೂನುಗಳು(ರಾಜಸ್ತಾನ ತಿದ್ದುಪಡಿ) ಸುಗ್ರೀವಾಜ್ಞೆ 2017 ಕುರಿತಂತೆ ರಾಜಸ್ತಾನ ಹೈಕೋರ್ಟ್ ರಾಜಸ್ತಾನ ಸರಕಾರ ಮತ್ತು ಕೇಂದ್ರ ಸರಕಾರಕ್ಕೆ ನೋಟೀಸ್‌ಗಳನ್ನು ಜಾರಿ ಮಾಡಿದೆ.

ಸರಕಾರದ ಪೂರ್ವಾನುಮತಿಯಿಲ್ಲದೆ ಹಾಲಿ ಮತ್ತು ನಿವೃತ್ತ ನ್ಯಾಯಾಧೀಶರುಗಳು, ಮ್ಯಾಜಿಸ್ಟ್ರೇಟ್‌ಗಳು ಮತ್ತು ಇತರ ಸಾರ್ವಜನಿಕ ಸೇವಕರು ತಮ್ಮ ಅಧಿಕಾರ ಬಳಸಿಕೊಂಡು ನಡೆಸುವ ಕೃತ್ಯಗಳ ತನಿಖೆ ಮಾಡುವುದನ್ನು ಈ ಸುಗ್ರೀವಾಜ್ಞೆ ನಿಷೇಧಿಸಿದೆ. ಸರಕಾರದ ಮಂಜೂರಾತಿ ಪಡೆಯುವವ ವರೆಗೆ ಅಕೃತ್ಯಗಳ ಆಪಾದನೆಗಳ ಬಗ್ಗೆ ವರದಿ ಮಾಡುವುದನ್ನೂ ಈ ಸುಗ್ರೀವಾಜ್ಞೆ ನಿಷೇಧಿಸಿದೆ. ಮಾಧ್ಯಮಗಳಲ್ಲಿ ಅಧಿಕಾರಸ್ಥರ ಭ್ರಷ್ಟ ನಡವಳಿಕೆಗಳ ಬಗ್ಗೆ ವಿಚಾರ-ವಿಮರ್ಶೆ ನಡೆಯದಂತೆ ಮಾಡುವುದೇ ಈ ಸರ್ವಾಧಿಕಾರಶಾಹಿ ಆದೇಶದ ಉದ್ದೇಶ ಎಂಬುದು ಸಪ್ಟಂಬರ್ ತಿಂಗಳಲ್ಲಿ ಇದನ್ನು ಗುಪ್ತವಾಗಿ ಹೊರಡಿಸಿದ್ದೇ ಮೊದಲ ಸಾಕ್ಷಿ. ಕಳೆದ ವಾರ ಇದನ್ನು ವಿಧಾನಸಭೆಯಲ್ಲಿ ಮಂಡಿಸಿದಾಗ ವ್ಯಕ್ತವಾದ ಬಲವಾದ ವಿರೋಧದಿಂದಾಗಿ ಅದೀಗ ಸೆಲೆಕ್ಟ್ ಕಮಿಟಿಗೆ ಹೋಗಿದ್ದರೂ, ಸುಗ್ರೀವಾಜ್ಞೆ ಈಗಲೂ ಜಾರಿಯಲ್ಲಿದೆ.

ಈ ಹಿನ್ನೆಲೆಯಲ್ಲಿ ಇದರ ವಿರುದ್ಧ ಏಳು ರಿಟ್ ಅರ್ಜಿಗಳು ಮತ್ತು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಹೈಕೋರ್ಟ್ ಮುಂದೆ ದಾಖಲಾಗಿವೆ. ಹೈಕೋರ್ಟ್ ಇವನ್ನೆಲ್ಲ ಒಟ್ಟಾಗಿ ತೆಗೆದುಕೊಳ್ಳಲು ನಿರ್ಧರಿಸಿ ನೋಟೀಸ್ ಕಳಿಸಿರುವುದು ಸರಕಾರಕ್ಕೆ ಒಂದು ದೊಡ್ಡ ಹೊಡೆತ ಎಂದು ವೀಕ್ಷಕರು ಹೇಳುತ್ತಿದ್ದಾರೆ.

ಈ ಅರ್ಜಿಗಳು ಮುಖ್ಯವಾಗಿ ಸಂವಿಧಾನದ ಕಲಮು 14, ಅಂದರೆ ಕಾನೂನಿನ ಎದುರು ಸಮಾನತೆಯ ಹಕ್ಕು ಮತ್ತು ಕಲಮು 19, ಅಂದರೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಇವೆರಡರ ಮೇಲೆ ಆಧರಿಸಿವೆ ಎಂದು ವರದಿಯಾಗಿದೆ.

ಜನಪದ ಕಲಾವಿದರ 'ಕಟ್‌ಪುತ್ಲಿ ಕಾಲನಿ' ಧ್ವಂಸ



ದಿಲ್ಲಿಯಲ್ಲಿ ಸುಮಾರು 3500 ಕುಟುಂಬಗಳು ವಾಸವಾಗಿರುವ 'ಕಟ್‌ಪುತ್ಲಿ ಕಾಲನಿ'ಯ 70 ವರ್ಷ ಹಳೆಯ ಗೋಡೆಯನ್ನು ಜಲಫಿರಂಗಿ, ಅಶ್ರುವಾಯು ಸಜ್ಜಿತ ಪೋಲೀಸರು ಅಕ್ಟೋಬರ್ 30ರಂದು ಕೆಡವಿ ಹಾಕಿದ್ದಾರೆ. ಇದರಿಂದಾಗಿ ನಡುಗುವ ಚಳಿ ಆವರಿಸಿಕೊಳ್ಳುತ್ತಿರುವ ಸಮಯದಲ್ಲಿ ನೂರಾರು ಮಂದಿ ಬೀದಿ ಪಾಲಾಗಿದ್ದಾರೆ. ಇದನ್ನು ಪ್ರತಿಭಟಿಸುತ್ತಿದ್ದವರ ಮೇಲೆ ಪೋಲೀಸರು ಹಲ್ಲೆ ಮಾಡಿದ್ದಾರೆ. ಇದರಲ್ಲಿ ಹಿರಿಯ ಸಿಪಿಐ ಮುಖಂಡರಾದ ಅನಿ ರಾಜ ಸೇರಿದಂತೆ ಹಲವರು ಗಾಯಗೊಂಡಿದ್ದಾರೆ. ಈ ದಮನ ಚಕ್ರವನ್ನು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ಇದೊಂದು ಅತ್ಯಂತ ಅಮಾನುಷ ಕ್ರಮ ಎಂದು ಅದು ಹೇಳಿದೆ. ಇಲ್ಲಿಯ ನಿವಾಸಿಗಳೊಂದಿಗೆ ಪರಿಣಾಮಕಾರಿ ಸಂವಾದ ನಡೆಸಬೇಕು ಮತ್ತು ಜನರಿಗಾದ ನಷ್ಟಗಳನ್ನು ತುಂಬಿಕೊಡುವ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಇದು ವಾಸ್ತವವಾಗಿ ಒಂದು ಜನಪದ ಕಲೆಯ ಕಂಪು ಸೂಸುತ್ತಿದ್ದ ಸ್ಥಳ. ಕಟ್‌ಪುತಿಲಿ ಎಂದರೆ ಗೊಂಬೆಯಾಟದ ಗೊಂಬೆಗಳು. ಇಲ್ಲಿ ಗೊಂಬೆಯಾಟದವರು, ಗಾರುಡಿಗರು, ದೊಂಬರಾಟದವರು, ಜನಪದ ನೃತ್ಯ ಮತ್ತು ಹಾಡುಗಾರರು ತುಂಬಿದ್ದ ಕಾಲನಿ. ಹಲವಾರು ಜಾಗತಿಕ ಮಟ್ಟದ ಕಲಾವಿದರನ್ನು ಕೊಟ್ಟಿರುವ ಕಾಲನಿ.

ಹಿಮಾಚಲ ಪ್ರದೇಶದಲ್ಲಿ 14 ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧೆ



ಹಿಮಾಚಲ ಪ್ರದೇಶದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) 14 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಇಲ್ಲಿ ಈಗ ಕಾಂಗ್ರೆಸ್ ಸರಕಾರವಿದೆ. ಹಿಂದೆ ಬಿಜೆಪಿ ಸರಕಾರವಿತ್ತು. ಆದರೂ ಕೇಂದ್ರ ಸರಕಾರದ ಸತತ ಉಪೇಕ್ಷೆಗೆ ಗುರಿಯಾಗಿರುವ ಈ ಪರ್ವತಮಯ ರಾಜ್ಯದ ಚುನಾವಣೆಯಲ್ಲಿ ಭ್ರಷ್ಟ ಕಾಂಗ್ರೆಸ್‌ನ್ನು ಮತ್ತು ಕೋಮುವಾದಿ ಬಿಜೆಪಿಯನ್ನು ತಿರಸ್ಕರಿಸಿ, ಏಕೈಕ ಪರ್ಯಾಯವಾದ ಎಡಪಕ್ಷಗಳಿಗೆ ಮತನೀಡಿ ಎಂದು ಸಿಪಿಐ(ಎಂ) ಮತದಾರರಿಗೆ ಮನವಿ ಮಾಡಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ ಇಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುತ್ತಿದ್ದಾರೆ.

ನವೆಂಬರ್ 20 : ಕಿಸಾನ ಸಂಸತ್ ಗೆ ಮುನ್ನಡೆಯಿರಿ



ಡಾ॥ ಎಂ. ಎಸ್. ಸ್ವಾಮಿನಾಥನ್ ವರದಿ ಅನ್ವಯ ಎಲ್ಲಾ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಪಡಿಸಿ, ಇದಕ್ಕೆ ಕಾನೂನಿನ ಸ್ವರೂಪವನ್ನು ನೀಡಲು ಹಾಗೂ ರೈತರು, ಕೃಷಿ ಕಾರ್ಮಿಕರು ಮತ್ತಿತರ ಕಸಬುದಾರರನ್ನು ಎಲ್ಲಾ ಸಾಲಗಳಿಂದ ಸಂಪೂರ್ಣ ಮುಕ್ತಿ ಮಾಡಿ, ಮತ್ತೆ ಸಾಲದ ಬಲೆಗೆ ಸಿಲುಕಲಾಗದ ರೀತಿಯ ವ್ಯವಸ್ಥೆಯನ್ನು ರೂಪಿಸಲು ಅಗತ್ಯವಿರುವ ಕರಡು ಮಸೂದೆಗಳನ್ನು ತಯಾರಿಸಲು ನವೆಂಬರ್ 20, 2017 ರಿಂದ ನವ ದೆಹಲಿಯ "ಸಂಸತ್ ಮಾರ್ಗ್" ದಲ್ಲಿ "ರೈತರ ಪರ್ಯಾಯ ಸಂಸತ್"ನ್ನು ಸಂಘಟಿಸಲಾಗುತ್ತಿದೆ. ಹೀಗೆ ರೂಪಿಸಲಾಗುವ ಕರಡು ಮಸೂದೆಗಳನ್ನು 'ಮಾನ್ಯ ಪ್ರಧಾನ ಮಂತ್ರಿ' ಗಳಿಗೆ ಸಲ್ಲಿಸಿ ಇದೇ 'ಚಳಿಗಾಲದ ಸಂಸತ್ ಅಧಿವೇಶ' ನದಲ್ಲಿ ಅಂಗೀಕಾರ ಮಾಡಬೇಕೆಂದು ಒತ್ತಾಯಿಸಲಾಗುತ್ತಿದೆ.

ಸುಮಾರು 170 ರೈತ ಮತ್ತು ರೈತಪರ ಸಂಘಟನೆಗಳನ್ನು ಒಳಗೊಂಡ ರಚನೆಗೊಂಡಿರುವ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎಐಕೆಎಸ್ಸಿಸಿ) ಆಶ್ರಯದಲ್ಲಿ ನಡೆಯಲಿರುವ ಈ 'ರೈತರ ಪರ್ಯಾಯ ಸಂಸತ್' ನಲ್ಲಿ ಲಕ್ಷಾಂತರ ರೈತರು ಭಾಗವಹಿಸುತ್ತಿದ್ದು ರಾಜ್ಯದಿಂದ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ರೈತರು ಹಾಗು ಕೃಷಿ ಕಾರ್ಮಿಕರು ಪಾಲ್ಗೊಳ್ಳಲು ಸಿದ್ದತೆಗಳನ್ನು ಮಾಡಲಾಗುತ್ತಿದೆ. ಈ ರೈತಪರ ಹೋರಾಟದಲ್ಲಿ ರೈತರು, ಕೃಷಿ ಕಾರ್ಮಿಕರು ಹಾಗು ಗ್ರಾಮೀಣ ಬಡವರು ಪಕ್ಷಾತೀತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ-ಕರ್ನಾಟಕ ವಿನಂತಿಸಿದೆ

'ಉತ್ಪಾದನಾ ವೆಚ್ಚವನ್ನು ಸರಿಯಾಗಿ ಲೆಕ್ಕ ಹಾಕಿ, ಅದರ ಮೇಲೆ ಶೇ 50 ರಷ್ಟು ಲಾಭವನ್ನು ಸೇರಿದೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕೆನ್ನುವ ಡಾ॥ ಎಂ. ಎಸ್. ಸ್ವಾಮಿನಾಥನ್ ವರದಿಯನ್ನು ಕಾಂಗ್ರೆ ನಾಯಕತ್ವದ ಯುಪಿಎ ಸರ್ಕಾರ ಜಾರಿ ಮಾಡಲಿಲ್ಲವೆಂದು, ತಾನು ಅಧಿಕಾರಕ್ಕೆ ಬಂದರೆ ಕೂಡಲೇ ಜಾರಿ ಮಾಡುತ್ತೇವೆಂದು ಕಳೆದ ಲೋಕಸಭಾ ಚುನಾವಣಾಗಳ ನೂರಾರು ಪ್ರಚಾರ ಸಭೆಗಳಲ್ಲಿ ಶ್ರೀ ನರೇಂದ್ರ ಮೋದಿಯವರು ಭರವಸೆ ನೀಡಿದ್ದರು. ಆದರೆ ಅಧಿಕಾರಕ್ಕೆ ಬಂದು ಪ್ರಧಾನ ಮಂತ್ರಿಗಳಾದ ಮೇಲೆ ಸಾಧ್ಯವಿಲ್ಲವೆಂದು ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ. ಇದನ್ನು ಕೂಡಲೇ ವಾಪಸು ಪಡೆದು ತಾವೇ ಭರವಸೆ ನೀಡಿದಂತೆ ಡಾ॥ ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು ಹಾಗೂ ಸಾಲದಿಂದ ರೈತರಿಗೆ ಸಂಪೂರ್ಣ ಮುಕ್ತಿ ಸಿಗಬೇಕೆಂದು ಒತ್ತಾಯಿಸಿ ಹೋರಾಟಗಳ ನಡೆಯುವ ಸಂದರ್ಭದಲ್ಲಿ ಮಧ್ಯಪ್ರದೇಶದಲ್ಲಿ ಪೊಲೀಸ್ ಗೋಲಿಬಾರ್‌ನಲ್ಲಿ ಆರು ರೈತರನ್ನು ಕೊಲೆ ಮಾಡಲಾಯಿತು. ಮಹಾರಾಷ್ಟ್ರ ಮತ್ತಿತರೆ ಕಡೆಗಳಲ್ಲಿ ಈ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಗಳನ್ನು ಬಿಜೆಪಿ ರಾಜ್ಯ ಸರ್ಕಾರಗಳು ನಡೆಸುತ್ತಿವೆ.

ಈ ಬಗ್ಗೆ ಪ್ರಧಾನ ಮಂತ್ರಿಗಳು ಮೌನವನ್ನು ತಾಳಿದ್ದಾರೆ. ಈ ಹಿನ್ನೆಲೆಯಲ್ಲಿ ದೇಶ ವ್ಯಾಪ್ತಿಯ ಸುಮಾರು 170 ಸಂಘಟನೆಗಳು ಒಂದುಗೂಡಿ "ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ"ಯನ್ನು ರಚಿಸಿಕೊಂಡು "ಬೆಂಬಲ ಬೆಲೆ" ಮತ್ತು "ಸಾಲದಿಂದ ಮುಕ್ತಿ" ಬೇಡಿಕೆಗಳ ಇತ್ಯಾರ್ಥಕ್ಕೆ ಒತ್ತಾಯಿಸಿ ದೇಶದ್ಯಂತ "ಕಿಸಾನ್ ಮುಕ್ತಿ ಯಾತ್ರಾ" ವನ್ನು ಸಂಘಟಿಸಿ ಈ 'ರೈತರ ಪರ್ಯಾಯ ಸಂಸತ್ತ'ನ್ನು ಸಂಘಟಿಸಲಾಗುತ್ತಿದೆ.

ಕೇಂದ್ರ ಸರ್ಕಾರ ಸೂಕ್ತ ರೀತಿಯಲ್ಲಿ ಸ್ಪಂದಿಸದಿದ್ದರೆ ಈ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವ ಬಗ್ಗೆ ಸಹ "ರೈತರು ಪರ್ಯಾಯ ಸಂಸತ್ತ"ನಲ್ಲಿ ತೀರ್ಮಾನಿಸಲಾಗುವುದು.

ಈ ಎಲ್ಲಾ ಹೋರಾಟಗಳಿಗೆ ರಾಜ್ಯದ ರೈತರು, ಕೃಷಿ ಕಾರ್ಮಿಕರು ಹಾಗೂ ಕಸಬುದಾರರು ದೊಡ್ಡ ರೀತಿಯಲ್ಲಿ ಬೆಂಬಲ ನೀಡಿ, ಭಾಗವಹಿಸಬೇಕೆಂದು ವಿವಿಧ ರೈತ-ಕೃಷಿ ಕೂಲಿಕಾರರ ಸಂಘಟನೆಗಳ ಮತ್ತು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ-ಕರ್ನಾಟಕ ನಾಯಕರುಗಳಾದ ಕೆ.ಟಿ. ಗಂಗಾಧರ್, ಕೋಡಿಹಳ್ಳಿ ಚಂದ್ರಶೇಖರ್, ಜೆ.ಸಿ. ಬಯ್ಯಾರೆಡ್ಡಿ, ಕವಿತಾ ಕುರುಗಂಟಿ, ಚಂದ್ರಪ್ಪ ಹೋಸ್ಕೇರಾ ಮತ್ತು ಹೆಚ್.ವಿ. ದಿವಾಕರ್ ಕರೆ ಕೊಟ್ಟಿದ್ದಾರೆ.

'ಚಿರಸ್ಮರಣೆ ಓದೋಣ ಕಯ್ಯೂರಿಗೆ ಹೋಗೋಣ'-ವಿಶಿಷ್ಟ ಅಭಿಯಾನ

"ಹೊ ಸಕಾಲದ ಸವಾಲುಗಳಿಗೆ, ಗತಕಾಲದ ಸ್ಪೂರ್ತಿ; ಕಯ್ಯೂರಿಗೆ_ಪಯಣ" ಎಂಬ ಗುರಿಯೊಂದಿಗೆ "ಚಿರಸ್ಮರಣೆ ಓದೋಣ ಕಯ್ಯೂರಿಗೆ ಹೋಗೋಣ" ಎಂಬ ಅಭಿಯಾನವನ್ನು ಡಿ.ವೈ.ಎಫ್.ಐ, ಮತ್ತು ಅದರ ಜನಪ್ರಿಯ ನಾಯಕರಾದ ಮುನೀರ್ ಕಾಟಿಪಳ್ಳ ಅವರ ಮುತುವರ್ಜಿಯಿಂದ ಆರಂಭವಾಯಿತು. ಒಂದು ಚಾರಿತ್ರಿಕ ಘಟನೆ, ಒಂದು ಸಾಹಿತ್ಯ ಕೃತಿ, ಇಂದಿನ ಸವಾಲುಗಳ ಬೆಳಕಿನಲ್ಲಿ ಅದರ ಓದು, ಆ ಚಾರಿತ್ರಿಕ ಸ್ಥಳಕ್ಕೆ ಪ್ರಯಾಣ – ಇವೆಲ್ಲವನ್ನೂ ಒಳಗೊಂಡಿರುವ ಇದೊಂದು ವಿಶಿಷ್ಟ ಅಭಿಯಾನ. ಬಹುಶ: ಇಂತಹುದೊಂದು ಕರ್ನಾಟಕದಲ್ಲಂತೂ ನಡೆದಿಲ್ಲ ಇತ್ತೀಚಿನ ದಶಕಗಳಲ್ಲಿ.



ಸಾಮಾಜಿಕ ಮಾಧ್ಯಮಗಳ ಮೂಲಕವೇ ಪ್ರಚಾರ ಪಡೆದು ಹಬ್ಬಿದ ಈ ಅಭಿಯಾನಕ್ಕೆ ನಿರೀಕ್ಷೆ ಮೀರಿ ಪ್ರತಿಕ್ರಿಯೆ ಬಂದಿದೆ. ನವೆಂಬರ್ 11ರಂದು ನಿಗದಿ ಪಡಿಸಲಾದ ಕಯ್ಯೂರಿಗೆ ಪ್ರಯಾಣಕ್ಕೆ ಬರುವವರು ನವಂಬರ್ 1 ರ ಒಳಗಡೆ ಹೆಸರು ನೊಂದಾಯಿಸಬೇಕೆಂದು ವಿನಂತಿಸಿ, ಮೂರೇ ದಿನಕ್ಕೆ ನಿಗದಿ ಪಡಿಸಿದ ಸಂಖ್ಯೆ ದಾಟಿದೆ. ಆ ಕಾರಣ ಹಲವು ಆಸಕ್ತರಿಗೆ ಅನಿವಾರ್ಯವಾಗಿ ಪ್ರವಾಸ ತಂಡಕ್ಕೆ ಸೇರಲು ಸಾಧ್ಯವಾಗಿಲ್ಲ. ಮುಂದಕ್ಕೆ ಇನ್ನೊಂದು ಕಯ್ಯೂರು ಪ್ರವಾಸ ಏರ್ಪಡಿಸಲಾಗುವುದಂತೆ. ಪುಸ್ತಕ ಓದಿದ ಯುವಕ-ಯುವತಿಯರ ಸ್ಪೂರ್ತಿದಾಯಕ ಹೇಳಿಕೆಗಳು ಸಹ ಗಮನಾರ್ಹ ಮತ್ತು ಅರ್ಥಪೂರ್ಣ. ಯಾರೂ, ಅದರಲ್ಲೂ ಯುವಕ-ಯುವತಿಯರೂ ಓದುತ್ತಿಲ್ಲ ಎಂದು ದೂರು ಹೇಳುವ ಎಲ್ಲರಿಗೂ ಇದು ಕಣ್ಣು ತೆರೆಸುವ ವಿದ್ಯಮಾನ. ಅವರು ಓದುತ್ತಿಲ್ಲವೋ ಅಥವಾ ಅವರು ಓದುವಂತೆ ಮಾಡುವ ಪರಿಸರ ಮೂಡಿಸುವ ಪ್ರಯತ್ನ ಇಲ್ಲವೋ ಎಂಬ ಪ್ರಶ್ನೆ ಎಬ್ಬಿಸಿದೆ. ಓದಿಸಲು ಸಾಧ್ಯ ಎಂಬ ಭರವಸೆಯನ್ನೂ ಮೂಡಿಸಿದೆ.

ಇನ್ನೊಂದೆಡೆ ಈ ಅಭಿಯಾನದಿಂದಾಗಿ ಚಿರಸ್ಮರಣೆ ಓದುವವರ ಸಂಖ್ಯೆ ದಿಢೀರ್ ಏರಿಕೆ ಕಂಡಿದೆ. ಪುಸ್ತಕದಂಗಡಿಗಳಲ್ಲಿ ಅಳಿದುಳಿದ ಪುಸ್ತಕಗಳು ಮುಗಿದು ಹಲವು ಜನ ನಿರಾಶರಾಗಿದ್ದರು. ಕೆಲವರಿಗೆ ಸ್ಕ್ಯಾನಿಂಗ್ ಪುಟಗಳನ್ನು ಮೇಲ್ ಮಾಡುವ ಮೂಲಕ ಚಿರಸ್ಮರಣೆ ಓದಿಸುವ ಯತ್ನ ಮಾಡಲಾಯಿತು. ಆದರೂ ಸಾಮಾಜಿಕ ಜಾಲತಾಣದ ಪ್ರಚಾರದಿಂದ ಚಿರಸ್ಮರಣೆಯ ಜ್ವರ ಹತ್ತಿಸಿಕೊಂಡ ಯುವಕ, ಯುವತಿಯರು ಪುಸ್ತಕದಂಗಡಿಗಳಿಗೆ ಭೇಟಿ ನೀಡುವುದು ಮುಂದುವರಿದಿದೆ. ಈ ಬೇಡಿಕೆಯನ್ನು ಮನಗಂಡು ನವ ಕರ್ನಾಟಕ ಪುಸ್ತಕ ಮಳಿಗೆಯವರು ತಮ್ಮ ಎಲ್ಲಾ ಮಳಿಗೆಗಳಿಗೆ ಚಿರಸ್ಮರಣೆಯ ಪ್ರತಿಗಳನ್ನು ಪೂರೈಸಿದ್ದಾರೆ. ಮಂಗಳೂರು ಸೇರಿದಂತೆ ಎಲ್ಲೆಡೆ ಅವರ ಮಳಿಗೆಗಳಲ್ಲಿ ಚಿರಸ್ಮರಣೆ ಪ್ರತಿಗಳು ಲಭ್ಯ ಮಾಡುತ್ತಿದ್ದಾರೆ.

ಲೇಖಕರು, ಪುಸ್ತಕ ಪ್ರಕಾಶಕರು, ಚಳುವಳಿಕಾರರು ಮತ್ತು ಎಲ್ಲಾ ಪ್ರಜ್ಞಾವಂತರೂ ಪ್ರಗತಿಪರರಿಗೆ ಇದೊಂದು ಸ್ಫೂರ್ತಿದಾಯಕ ಸುದ್ದಿ. ಇದನ್ನು ಇತರ ಕೃತಿಗಳಿಗೂ ಹಬ್ಬಿಸಲು, ಇಂತಹ ಅದ್ಭುತ ಸಾಧ್ಯತೆಯನ್ನು ಸಾಕಾರಗೊಳಿಸಲು ಒಂದು ಸವಾಲು ಸಹ.



ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು

ಕೊಪ್ಪಳ	: ನವೆಂಬರ್ 11-12, ಕೊಪ್ಪಳ.
ಬೀದರ್	: ನವೆಂವರ್ 18-19 ಹುಮನ್ನಾಬಾದ್.
ಶಿವಮೊಗ್ಗ	: ನವೆಂಬರ್ 19, ಭದ್ರಾವತಿ.
ಕೊಡಗು	: ನವೆಂಬರ್ 19-20, ಸಿದ್ದಾಪುರ.
ಬೆಂಗಳೂರು ಉತ್ತರ	: ನವೆಂಬರ್ 24-25, ಬೆಂಗಳೂರು.
ಧಾರವಾಡ	: ನವೆಂಬರ್ 25-26, ಗಜೇಂದ್ರಗಢ
ಬಿಜಾಪುರ	: ಡಿಸೆಂಬರ್ 2-3 ಬಿಜಾಪುರ.
ಬೆಂಗಳೂರು ಗ್ರಾಮಾಂತರ	: ಡಿಸೆಂಬರ್ 3, ನೆಲಮಂಗಲ.
ಗುಲ್ಬರ್ಗಾ	: ಡಿಸೆಂಬರ್ 3-5, ಕಮಲಾಪುರ.
ಬಳ್ಳಾರಿ	: ಡಿಸೆಂಬರ್ 9-10, ಕಂಪ್ಲಿ.
ತುಮಕೂರು	: ಡಿಸೆಂಬರ್ 9-10 ತುಮಕೂರು.
ಹಾಸನ	: ಡಿಸೆಂಬರ್ 9-10, ಸಕಲೇಶಪುರ.
ಚಿಕ್ಕಬಳ್ಳಾಪುರ	: ಡಿಸೆಂಬರ್ 13-14, ಗುಡಿಬಂಡೆ.
ಬೆಂಗಳೂರು ದಕ್ಷಿಣ	: ಡಿಸೆಂಬರ್ 15-17, ಬೆಂಗಳೂರು.
ಮೈಸೂರು	: ಡಿಸೆಂಬರ್ 16-17, ಹುಣಸೂರು
ದಕ್ಷಿಣ ಕನ್ನಡ	: ಡಿಸೆಂಬರ್ 17-18, ಮಂಗಳೂರು.
ಉತ್ತರ ಕನ್ನಡ	: ಡಿಸೆಂಬರ್ 17-18, ದಾಂಡೇಲಿ.
ಕೋಲಾರ	: ಡಿಸೆಂಬರ್ 22-23, ಕೋಲಾರ.
ರಾಯಚೂರು	: ಡಿಸೆಂಬರ್ 23-24, ರಾಯಚೂರು.
ದಾವಣಗೆರೆ	: ಡಿಸೆಂಬರ್ 24-25, ದಾವಣಗೆರೆ.
ಉಡುಪಿ	: ಡಿಸೆಂಬರ್ 24-26, ಬೈಂದೂರು.



ಮೊದಲ ಮಹಾಯುದ್ಧದ ಕೊನೆ

ನವೆಂಬರ್ 11, 1918



ಮೊದಲ ಮಹಾಯುದ್ಧ 28 ಜುಲೈ 1914ರಲ್ಲಿ ಆರಂಭವಾಗಿ ನಾಲ್ಕು ವರ್ಷಗಳ ಕಾಲ ನಡೆಯಿತು. 7 ಕೋಟಿ ಸೈನಿಕರು ಭಾಗವಹಿಸಿದ ಮತ್ತು ರಾಸಾಯನಿಕ ಅಸ್ತ್ರಗಳು ಬಳಸಲಾದ ಈ ಮಹಾಯುದ್ಧದಲ್ಲಿ ಸುಮಾರು 90 ಲಕ್ಷ ಸೈನಿಕರು, 70 ಲಕ್ಷ ನಾಗರಿಕರು ಮಡಿದರು. ಯುರೋಪಿನಲ್ಲಿ ಆರಂಭವಾಗಿ ಆ ಮೇಲೆ ಇಡೀ ಜಗತ್ತಿನ ಎಲ್ಲಾ ದೇಶಗಳನ್ನು ತನ್ನ ತೆಕ್ಕೆಗೆ ಸೆಳೆದುಕೊಂಡ ಈ ಯುದ್ಧ ರಶ್ಯನ್ ಕ್ರಾಂತಿ ಸೇರಿದಂತೆ ಹಲವು ಕ್ರಾಂತಿಗಳು ಮತ್ತು ಯುರೋಪಿನ ರಾಜಕೀಯ ನಕ್ಷೆ ಬದಲಾಯಿಸಿದ ಮಹತ್ತರ ರಾಜಕೀಯ ಬದಲಾವಣೆಗಳಿಗೆ ಕಾರಣವಾಯಿತು. ಲೆನಿನ್ ನಿರೂಪಿಸಿದಂತೆ ಈ ಯುದ್ಧ ಆಂಗ್ಲೋ-ಫ್ರೆಂಚ್ ಮತ್ತು ಜರ್ಮನ್ ಬಂಡವಾಳಶಾಹಿಗಳ ನಡುವೆ ಇಡೀ ಜಗತ್ತಿನ ಮೇಲೆ ಅಧಿಪತ್ಯ ನಡೆಸಲು ನಡೆದ ಸಂಘರ್ಷ. ಇಡೀ ಜಗತ್ತನ್ನು ಹರಿದು ತಮ್ಮೊಳಗೆ ಹಂಚಿಕೊಳ್ಳುವದರಲ್ಲಿ ಯಾರಿಗೆ ಎಷ್ಟು ಪಾಲು ಎಂಬ ಬಗ್ಗೆ ನಿರ್ಧರಿಸಲು ಈ ಯುದ್ಧ ನಡೆಯಿತು. ವಸಾಹತುಗಳನ್ನು ಪರಸ್ಪರ ಕಸಿದುಕೊಳ್ಳುವ ಹಂಚಿಕೊಳ್ಳುವ ಭರದಲ್ಲಿ ಇಡೀ ಜಗತ್ತನ್ನು ಈ ಮಹಾಯುದ್ಧಕ್ಕೆ ಸೆಳೆದರು. ಈ ಮಹಾಯುದ್ಧ ಕೊನೆಯಾಗುವ ಹೊತ್ತಿಗೆ ಸೋತ ಮೂರು – ಜರ್ಮನ್, ಆಸ್ಟ್ರೋ-ಹಂಗೇರಿಯನ್ ಮತ್ತು ರಶ್ಯನ್ – ಸಾಮ್ರಾಜ್ಯಗಳು ಅಳಿಸಿ ಹೋದವು. ಯುರೋಪಿನ ಹೆಚ್ಚಿನ ದೇಶಗಳ ಗಡಿಗಳು ಬದಲಾದವು. ಹಲವು ಹೊಸ ದೇಶಗಳು ಹುಟ್ಟಿಕೊಂಡವು. ಗೆದ್ದ ದೇಶಗಳು ಸೋತ ಜರ್ಮನಿಯ ಮೇಲೆ ಹೊರಿಸಿದ ಅವಮಾನಕಾರಿ ಮತ್ತು ಅಸಾಧ್ಯ ಹೊರೆಯ ಒಪ್ಪಂದ ಎರಡನೇ ಮಹಾಯುದ್ಧಕ್ಕೆ ದಾರಿ ಮಾಡಿ ಕೊಟ್ಟಿತು.

JANASHAKTHI KANNADA VARA PATRIKE November 6-12, 2017 Price: Rs. 10/- Date of Publication: 3 November 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಅಕ್ಟೋಬರ್ 30 : ರಾಜ್ಯದಾದ್ಯಂತ ಜನ ಅಧಿಕಾರ್ ಆಂದೋಲನದಿಂದ

ಐಕ್ಯತೆಯ ಪಂಜಿನ ಬೆಳಕಿನಲ್ಲಿ ಪ್ರತಿಭಟನೆಗಳು


ತೊಕ್ಕೊಟು

ಬೆಲೆ ಏರಿಕೆ ತಡೆಗಡ್ಡಲು ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲಪಡಿಸಬೇಕು, ಉದ್ಯೋಗ ಸೃಷ್ಟಿಗೆ ಕ್ರಮ ಕೈಗೊಳ್ಳಬೇಕು, ಮಾಸಿಕ ಕನಿಷ್ಟ ವೇತನ ರೂ.18,000 ನಿಗದಿಗೊಳಿಸಬೇಕು, ಸ್ವಾಮಿನಾಥನ್ ಕಮೀಷನ್ ಶಿಫಾರಸಿನಂತೆ ಬೆಳೆಯ ವೆಚ್ಚದ ಒಂದೂವರೆಪಟ್ಟು ಬೆಂಬಲ ಬೆಲೆ ನೀಡಬೇಕು, ವಿಧಾನಸಭೆ ಮತ್ತು ಪಾರ್ಲಿಮೆಂಟಿನಲ್ಲಿ ಮಹಿಳೆಯರಿಗೆ 33% ಪ್ರಾತಿನಿಧ್ಯ ನೀಡಬೇಕು, ದಲಿತರು ಮತ್ತು ಅಲ್ಪಸಂಖ್ಯಾಕರ ಮೇಲೆ ನಡೆಯುತ್ತಿರುವ ಹಿಂಸಾಚಾರ, ದೌರ್ಜನ್ಯಗಳನ್ನು ಪರಿಣಾಮಕಾರಿಯಾಗಿ ಕೊನೆಗೊಳಿಸಬೇಕು, ಕೋಮು ಹಿಂಸಾಚಾರ ತಡೆಯೊಂದಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಖಾಸಗಿತನದ ಮೂಲಭೂತ ಹಕ್ಕುಗಳ ಮೇಲೆ ದಾಳಿ ಮಾಡುವವರ ವಿರುದ್ಧ ತ್ವರಿತ ತನಿಖೆ ನಡೆಸಬೇಕು. ರೈತ ವಿರೋಧಿ ಜಾನುವಾರು ಮಾರಾಟ ನಿಷೇಧ ಕಾಯಿದೆ ಹಿಂತೆಗೆದು, ಗೋರಕ್ಷಣೆ ಹೆಸರಿನಲ್ಲಿ ದಲಿತರು ಮತ್ತು ಮುಸ್ಲಿಮರ ಮೇಲೆ ನಡೆಯುತ್ತಿರುವ ದಾಳಿ ಹಾಗೂ ಜಂಗುಳಿ ಹತ್ಯೆ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಎಲ್ಲ ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದಲ್ಲದೆ ಅವನ್ನು ಕಾರ್ಮಿಕ ವಿರೋಧಿಯಾಗಿ ಬದಲಾಯಿಸಬೇಕೆನ್ನುವ ಪ್ರಸ್ತಾಪಗಳನ್ನು ಕೈಬಿಡಬೇಕು, ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಹೂಡಿಕೆ ಹಿಂತೆಗೆತವನ್ನು ಕೈಬಿಡಬೇಕು – ಈ ಮೊದಲಾದ 26 ಹಕ್ಕೊತ್ತಾಯಗಳನ್ನು ಮುಂದಿಟ್ಟು ಜನ ಏಕತಾ ಜನ ಅಧಿಕಾರ ಆಂದೋಲನವು ದೇಶಾದ್ಯಂತ ಅಕ್ಟೋಬರ್ 30 ರಂದು ಹಮ್ಮಿಕೊಂಡಿದ್ದ ಪಂಜಿನ ಮೆರವಣಿಗೆಗಳನ್ನು ರಾಜ್ಯದಾದ್ಯಂತ ಯಶಸ್ವಿಯಾಗಿ ನಡೆಸಲಾಯಿತು. ಜನ ಏಕತಾ ಜನ ಅಧಿಕಾರ ಆಂದೋಲನದ ಭಾಗವಾಗಿರುವ ಸಿಐಟಿಯು, ಎಐಟಿಯುಸಿ, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಡಿವೈಎಫ್ಐ, ಎಸ್ಎಫ್ಐ, ಜೆಎಂಎಸ್, ದಲಿತ ಹಕ್ಕುಗಳ ಸಮಿತಿ ಮತ್ತಿತರ ದಲಿತ ಸಂಘಟನೆಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಜನ ಅಧಿಕಾರ ಆಂದೋಲನದ ಪಂಜಿನ ಮೆರವಣಿಗೆಗಳು ಮಂಗಳೂರು, ಬಂಟ್ವಾಳ, ಗುರುಪುರ, ಉಳ್ಳಾಲ, ಬೆಂಗಳೂರು, ತುಮಕೂರು, ಹೊಸಪೇಟೆ, ದಾವಣಗೆರೆ, ಜಾಲಹಳ್ಳಿ, ಅಂಕೋಲ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಕೋಲಾರ, ಹಾಸನಗಳಲ್ಲಿ ನಡೆದಿರುವ ಬಗ್ಗೆ ವರದಿಗಳು ಬಂದಿವೆ.


ದಾವಣಗೆರೆ


ಮಂಗಳೂರು


ತುಮಕೂರು


ಹರಪನಹಳ್ಳಿ


ಅಂಕೋಲ



ಹೊಸಪೇಟೆ


ಜಾಲಹಳ್ಳಿ


ಹಗರಿಬೊಮ್ಮನಹಳ್ಳಿ

ಸಿಪಿಐ(ಎಂ) ರಾಜ್ಯ ಸಮ್ಮೇಳನ ಲೊಗೊ ಬಿಡುಗಡೆ

ಸಿಪಿಐ(ಎಂ) 22ನೇ ಕರ್ನಾಟಕ ರಾಜ್ಯ ಸಮ್ಮೇಳನವು ದ.ಕ.ಜಿಲ್ಲೆಯ ಮೂಡಬಿದರೆಯಲ್ಲಿ ಜನವರಿ 2 ರಿಂದ 5 ರವರೆಗೆ ನಡೆಯಲಿದ್ದು, ಸಿದ್ಧತೆಗಳು ಪ್ರಾರಂಭಗೊಂಡಿವೆ. ಸಮ್ಮೇಳನದ ಲೊಗೊವನ್ನು ರಾಜ್ಯದ ಕಮ್ಯುನಿಸ್ಟ್ ಚಳುವಳಿಯ ಹಿರಿಯ ನೇತಾರರಾದ ಕಾಂ. ಕೆ.ಆರ್.ಶ್ರೀಯಾನ್ ರವರು ಮಂಗಳೂರಿನಲ್ಲಿ ಬಿಡುಗಡೆಗೊಳಿಸಿದರು. ಜಿಲ್ಲಾ ಕಾರ್ಯದರ್ಶಿ ಕಾಂ. ವಸಂತ ಆಚಾರಿ, ಕಾಂ.ಜೆ ಬಾಲಕೃಷ್ಣ, ಕಾಂ.ಯಾದವ ಶೆಟ್ಟಿ, ಕಾಂ. ಸುನೀಲ್ ಕುಮಾರ್ ಬಜಾಲ್ ಉಪಸ್ಥಿತರಿದ್ದರು.



JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**